"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ 29ನೇ ಮಾರ್ಚ್, 2001 ರಂದು 2001ರ ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಯಾವುದೇ ತಿದ್ದುಪಡಿ ಇಲ್ಲದೇ ಅಂಗೀಕರಿಸಿದೆ"

9. ವಿತ್ತೀಯ ಕಾರ್ಯಕಲಾಪ

2001-2002ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

5.20 ಪಿ.ಎಂ.

+ಶ್ರೀ ಹೆಚ್.ಡಿ. ಚೌಡಯ್ಯ (ಕೆರಗೋಡು): ಸನ್ಮಾನ್ಯ ಅಧ್ಯಕ್ಷರೆ, ಕೆಲವೇ ಇಲಾಖೆಗಳಿಗೆ ಸಂಬಂಧಪಟ್ಟಂತೆ ತಮ್ಮ ಹಾಗೂ ಸದನದ ಗಮನ ಸೆಳೆಯುವುದಕ್ಕೆ ಇಷ್ಟ ಪಡುತ್ತೇನೆ. ನಮ್ಮ ರಾಷ್ಟ್ರ ಹಳ್ಳಿಗಳಿಂದ ಕೂಡಿದ್ದ ರಾಷ್ಟ್ರ. ಈ ರಾಷ್ಟ್ರದಲ್ಲಿ ಏಳು ಲಕ್ಷ ಹಳ್ಳಿಗಳು ಇವೆ. ನಮ್ಮ ರಾಜ್ಯದಲ್ಲಿ 25,000 ಹಳ್ಳಿಗಳಿವೆ. ಈ ಹಳ್ಳಿಗಳ ಸರ್ವಾಂಗೀಣ ಅಭಿವೃದ್ಧಿ ಆಗಬೇಕಾಗಿದೆ ಶೇಕಡ 70 ರಷ್ಟು ಜನ ನಾವು ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದೇವೆ. ಆ ಪ್ರದೇಶದ ಅಭಿವೃದ್ಧಿ ಆದರೆ ಮಾತ್ರ ಒಟ್ಟಾರೆ ರಾಷ್ಟ್ರದ ಅಭಿವೃದ್ಧಿ ಆಗುವುದಕ್ಕೆ ಸಾಧ್ಯ. ಹಳ್ಳಿಗಳಲ್ಲಿ ಹಳ್ಳಿಗಳ ಅಭಿವೃದ್ಧಿಗೆ ಮೂಲಭೂತವಾದ ಪಂಚಾಯಿತಿ ರಾಜ್ ವ್ಯವಸ್ಥೆ ಏನಿದೆ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ವ್ಯವಸ್ಥೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಎರಡು ಲಕ್ಷ ಇರುವುದನ್ನು ಮೂರೂವರೆ ಲಕ್ಷಕ್ಕೆ ಏರಿಸಿದ್ದಾರೆ. ಇದು ಸ್ವಾಗತಾರ್ಹ. ಆದರೆ ಇವತ್ತಿನ ದಿವಸ ನಮ್ಮ ಹಳ್ಳಿಗಾಡಿನಲ್ಲಿರುವ ವಸ್ತು ಸ್ಥಿತಿ ಏನಿದೆ, ಆ ಪಂಚಾಯಿತಿಗಳ ಜವಾಬ್ದಾರಿ ಏನಿದೆ, ಅವರು ನಿರ್ವಹಿಸಬೇಕಾದ ಕರ್ತವ್ಯಗಳು ಏನು ಇವೆ, ಅದನ್ನು ಯೋಚನೆ ಮಾಡಿದ್ದೇ ಆದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇಲ್ಲ, ತಮ್ಮ ಮುಖಾಂತರ ನಾನು ಮನವಿ ಮಾಡುವುದು ಏನೆಂದರೆ ನಾಳೆ ಉತ್ತರ ಕೊಡುವ ಸಂದರ್ಭದಲ್ಲಿ ಕನಿಷ್ಟ ಐದು ಲಕ್ಷಕ್ಕಾದರೂ ಘೋಷಣೆ ಮಾಡಬೇಕೆಂದು ಹೇಳಿ ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತೇನೆ. ಹೊಸದಾಗಿ ಕೆಲವಾರು ಜವಾಬ್ದಾರಿಗಳನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಅವರ ಭಾಷಣದಲ್ಲಿ ಹೇಳಿದ್ದಾರೆ. ಪ್ರಾಥಮಿಕ ಶಾಲೆಗಳು ಮತ್ತು ಅಂಗನವಾಡಿ ಕೇಂದ್ರಗಳನ್ನು ನಿರ್ವಹಿಸತಕ್ಕಂಥದ್ದು, ಭೂ ಕಂದಾಯ ವಸೂಲಿ ಮಾಡುವುದು, ಹೀಗೆ ಕೆಲವಾರು ಜವಾಬ್ದಾರಿಗಳನ್ನೂ ಈ ಪಂಚಾಯಿತಿಗಳಿಗೆ ಕೊಡುತ್ತೇವೆಂದು ಹೇಳಿದ್ದಾರೆ, ಬಹಳ ಸಂತೋಷ. ಆದರೆ ನನ್ನ ಕಳೆದ 40-45 ವರ್ಷಗಳ ಅನುಭವ ನಿಮಗೆ ಹೇಳುವುದಾದರೆ ಇದು ಬಹಳ ಹೆಚ್ಚಿನ ಜವಾಬ್ದಾರಿ. It is too early ಎಂದು ನನಗನ್ನಿಸುತ್ತದೆ. ಆದಾಗ್ಯೂ ಕೂಡ ಮುಂದಿನ ವರ್ಷ ನಾವು ಇದನ್ನು ಮುಖ್ಯವಾಗಿ ವಿಮರ್ಶೆ ಮಾಡಿ ನೋಡಬೇಕು. ಸ್ವಚ್ಛ ಗ್ರಾಮ ಯೋಜನೆ ವಿಷಯದಲ್ಲಿ ಏನು 1,000 ಹಳ್ಳಿಗಳಲ್ಲಿ ಸ್ವಚ್ಛ ಗ್ರಾಮ ಕಾರ್ಯಕ್ರಮ ಕೈಗೊಳ್ಳುತ್ತೇವೆಂದು 2000-2001 ರಲ್ಲಿ ಹೇಳಿದ್ದರು. ಅದನ್ನೂ ಕೂಡ ಅಚೀವ್ ಮಾಡುವುದಕ್ಕಾಗಲಿಲ್ಲ. ನಾವು ಇದಕ್ಕೆ ಕಾರಣವೇನೆಂದು ಯೋಚನೆ ಮಾಡಬೇಕಾಗುತ್ತದೆ. ಈ ಇಲಾಖೆಗೆ ಸಂಬಂಧಪಟ್ಟಂತೆ ಬಹಳ ಒಳ್ಳೆಯ

ಕಾರಣವೇನೆಂದು ಯೋಚನೆ ಮಾಡಬೇಕಾಗುತ್ತದೆ. ಈ ಇಲಾಖೆಗೆ ಸಂಬಂಧಪಟ್ಟಂತೆ ಬಹಳ ಒಳ್ಳೆಯ ಹಾಗೂ ಅನುಭವಿ ಮಂತ್ರಿಗಳಾದ ಘೋರ್ಪಡೆಯವರು, ಈ ಇಲಾಖೆಯಲ್ಲಿ ಇರತಕ್ಕಂತಹ ಕಾರ್ಯದರ್ಶಿಗಳಲ್ಲಿ ನನಗೆ ವಿಶ್ವಾಸ ಇದೆ. ಪಾದರಸದಂತಹ ಅಧಿಕಾರಿಗಳು. ಆದರೂ ಕೂಡ ಇಂತಹ ಬಹಳ ಮುಖ್ಯವಾದ ಕಾರ್ಯಕ್ರಮ ಒಂದು ವರ್ಷ ಕಾಲ ಮುಂದೂಡಬೇಕಾದರೆ ಬಹುಶಃ ಕೆಳ ಮಟ್ಟದಲ್ಲಿ ಎಲ್ಲಿಯೋ ಸರಿಯಾದ ಅಕೌಂಟಬಿಲಿಟಿ ಇಲ್ಲದೆ ಇರುವುದು ಬಹಳ ಮುಖ್ಯವಾದ ಕಾರಣವೆಂದು ನನಗನಿಸುತ್ತದೆ. ಅದಕ್ಕೋಸ್ಕರ ದಯಮಾಡಿ ಇದರ ಚಿಂತನೆ ನಡೆಯಬೇಕು. ಇದರ ಬಗ್ಗೆ ತನಿಖೆ ನಡೆಯಬೇಕೆಂದು ಕಳೆದ ಅಕ್ಟೋಬರ್ ನವಂಬರ್‌ನಲ್ಲಿ ಸುತ್ತೋಲೆಗಳು ಜಿಲ್ಲಾ ಪಂಚಾಯಿತಿಗೆ ಬಂದವು. ಜಿಲ್ಲಾ ಪಂಚಾಯಿತಿಯವರು ಇದನ್ನು ಆಯ್ಕೆ ಮಾಡಬೇಕಾಗಿದೆ. ಇನ್ನು ಫೈನಲ್ ಮಾಡುವುದಕ್ಕೆ ಅವಕಾಶವಾಗಿಲ್ಲ. ದಯಮಾಡಿ ತನಿಖೆ ಮಾಡುವುದು ಅಗತ್ಯವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸದನದ ಎಲ್ಲಾ ಸದಸ್ಯರೂ ಒಪ್ಪುತ್ತಾರೆ. ಇವತ್ತಿನ ದಿವಸ ಜಿಲ್ಲಾ ಪಂಚಾಯಿತಿಗಳು ಏನಾಗಿವೆ ಎಂದರೆ, ಶಾಸಕರು ಅವರು ಮೇಲ್ಮನೆ ಸದಸ್ಯರಾಗಲಿ, ಈ ಮನೆಯ ಸದಸ್ಯರಾಗಲಿ, ಪದನಿಮಿತ್ತ ಸದಸ್ಯರಾಗಿದ್ದಾರೆ. ಆದರೆ ಅಲ್ಲಿ ಜಿಲ್ಲಾ ಪಂಚಾಯಿತಿ ಸದಸ್ಯರು ಮತ್ತು ಶಾಸಕರ ಮಧ್ಯೆ ಒಂದು ರೀತಿಯ ಘರ್ಷಣೆ ಉಂಟಾಗಿದೆ. ಜಿಲ್ಲಾ ಪಂಚಾಯತಿಯ ಸದಸ್ಯರು ಯಾವುದೇ ರಸ್ತೆ ಕಾಮಗಾರಿಯಾಗಲಿ, ಯಾವುದೇ ರಿಪೇರಿ ಕಾಮಗಾರಿಯಾಗಲಿ, ಕುಡಿಯುವ ನೀರಿನ ಕಾಮಗಾರಿಯಾಗಲಿ, ಇದನ್ನು ಜಿಲ್ಲಾ ಪಂಚಾಯಿತಿಯ ಸದಸ್ಯರು ಹೇಳಿದ್ದನ್ನು ತೆಗೆದುಕೊಳ್ಳಬೇಕು. ಶಾಸಕರಿಗೆ ಬೇರೆ ಬೇರೆ ಅವಕಾಶವಿರುತ್ತದೆ ಎಂದು ಹೇಳುತ್ತಾರೆ. ಮಂಡ್ಯ ಜಿಲ್ಲಾ ಪಂಚಾಯಿತಿಯಲ್ಲಿ ಸುಮಾರು ಎರಡು ದಿವಸ ಕಳೆದ ಡಿಸಂಬರ್ ಮತ್ತು ಜನವರಿಯಲ್ಲಿ ಚರ್ಚೆ ನಡೆದು ಅದರಲ್ಲಿ ನಮ್ಮಲ್ಲಿ ಎಲ್ಲಾ ಶಾಸಕರು ಭಾಗವಹಿಸಿದ್ದರು. ನಿನ್ನೆ ಮೀಟಿಂಗ್‌ಗೆ ಹೋಗುವುದಕ್ಕಾಗಲಿಲ್ಲ ಏಕೆಂದರೆ, ಇಲ್ಲಿ ಸದನ ನಡೆಯುತ್ತಿತ್ತು. ಅದೇ ರೀತಿ ನೀವು ರೆಸಲ್ಯೂಷನ್ ಮಾಡಿ, ನಡವಳಿಕೆಯಲ್ಲಿ ಸರ್ಕಾರ ಏನು ತೀರ್ಮಾನ ತೆಗೆದುಕೊಳ್ಳುತ್ತದೆ, ಹಾಗೆಯೇ ಮಾಡೋಣ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ತಮ್ಮ ಮೂಲಕ ಪ್ರಾರ್ಥಿಸುವುದು ಏನೆಂದರೆ ನೀವು ಸರಿಯಾದ ಆದೇಶವನ್ನು ಕೊಡಬೇಕು. ಪದನಿಮಿತ್ತ ಸದಸ್ಯರು ಶಾಸಕರ ಕರ್ತವ್ಯ ಏನು? ಜವಾಬ್ದಾರಿ ಏನು ಎನ್ನುವುದನ್ನು ಖಚಿತವಾಗಿ ಹೇಳತಕ್ಕಂಥದ್ದು ಅಗತ್ಯ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ. ಇವತ್ತಿನ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ, ಪ್ರಾಥಮಿಕ ಆರೋಗ್ಯ ಘಟಕಗಳಿವೆ. ಪ್ರತಿಯೊಂದು ಆಸ್ಪತ್ರೆ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಘಟಕದ ಕಛೇರಿಯ ಮುಂಭಾಗದಲ್ಲಿ ಕೆಲಸದ ವೇಳೆ ಬೆಳಿಗ್ಗೆ 8 ರಿಂದ 12, ಮತ್ತು ಮಧ್ಯಾಹ್ನ 3 ರಿಂದ ಐದು ಗಂಟೆಯವರೆಗೆ ಎಂದು ನಮೂದಿಸಿರುತ್ತಾರೆ. ಇವತ್ತಿನ ದಿವಸ ಯಾವ ಘಟಕದಲ್ಲಾಗಲಿ, ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಾಗಲಿ ಯಾರೂ ಕೂಡ ಎಂಟು ಗಂಟೆಗೆ ಹೋಗುತ್ತಿಲ್ಲ. ನಾನು ನನ್ನ ಕ್ಷೇತ್ರದಲ್ಲಿ ಒಂದಲ್ಲ ಹತ್ತು ಬಾರಿ ಭೇಟಿ ಮಾಡಿ ನೋಡಿದ್ದೇನೆ. ಕಳೆದ ಜಿಲ್ಲಾ ಪಂಚಾಯಿತಿ ಸಭೆಗಳಲ್ಲಿ ಕೂಡ ಚರ್ಚಿಸಿ ಮಾಡಿದ್ದೇವೆ. ಅದರ ಮೇಲೆ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳತಕ್ಕಂತಹ

ಶಕ್ತಿ, ಅಧಿಕಾರ, ಮನಸ್ಸು ಯಾರಿಗೂ ಕೂಡ ಇಲ್ಲ. ಆದ್ದರಿಂದ ನಾನಾದರೂ ಕೂಡ ಈ ಸಂದರ್ಭದಲ್ಲಿ ಸಾಧ್ಯವಾದರೆ ಇದನ್ನು ಪುನರ್ ವಿಮರ್ಶೆ ಮಾಡತಕ್ಕಂಥದ್ದು ಅಗತ್ಯ. ಎಂಟರ ಬದಲು ಒಂಭತ್ತು, ಒಂಭತ್ತೂವರೆ ಮಾಡುವುದು ಅಗತ್ಯ. ಇಲ್ಲದಿದ್ದರೆ ಎಂಟರಿಂದ 12, 12 ರಿಂದ 5 ಗಂಟೆಯವರೆಗೇ ಇರಬೇಕೆಂದರೆ ಸರಿಯಾದ ಶಿಕ್ಷಣ ಕ್ರಮ ತೆಗೆದುಕೊಳ್ಳುವುದು ಅಗತ್ಯವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೆಡಿಕಲ್ ಕಾಲೇಜ್ ಮಂಜೂರು ಮಾಡತಕ್ಕಂತಹ ವಿಷಯದಲ್ಲಿ ನಮ್ಮದೇ ಆದ ಜನತಾ ಶಿಕ್ಷಣ ಸಂಸ್ಥೆ ಇದೆ. ಕಳೆದ ಸುಮಾರು 14-15 ವರ್ಷಗಳಿಂದ ನಾವು ಆ ಸಂಸ್ಥೆ ಆಶ್ರಯದಲ್ಲಿ ಮೆಡಿಕಲ್ ಕಾಲೇಜ್ ಮಾಡಬೇಕೆಂದು ಕೇಳಿಕೊಂಡು ಬಂದಿದ್ದೇವೆ. ಹಿಂದೆ ಮೈಸೂರು ಯೂನಿವರ್ಸಿಟಿ ವ್ಯಾಪ್ತಿಯಲ್ಲಿ ಇದ್ದಂತಹ ಸಂದರ್ಭದಲ್ಲಿ ಕೂಡ ಅವರು ಶಿಫಾರಸ್ಸು ಮಾಡಿದ್ದಾರೆ. ರಾಜೀವ್ ಗಾಂಧಿ ವೈದ್ಯಕೀಯ ಯೂನಿವರ್ಸಿಟಿಯವರು ಶಿಫಾರಸ್ಸು ಮಾಡಿದರೂ ಕೂಡ 1992 ರಿಂದ ಯಾವ ಸರ್ಕಾರ ಬಂದರೂ ಕೂಡ ಕಳೆದ ಜನತಾದಳ ಸರ್ಕಾರ ಇದ್ದಾಗ, ಕಾಂಗ್ರೆಸ್ ಸರ್ಕಾರ ಇದ್ದಾಗ ಮತ್ತು ಈಗಿನ ಸರ್ಕಾರ ಇದ್ದಾಗ ಕೂಡ ಮಂಡ್ಯ ಜಿಲ್ಲೆಗೆ ಜನತಾ ಶಿಕ್ಷಣ ಸಂಸ್ಥೆಗೆ ಮೆಡಿಕಲ್ ಕಾಲೇಜ್ ಶಿಫಾರಸ್ ಮಾಡದೆ ಇರತಕ್ಕಂಥಾದ್ದು ಬಹಳ ಅನ್ಯಾಯವಾಗಿದೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಂಡ್ಯ ಜಿಲ್ಲೆಗೆ ನಮಗೆ ಅನ್ಯಾಯವಾಗಿದೆ ನಮಗೆ ಮೆಡಿಕಲ್ ಕಾಲೇಜ್ ಕೊಡಿ ಎಂದು ಕೇಳುತ್ತಿದ್ದಾರೆ. ಆ ಶಕ್ತಿ ನಿಮಗಿದೆ ದಯವಿಟ್ಟು ಕೊಡುತ್ತೇನೆಂದು ಹೇಳಿ.

ಶ್ರೀ ಹೆಚ್.ಡಿ. ಚೌಡಯ್ಯ: ಹಿಂದೆ ನಿಮ್ಮ ಸರ್ಕಾರ ಇದ್ದಾಗ ದೇವೇಗೌಡರು ಪ್ರಧಾನ ಮಂತ್ರಿಯಾಗಿದ್ದಾಗ ಇದಕ್ಕೋಸ್ಕರ ನಾನು ದೆಹಲಿಗೆ ಹೋಗಿದ್ದೆ. ಪಟೇಲರಿಗೂ ಭೇಟಿ ಮಾಡಿದ್ದೆ. ಈಗಿನ ಮುಖ್ಯಮಂತ್ರಿಗಳು ಹಿಂದೆ ಸ್ಪೀಕರ್ ಆಗಿದ್ದ ಸಂದರ್ಭದಲ್ಲಿ ಅವರೂ ಕೂಡ ಶಿಫಾರಸ್ಸು ಮಾಡಿದ್ದಾರೆ. ಮುಖ್ಯ ಮಂತ್ರಿಗಳಾದ ಮೇಲೆ ಅವರಿಗೆ ಮನಸ್ಸು ಬರಲಿಲ್ಲ. ಮಂಡ್ಯ ಜಿಲ್ಲೆಯಲ್ಲಿ ಒಂದು ಮೆಡಿಕಲ್ ಕಾಲೇಜ್ ಇರುವುದು ನಿಜ. ಆದರೆ ಅದು ಮಂಡ್ಯ ಜಿಲ್ಲೆಯ ಕೊನೆಯ ಭಾಗದಲ್ಲಿದೆ. ಪರಮಪೂಜ್ಯ ಸ್ವಾಮಿಗಳು ಅದನ್ನು ಬಹಳ ಕಷ್ಟಪಟ್ಟು ಕಟ್ಟಿದ್ದಾರೆ. ಮಾನ್ಯ ಶ್ರೀಕಂಠಯ್ಯನವರು, ಮಾನ್ಯ ವೈ.ಕೆ. ರಾಮಯ್ಯನವರೂ ಸೇರಿದಂತೆ ಆ ವಿಚಾರ ಎಲ್ಲರಿಗೂ ಗೊತ್ತಿದೆ. ಆದರೆ ಅದು ಜಿಲ್ಲೆಯ ಕೊನೆಯ ಭಾಗದಲ್ಲಿ ಇರತಕ್ಕಂಥ ಕಾರಣ ಇವತ್ತಿನ ದಿವಸ ಅಲ್ಲಿ ರೋಗಿಗಳಿಲ್ಲ. ಬಂದ ಡಾಕ್ಟರ್‌ಗಳೂ ಸಹ ಅಲ್ಲಿ ಇರುವುದಿಲ್ಲ. ಇಂತಹ ಒಂದು ಪರಿಸ್ಥಿತಿ ಇವತ್ತು ಅಲ್ಲಿದೆ. ಅದೇ ಮೆಡಿಕಲ್ ಕಾಲೇಜ್ ಮಂಡ್ಯದಲ್ಲಿ ಇದ್ದಿದ್ದರೆ ಆದರೆ ಇವತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ ಅತ್ಯುತ್ತಮವಾಗಿ ನಡೆಯುವುದಕ್ಕೆ ಒಂದು ಅವಕಾಶವಾಗುತ್ತಿತ್ತು.

ಶ್ರೀ ಕಾಗೋಡು ತಿಮ್ಮಪ್ಪ: ತಂದೆ ತಾಯಿಗಳಿಗೆ ಕೊನೆಯ ಮಕ್ಕಳ ಮೇಲೆ ಬಹಳ ಪ್ರೀತಿ ಇರುತ್ತದೆ. ಅದರಂತೆ ಕೊನೆಯ ಭಾಗದಲ್ಲಿದ್ದರೂ ನಿಮ್ಮ ಮೇಲೆ ಪ್ರೀತಿ ಹೆಚ್ಚು ಇರುತ್ತದೆ.

ಶ್ರೀ ಹೆಚ್.ಡಿ. ಚೌಡಯ್ಯ: ಮಾನ್ಯ ಅಧ್ಯಕ್ಷರೇ, ಇನ್ನು ಉನ್ನತ ಶಿಕ್ಷಣದ ವಿಚಾರದಲ್ಲಿ ಮಾತನಾಡುವುದಾದರೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಭಾರತದ

ಉನ್ನತ ಶಿಕ್ಷಣದ ರಾಜಧಾನಿ ಎಂದು ಖ್ಯಾತಿ ಗಳಿಸಿರುವ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಜಗತ್ತಿನಾದ್ಯಂತ ಹೆಸರುವಾಸಿಯಾಗಿರುವ ಕರ್ನಾಟಕ ರಾಜ್ಯದಲ್ಲಿಯೇ ಏಳೆಂಟು ಜಿಲ್ಲೆಗಳು ಶಿಕ್ಷಣ ಸೂಚಕದಲ್ಲಿ ಕೆಳಗಿನ ಸ್ಥಾನ ಪಡೆದಿರುವುದು ವಿಷಾದದ ಸಂಗತಿಯಲ್ಲವೆ? ಕಳೆದ ವರ್ಷದ ಬಜೆಟ್‌ನಲ್ಲಿ ಸಹಾಯಧನಯುಕ್ತ ಉನ್ನತ ಶಿಕ್ಷಣದಿಂದ ಹಣವನ್ನು ಪ್ರಾಥಮಿಕ ಶಿಕ್ಷಣ ವಲಯಕ್ಕೆ ವರ್ಗಾಯಿಸಲು ನಾವು ಆರಂಭದ ಹೆಜ್ಜೆಗಳನ್ನು ಇಟ್ಟಿವು ಎಂಬ ಮಾತುಗಳನ್ನು ಹೇಳಿದ್ದಾರೆ. ಇದು ನಿಜವಾಗಿಯೂ ಕೂಡ ಬಹಳ ಅನ್ಯಾಯದ ಮಾತು ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಯಾವುದೇ ಒಬ್ಬ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿ ಅವನು ಪಿ.ಯು.ಸಿ. ಪಾಸ್ ಮಾಡಿದ ಅವನ ಶಿಕ್ಷಣ ಪಿ.ಯು.ಸಿ.ಗೇ ಕೊನೆಯಾಗುವುದಾದರೆ ಈಗ ಮಾಡಿರುವುದು ಸರಿ. ಅವನು ಪಿ.ಯು.ಸಿ. ಮಾಡಿದ ನಂತರ ಉನ್ನತ ಶಿಕ್ಷಣ ಬೇಕಾದ ಪಕ್ಷದಲ್ಲಿ ಅದಕ್ಕೆ ಸಾಕಷ್ಟು ಉತ್ತೇಜನವನ್ನು ಕೊಡದೇ ಹೋದರೆ, ಅದರ ಗತಿ ಮತ್ತು ದಿಕ್ಕು ಏನಾಗುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಕಳೆದ ಫೆಬ್ರವರಿ 22 ರಂದು ಒಂದು ಸರ್ಕಾರಿ ಆಜ್ಞೆ ಹೊರಡಿಸಲಾಯಿತು. ಅದರಲ್ಲಿ ಉನ್ನತ ಶಿಕ್ಷಣಕ್ಕೆ ನೀಡುವ ಅನುದಾನದಲ್ಲಿ ಶೇ. 15 ರಷ್ಟು ಕಡಿತಗೊಳಿಸಲಾಗಿದೆ ಎಂದು ಹೇಳಲಾಗಿತ್ತು. ಕೇವಲ 15 ದಿವಸಗಳಲ್ಲಿ ಸರ್ಕಾರ ಅದನ್ನು ವಾಪಸ್ ತೆಗೆದುಕೊಂಡಿತು. ಮಾರ್ಚ್ 1 ರಂದು ಸರ್ಕಾರ ಒಂದು ಹೊಸ ಸರ್ಕಾರಿ ಆಜ್ಞೆ ಹೊರಡಿಸಿತು. ಸದರಿ ಆದೇಶದಲ್ಲಿ ಈಗ ಹಾಲಿ ಖಾಲಿ ಇರುವ ಹುದ್ದೆಗಳನ್ನು ಸರ್ಕಾರ ತುಂಬುವುದಿಲ್ಲ, ಆಡಳಿತ ಮಂಡಳಿಯವರೇ ಅದನ್ನು ತುಂಬಬೇಕಾಗುತ್ತದೆ, ಅದರ ವೆಚ್ಚವನ್ನು ಭರಿಸಬೇಕಾಗುತ್ತದೆ ಎಂದು ಹೇಳಲಾಗಿದೆ. ಇದರಲ್ಲಿ ಒಂದು ಬಹಳ ಅಗಾಧವಾದಂತಹ ತೊಂದರೆ ಇದೆ. ಒಂದು ವೇಳೆ ನಾಳೆ ಆಡಳಿತ ಮಂಡಳಿಗಳೇ ಇದರ ಜವಾಬ್ದಾರಿಯನ್ನು ವಹಿಸಬೇಕಾದಂತಹ ಸಂದರ್ಭ ಬಂದಿದ್ದೇ ಆದರೆ ಆಡಳಿತ ಮಂಡಳಿಗಳು ವಾಮ ಮಾರ್ಗವನ್ನು ಹಿಡಿಯಬೇಕಾಗುತ್ತದೆ. ಆ ವಾಮ ಮಾರ್ಗದಿಂದಾಗಿ ವಿದ್ಯಾರ್ಥಿಗಳು ಹೆಚ್ಚಿನ ಆರ್ಥಿಕ ಹೊರೆಯನ್ನು ಹೊರಬೇಕಾಗುತ್ತದೆ. ಆ ವಿದ್ಯಾರ್ಥಿಗಳು ಸಿಡಿದೇಳುತ್ತಾರೆ. ಪ್ರತಿಭಟನೆಗಳನ್ನು ಮಾಡುತ್ತಾರೆ. ಇದರಿಂದ ಪೋಷಕರಿಗೂ ತೊಂದರೆಯಾಗುತ್ತದೆ. ಆ ಒಂದು ಕಾರಣದಿಂದ ನಾನು ಈ ಒಂದು ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಶಿಕ್ಷಣ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ದಯಮಾಡಿ ಈಗ ಏನೊಂದು ಪರಿಸ್ಥಿತಿ ಇದೆಯೋ ಅದೇ ಒಂದು ಪರಿಸ್ಥಿತಿ ಅಥವಾ ವ್ಯವಸ್ಥೆ ಮುಂದುವರೆಯಬೇಕು ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಇನ್ನು ಸಕ್ಕರೆ ವಿಷಯದಲ್ಲಿ ಹೇಳುವುದಾದರೆ, ಸಕ್ಕರೆ ನಿರ್ದೇಶಕರ ಕಛೇರಿಯನ್ನು ಬೆಂಗಳೂರಿನಿಂದ ಬೆಳಗಾಂಗೆ ವರ್ಗಾಯಿಸಲಾಗಿದೆ. ಇದರಿಂದ ಉತ್ತರ ಕರ್ನಾಟಕದ ಅಭಿವೃದ್ಧಿ ಹೇಗೆ ಆಗುತ್ತದೋ ನನಗೆ ಗೊತ್ತಿಲ್ಲ. ಒಂದು ರೀಸರ್ಚ್ ಸೆಂಟರ್ ಅನ್ನು ಬೆಳಗಾಂನಲ್ಲಿ ಮಾಡಿದ್ದಾರೆ. ಅದನ್ನು ಹಿಂದೆ ಮಂಡ್ಯದಲ್ಲಿ ಮಾಡಲು ಉದ್ದೇಶಿಸಲಾಗಿತ್ತು. ಆದರೆ ಅದನ್ನು ಬೆಳಗಾಂನಲ್ಲಿ ಮಾಡಿದ್ದಾರೆ, ಬಹಳ ಸಂತೋಷ. ಆದರೆ ಕಳೆದ ಹತ್ತಾರು ವರ್ಷಗಳಿಂದ ಬೆಂಗಳೂರಿನಲ್ಲಿರುವ ಸಕ್ಕರೆ ನಿರ್ದೇಶಕರ ಕಛೇರಿಯನ್ನು ಬೆಳಗಾಂಗೆ ಶಿಫ್ಟ್ ಮಾಡಿರತಕ್ಕಂಥದ್ದು ಆಡಳಿತದ ದೃಷ್ಟಿಯಿಂದ ಇದು ಬಹಳ ಅನ್ಯಾಯ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ.

ಸರ್ಕಾರ ಅದನ್ನು ವಾಪಸ್ ತರುತ್ತಾರೋ ಬಿಡುತ್ತಾರೋ ಅದು ಅವರಿಗೇ ಬಿಟ್ಟಿದ್ದು. ಆದರೆ ನನ್ನ ಅನಿಸಿಕೆಯನ್ನು ಇಲ್ಲಿ ಹೇಳಬೇಕಾದುದು ನನ್ನ ಕರ್ತವ್ಯ ಎನ್ನುವ ದೃಷ್ಟಿಯಿಂದ ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಮಾನ್ಯ ಸಕ್ಕರೆ ಮಂತ್ರಿಗಳು ಸದನದಲ್ಲಿದ್ದಾರೆ. ಅವರು ಬಹಳ ಚೆನ್ನಾಗಿ ಮಾತನಾಡುತ್ತಾರೆ. ಚೆನ್ನಾಗಿ ಉತ್ತರಗಳನ್ನೂ ಸಹ ಅವರು ಕೊಡುತ್ತಾರೆ. ಅನೇಕ ಸಂದರ್ಭಗಳಲ್ಲಿ ಈ ಸದನದಲ್ಲಿ ಉತ್ತರಗಳನ್ನು ಕೊಟ್ಟಿದ್ದಾರೆ. ಮಂಡ್ಯದಲ್ಲಿ ಬಂದಾಗಲೂ ಕೂಡ ಅವರು ಉತ್ತರಗಳನ್ನು ಕೊಟ್ಟಿದ್ದಾರೆ. ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆ ಸುಮಾರು 70 ವರ್ಷದ ಹಳೆಯದಾದ ಕಾರ್ಖಾನೆಯಾಗಿದೆ. ಇದು ಸರ್ಕಾರಿ ಒಡೆತನದಲ್ಲಿ ಇರತಕ್ಕಂಥ ಕಾರ್ಖಾನೆಯಾಗಿದೆ. ಇದು ಬಹಳ ಚೆನ್ನಾಗಿ ನಡೆದು ಬಂದಂತಹ ಕಾರ್ಖಾನೆಯಾಗಿದೆ. ಅಲ್ಲಿ ಕಳೆದ 70 ವರ್ಷಗಳಿಂದ ಮೊನ್ನೆಯವರೆಗೂ ಕೂಡ 15 ದಿವಸಕ್ಕೆ ಪೇಮೆಂಟ್ ಮಾಡುತ್ತಿದ್ದರು. ಇವತ್ತು ಮೂರು ತಿಂಗಳಾಗುತ್ತಾ ಇದೆ. ಪೇಮೆಂಟ್ ಆದಮೇಲೆ ಪೇಮೆಂಟ್‌ನಲ್ಲಿ ಕಟಾಯಿಸಿದಂತಹ ಸಹಕಾರಿ ಸಂಘಗಳ ಸಾಲ, ವಾಣಿಜ್ಯ ಬ್ಯಾಂಕ್‌ಗಳ ಸಾಲಗಳನ್ನು ಸಂಬಂಧಪಟ್ಟಂತಹ ಸಂಸ್ಥೆಗಳಿಗೆ ಪಾವತಿಸಬೇಕಾದರೆ 2-3 ತಿಂಗಳು ಆಗುತ್ತಿದೆ. ಇದರಿಂದಾಗಿ ಬ್ಯಾಂಕ್‌ಗಳವರು ಅನಾವಶ್ಯಕವಾಗಿ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ವಿಧಿಸುತ್ತಿದ್ದಾರೆ. ಇದು ರೈತರ ಮೇಲೆ ಬರತಕ್ಕಂಥ ಹೊರೆಯಾಗಿದೆ. ಹೀಗೆಯೇ ಒಂದಲ್ಲ ಅನೇಕ ಕಾರಣಗಳನ್ನು ಇವತ್ತಿನ ದಿವಸ ಸಕ್ಕರೆ ಕಾರ್ಖಾನೆಯಲ್ಲಿರುವಂತಹ ರೈತರು ಅನುಭವಿಸುತ್ತಾ ಬಂದಿದ್ದಾರೆ. ಕೆಲವು ತಾಂತ್ರಿಕ ತೊಂದರೆಗಳಿಂದ ಈ ಸಾರಿ ಕ್ರಷಿಂಗ್ ಮಾಡತಕ್ಕದ್ದೂ ಕೂಡ ಬಹಳ ತಡವಾಯಿತು, ಇದರಿಂದ ತೊಂದರೆಯಾಯಿತು. ಈ ಬಗ್ಗೆ ಈ ಸದನದಲ್ಲೂ ಕೂಡ ಒಂದು ತಾಂತ್ರಿಕ ಸಮಿತಿಯನ್ನು ರಚಿಸುತ್ತೇನೆ ಎಂದು ಮಾನ್ಯ ಸಕ್ಕರೆ ಸಚಿವರು ಹೇಳಿದ್ದರು. ಬಹುಶಃ ಅವರು ಅದನ್ನು ಮಾಡಿದರೋ ಹೇಗೋ ನನಗೆ ಗೊತ್ತಿಲ್ಲ. ಮಾನ್ಯ ಸಚಿವರು ಇದರ ಬಗ್ಗೆ ಉತ್ತರ ಕೊಡುವಾಗ ದಯವಿಟ್ಟು ಆ ಬಗ್ಗೆ ಹೇಳಬೇಕು.

ಇನ್ನು ರಸ್ತೆಗಳ ವಿಷಯದಲ್ಲಿ ಹೇಳುವುದಾದರೆ, 'ನಮ್ಮ ಹೊಲ, ನಮ್ಮ ರಸ್ತೆ' ಎಂಬ ಯೋಜನೆಯನ್ನು ಸರ್ಕಾರ ಘೋಷಿಸಿದ್ದಾರೆ. ನನ್ನ ಅನುಭವದಲ್ಲಿ ಹೇಳುವುದಾದರೆ, ಖಂಡಿತವಾಗಿಯೂ ಇದು ನಡೆಯುವುದಿಲ್ಲ ಎಂದು ಹೇಳಬಯಸುತ್ತೇನೆ. ನಾನು ಇವತ್ತಿಗೂ ಕೂಡ ರೈತನೇ ಆಗಿದ್ದೇನೆ. ಹೊಲ ಗದ್ದೆಗಳಿಗೆ ಹೋಗುತ್ತೇನೆ. ಯಾರೋ ಸಾಹಿತಿಗಳು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಕೊಟ್ಟಿರತಕ್ಕಂಥ ಪದ ಇದು ಎಂದು ನನಗನ್ನಿಸುತ್ತಿದೆ. ಶೇ. 40 ರಷ್ಟು ಹಣವನ್ನು ರೈತರು ಹೇಗೆ ಕೊಡುತ್ತಾರೆ. ಇವತ್ತಿನ ದಿವಸ ಇರತಕ್ಕಂಥ ನ್ಯಾಷನಲ್ ಹೈವೇ, ಸ್ಟೇಟ್ ಹೈವೇ, ಎಂಡಿಆರ್, ಓಡಿಆರ್, ವಿಲೇಜ್ ರಸ್ತೆಗಳು ಇವೆಲ್ಲವನ್ನೂ ಕೂಡ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಸರ್ಕಾರ ಇವೆಲ್ಲವನ್ನೂ ಕೂಡ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಸರ್ಕಾರ ಮ್ಯಾನೇಜ್ ಮಾಡತಕ್ಕಂಥ ಸಂದರ್ಭದಲ್ಲಿ ಇವತ್ತಿನ ದಿವಸ ರೈತ ಹೊಸದಾಗಿ ಶೇ. 40 ರಷ್ಟು ಹಣ ಕೊಡಬೇಕೆಂದರೆ, ಇದು ಖಂಡಿತವಾಗಿಯೂ ಕೂಡ ಸಾಧ್ಯವಾಗತಕ್ಕಂಥ ಕೆಲಸವಲ್ಲ. ಈ ಯೋಜನೆಯನ್ನು ಸರ್ಕಾರ ವಾಪಸ್ ತೆಗೆದುಕೊಳ್ಳಬೇಕು ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಖಚಿತವಾಗಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ರಸ್ತೆಗಳ ವಿಚಾರದಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ

ಆದರಲ್ಲೂ ಕಳೆದ ಒಂದು ವರ್ಷದಿಂದೀಚೆಗೆ ಸಾಕಷ್ಟು ಸುಧಾರಣೆ ಆಗಿದೆ. ಇದನ್ನು ನಾವು ಒಪ್ಪಲೇಬೇಕಾಗುತ್ತದೆ. ಯಾವುದೇ ಬಗೆಯ ರಸ್ತೆಗಳಾಗಲೀ ಇವತ್ತು ಸಾಕಷ್ಟು ಸುಧಾರಣೆಯಾಗಿದೆ. ಆರ್.ಡಿ.ಪಿ.ಆರ್. ವತಿಯಿಂದ ಪ್ರತಿಯೊಂದು ತಾಲ್ಲೂಕಿಗೂ ಒಂದು ಕೋಟಿ ರೂಪಾಯಿಗಳ ಕಾರ್ಯಕ್ರಮ ತೆಗೆದುಕೊಳ್ಳಲಾಗಿದ್ದು ಅದೂ ಕೂಡ ಸ್ವಲ್ಪ ಹೆಚ್ಚು ಕಡಿಮೆ ಮುಗಿಯುತ್ತಾ ಬಂದಿದೆ. ಆದರೆ ನಬಾರ್ಡ್ ವತಿಯಿಂದ ಏನು ಕೆಲಸಗಳನ್ನು ತೆಗೆದುಕೊಳ್ಳಲಾಗಿದೆಯೋ ಅವು ಪೂರ್ಣಗೊಂಡಿಲ್ಲ. ಇದರ ಬಗ್ಗೆ ಎಲ್ಲರಿಗೂ ಅನುಭವ ಆಗಿದೆ. ನಬಾರ್ಡ್ ಯೋಜನೆಯಡಿ 10 ಕಿ.ಮೀ. ಇದ್ದರೆ, 2 ಕಿ.ಮೀ. ನಲ್ಲಿ ಟಾರ್ ಸರ್‌ಫೇಸ್ ವೋರನಾಟ್ ಸರ್‌ಫೇಸ್ ಇದ್ದರೂ ಕೂಡ ಅದರಲ್ಲಿ ಸೇರಿಸುವುದಿಲ್ಲ. ಅದನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯಿತಿ ಅಥವಾ ಪಿ.ಡಬ್ಲ್ಯೂ.ಡಿ. ಅದನ್ನು ಮ್ಯಾನೇಜ್ ಮಾಡಬೇಕು ಎಂದು ಹೇಳುತ್ತಾರೆ. ಈ ರೀತಿ ಏಕೆ ಹೇಳುತ್ತಾರೆ ಎಂದರೆ, ಸರ್ಕಾರಕ್ಕೂ ಮತ್ತು ನಾಬಾರ್ಡ್‌ಗೂ ಆಗಿರತಕ್ಕಂಥ ಒಪ್ಪಂದದಲ್ಲಿ ಇದಿಲ್ಲ ಎಂದು ಹೇಳುತ್ತಾರೆ. ಇದೊಂದು ಸಣ್ಣ ವಿಷಯ. ಒಂದು ರಸ್ತೆ ಎಂದ ಮೇಲೆ, ಆ ರಸ್ತೆಯನ್ನು ನಬಾರ್ಡ್‌ನವರಾಗಲೀ, ಪಿ.ಡಬ್ಲ್ಯೂ.ಡಿ. ನವರಾಗಲೀ ಅಥವಾ ಹುಡ್ಕೋದವರಾಗಲೀ ಇನ್ನ್ಯಾರೇ ತೆಗೆದುಕೊಳ್ಳಲೀ ಅದನ್ನು ಕಂಪ್ಲೀಟ್ ಮಾಡತಕ್ಕಂಥದ್ದು ಅವರ ಕೆಲಸವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಹುಡ್ಕೋ ನೆರವಿನಿಂದ 153 ಸೇತುವೆಗಳ ನಿರ್ಮಾಣದ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗಿದೆ. ಮಾನ್ಯ ಮುಖ್ಯಮಂತ್ರಿಗಳೇ ನಮ್ಮ ಮಂಡ್ಯಕ್ಕೆ ಖುದ್ದಾಗಿ ಬಂದು ಸದರಿ ಕಾರ್ಯಕ್ರಮದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ನಾನು ಮೊನ್ನೆ ಫೆಬ್ರವರಿ 22ನೇ ತಾರೀಖು ಮೈಸೂರಿನಲ್ಲಿ ರಿವ್ಯೂ ಮೀಟಿಂಗ್ ನಡೆದಂತಹ ಕಾಲದಲ್ಲಿ ಸನ್ಮಾನ್ಯ ಧರ್ಮಸಿಂಗ್‌ರವರಿಗೆ ಒಂದು ಮಾತನ್ನು ಹೇಳಿದೆ. ಮೈಸೂರು-ಬೆಂಗಳೂರು ನಡುವಿನ ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರದ ನಿಡಘಟ್ಟ ಎಂಬಲ್ಲಿ ಎರಡು ಕಡೆ ಎರಡು ಸೇತುವೆಗಳನ್ನು ಕಟ್ಟಿದ್ದಾರೆ. ಅವು ನಿಜವಾಗಿ ಸೇತುವೆಗಳಲ್ಲ, ಅದು ಆಕ್ಸಿಡೆಂಟಲ್ ಸ್ಪಾಟ್‌ಗಳಾಗಿವೆ. ಈ ವಿಷಯದಲ್ಲಿ ಮೇಲ್ಮನೆಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ಮಂತ್ರಿಯವರು ಅದನ್ನು ಸರಿಪಡಿಸುವವರೆಗೆ ಈ ಸೇತುವೆ ನಿರ್ಮಾಣ ಮಾಡಿರತಕ್ಕಂಥ ಎಲ್ ಅಂಡ್ ಟಿ ಯವರಿಗೆ ಪೇಮೆಂಟ್ ಮಾಡುವುದಿಲ್ಲ, ನಾವು ಇದನ್ನು ಸರಿಪಡಿಸುತ್ತೇವೆ ಎಂದು ಭರವಸೆ ನೀಡಿದ್ದರು. ಮೊನ್ನೆ ಕಳೆದ ನಾಲ್ಕು ದಿವಸಗಳ ಹಿಂದೆ ನಾನು ಅಲ್ಲಿ ನೋಡಿದಾಗ ಸದರಿ ಸೇತುವೆ ಮೇಲೆ ಟಾರ್ ಹಾಕಿ ಟ್ರಾಫಿಕ್ ಹೋಗಲು ಅವಕಾಶ ಮಾಡಿಕೊಟ್ಟಿದ್ದನ್ನು ಗಮನಿಸಿದೆ. ಬಹುಶಃ ಅಲ್ಲಿ ಯಾವ ಟೈಮ್‌ನಲ್ಲಿ ಎಷ್ಟೆಷ್ಟು ಅಪಘಾತಗಳು ನಡೆಯುತ್ತದೋ ಗೊತ್ತಾಗುವುದಿಲ್ಲ. ಆದ್ದರಿಂದ ದಯಮಾಡಿ ಇದೆಲ್ಲವನ್ನೂ ಕೂಡ ಸರಿಪಡಿಸತಕ್ಕಂಥದ್ದು ಅಗತ್ಯ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಇನ್ನು ನೀರಾವರಿ ಬಗ್ಗೆ ಹೇಳುವುದಾದರೆ, ಸನ್ಮಾನ್ಯ ನೀರಾವರಿ ಮಂತ್ರಿಗಳು ಸದನದಲ್ಲಿ ಇಲ್ಲ. ನೀರಾವರಿ ವಿಚಾರದಲ್ಲಿ ಕಳೆದ ಒಂದೂವರೆ ವರ್ಷಗಳಿಂದ ಆಗಿರತಕ್ಕಂಥ ಅನ್ಯಾಯ ಬಹುಶಃ ಹಿಂದೆ ಯಾವಾಗಲೂ ಕೂಡ ಆಗಿರಲಿಲ್ಲ ಎಂಬ ಮಾತನ್ನು ನಾನು ಹೇಳಬೇಕಾಗುತ್ತದೆ. ಆದರಲ್ಲೂ ಕಾವೇರಿ ಬೇಸಿನ್‌ಗೆ ಗಮನ ನೀಡದೇ ಅನ್ಯಾಯ ಮಾಡಲಾಗಿದೆ. ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಈ ವಿಚಾರದ ಬಗ್ಗೆ ಅಸಮಾಧಾನದ ಹೊಗೆಯಾಡುತ್ತಿದೆ. ಈ

ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಯಾವ ಕೆಲಸಗಳನ್ನೂ ಕೂಡ ನೀರಾವರಿ ಇಲಾಖೆಯಲ್ಲಿ ತೆಗೆದುಕೊಂಡಿಲ್ಲ. ಈಗಾಗಲೇ ಎರಡು ಮೀಟಿಂಗ್‌ಗಳನ್ನು ನಡೆಸಲಾಯಿತು. ಇಷ್ಟು ಕೇವಲ ಮೀಟಿಂಗ್‌ಗಳು ಆದವೇ ಹೊರತು ಯಾವ ಕೆಲಸವನ್ನೂ ಕೂಡ ಇಲ್ಲಿ ಕಾರ್ಯಗತಗೊಳಿಸಿಲ್ಲ. ಇವತ್ತು ನೀರಾವರಿ ಇಲಾಖೆಯ ಯಾವುದೇ ಅಧಿಕಾರಿಗಳನ್ನು ಕೇಳಿದರೂ ಕೂಡ ನಮ್ಮಲ್ಲಿ ಹಣವಿಲ್ಲ, ಸರ್ಕಾರದಿಂದ ನಮಗೆ ಈವರೆಗೆ ಯಾವುದೇ ಆದೇಶ ಬಂದಿಲ್ಲವೆಂದು ಹೇಳುತ್ತಾರೆ. ಇದನ್ನು ಎಲ್ಲರೂ ಕೂಡ ಪಕ್ಷಾತೀತವಾಗಿ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಚೌಡಯ್ಯನವರೇ, ಬಜೆಟ್‌ನಲ್ಲಿ ಸೇರಿರತಕ್ಕಂಥ ವರ್ಕ್‌ನ ವಿಚಾರ ಹೇಳುತ್ತಿದ್ದೀರೋ ಅಥವಾ ಹೊಸ ವರ್ಕ್‌ನ ವಿಚಾರವನ್ನು ತಾವು ಹೇಳುತ್ತಿದ್ದೀರೋ?

ಶ್ರೀ ಹೆಚ್.ಡಿ. ಚೌಡಯ್ಯ: ಬಜೆಟ್‌ನಲ್ಲಿ ಯಾವ ಕೆಲಸವನ್ನೇ ಸೇರಿಸಿಲ್ಲ. ತಾವು ಬಜೆಟ್ ಬುಕ್ ತೆಗೆದು ನೋಡಿ. ಹಿಂದೆ ಏನು ಕೆಲಸಗಳು ಬಾಕಿ ಇವೆಯೋ ಅವುಗಳಿಗೇ ಈಗ ಬಜೆಟ್‌ನಲ್ಲಿ ಇಟ್ಟಿರುವ ಹಣ ಸಾಲುವುದಿಲ್ಲ. ಇನ್ನು ಹೊಸ ಕೆಲಸಗಳನ್ನು ಕೈಗೆತ್ತಿಕೊಳ್ಳಲು ಹೇಗೆ ಸಾಧ್ಯ? ನಾವು ಹೊಸ ಕಾಲುವೆಗಳನ್ನಾಗಲೀ ಅಥವಾ ಕಟ್ಟೆಗಳನ್ನಾಗಲೀ ತೋಡಿ ಅಥವಾ ಕಟ್ಟಿ ಎಂದು ಹೇಳುತ್ತಿಲ್ಲ. ಮಾನ್ಯ ಹೆಚ್.ಕೆ. ಪಾಟೀಲರು ಇದನ್ನು ಕಡೆಗಣಿಸುತ್ತಿದ್ದಾರೆ ಎನ್ನತಕ್ಕ ಹೊಗೆ ಬರುತ್ತಿದೆ, ಅದು ಯಾವತ್ತು ಬೆಂಕಿಯಾಗುತ್ತದೋ ಹೇಳಲು ಸಾಧ್ಯವಿಲ್ಲ. ಸಾರಿಗೆ ಮತ್ತು ವಿದ್ಯುತ್ ಬಗ್ಗೆ ಹೇಳುವುದಾದರೆ, ಇವರೆಡು ಹಳೆಯ ಬಟ್ಟೆ ಇದ್ದಂತೆ. ಹಳೆಯ ಬಟ್ಟೆ ನೂಲಿಗೇಡು ಎಂಬಂತೆ. ಮಂಡ್ಯದ ಬಸ್‌ಸ್ಟ್ಯಾಂಡ್‌ಗೆ ಹೋದರೆ ಶುಚಿತ್ವಸ್ವತ್ರೆಗೆ ಹೋದಂತಾಗುತ್ತದೆ. ಜನರ ದೂರನ್ನು ನೋಡುವುದಕ್ಕೋಸ್ಕರ ನಾನು ಎಂಟು ಇಲ್ಲವೇ ಹದಿನೈದು ದಿವಸಕ್ಕೆ ಒಂದು ಸಲ ಬಸ್‌ಸ್ಟ್ಯಾಂಡ್‌ಗೆ ಹೋಗುತ್ತಿರುತ್ತೇನೆ. ತಮ್ಮ ಕೇಂದ್ರ ಕಛೇರಿಯಲ್ಲದೆ ಅಲ್ಲಿರುವ ಕೀ ಆಫೀಸರ್ಸ್‌ಗಳೇನಿದ್ದಾರೆ ಅವರು ಪ್ರಾಮಾಣಿಕರಾಗಿದ್ದಾರೆ. ಆದರೆ ವಿಭಾಗದ ಮಟ್ಟದಲ್ಲಿ, ಡಿಪೋ ಮಟ್ಟದಲ್ಲಿ ಬಸ್‌ಸ್ಟ್ಯಾಂಡ್‌ನಲ್ಲಿ ಕೆಲಸ ಮಾಡುವ ಅಧಿಕಾರಿಗಳು ಮನುಷ್ಯರಲ್ಲ. ಅವರಿಗೆ ಮಾನವೀಯತೆ ಇಲ್ಲ. ಈ ಶೆಡ್ಯೂಲ್‌ದನ್ನು ಕಿತ್ತು ಆ ಶೆಡ್ಯೂಲ್‌ಗೆ ಹಾಕುತ್ತಾರೆ, ಅದನ್ನು ಕಿತ್ತು ಮತ್ತೊಂದಕ್ಕೆ ಹಾಕುತ್ತಾರೆ. ನಮ್ಮ ಕಛೇರಿಗೆ ಹಾಗೂ ಮನೆಗೆ ಜನರು ದೂರವಾಣಿ ಮಾಡುತ್ತಾರೆ, ಇಲ್ಲದಿದ್ದರೆ ಮನೆಗೇ ಬಂದುಬಿಡುತ್ತಾರೆ. ನಾವೇನಾದರೂ ಅಲ್ಲಿಗೆ ಹೋದರೆ ನೀವೇ ಕಾರನ್ನು, ಟ್ಯಾಕ್ಸಿಯನ್ನು ಮಾಡಿಕೊಡಿ ಎಂದು ಹಿಡಿದುಕೊಳ್ಳುತ್ತಾರೆ. ಹೋದ ವರ್ಷ ಮಂಡ್ಯದಲ್ಲಿ ಸಾರಿಗೆ ಅದಾಲತ್ ಆಯಿತು. ಅಂದು ಶಾಸಕರುಗಳಾದ ನಾವು ಇಲ್ಲದಿದ್ದರೆ ತಮ್ಮ ಅಧಿಕಾರಿಗಳೊಬ್ಬರನ್ನೂ ಜನರು ಬಿಡುತ್ತಿರಲಿಲ್ಲ. ಅದೇ ರೀತಿ ಕೆ.ಪಿ.ಟಿ.ಸಿ.ಎಲ್. ನಲ್ಲೂ ಆಯಿತು. ಇನ್ನು ಆಡಳಿತ ಸುಧಾರಣೆ ಬಗ್ಗೆ ಹೇಳುವುದಾದರೆ, ಅದು ಕೇವಲ ತಮ್ಮ ಅಧಿಕಾರಿಗಳಿಗೆ ಮಾತ್ರ ಇರಬೇಕೆ? ಮಂತ್ರಿಮಂಡಲಕ್ಕೂ ಅದು ಇದೆಯೇ? ಇದರ ಬಗ್ಗೆ ತಾವು ಯೋಚನೆ ಮಾಡಬೇಕಾಗುತ್ತದೆ. ಮಂತ್ರಿಗಳಿಗೂ ನಮಗೂ ರಾಜಕಾರಣದಿಂದ ಇವತ್ತು ಬಹಳ ದೂರ. ಕಳೆದ ನಲವತ್ತು ವರ್ಷಗಳಿಂದ ಇದು ಇದೆ, ನಾವುಗಳು ಒಂದು ಕಡೆ ಸೇರಿದವರೇ ಅಲ್ಲ. ಪಂಚತಾರಾ ಸಂಸ್ಕೃತಿಯ ಶ್ರೀಮಾನ್ ಕೃಷ್ಣಾ ಎನ್ನುವಂಥ ಹೆಸರನ್ನು

ಪಡೆದಿದ್ದರೆ, ಅವರು ಆ ಮುಖಸೆಯಿಂದ ಹೊರಕ್ಕೆ ಬರುತ್ತಿದ್ದಾರೆ. ಆದರೆ 46 ಜನ ಸಚಿವರುಗಳೇನಿದ್ದೀರಿ ತಾವು ತಮ್ಮ ತಮ್ಮ ಕ್ಷೇತ್ರ, ನಿಮ್ಮ ನಿಮ್ಮ ಜಿಲ್ಲೆಯನ್ನು ಮಾತ್ರ ನೋಡಿಕೊಳ್ಳುತ್ತಿದ್ದೀರಿ. ಜಿಲ್ಲಾ ಮಂತ್ರಿಯ ವ್ಯವಸ್ಥೆಯು ಬಹಳ ಕೆಟ್ಟ ಪದ್ಧತಿ ಅದು ಸರಿಯಲ್ಲ. ಸಚಿವರಾದವರು ಇಡೀ ರಾಜ್ಯಕ್ಕೆ ಸಚಿವರು, ಅವರು ಕೇವಲ ಒಂದು ಜಿಲ್ಲೆಗೆ ಸಚಿವರಲ್ಲ. ಆದರೆ ಇವತ್ತು ಆ ರೀತಿ ಆಗುತ್ತಿಲ್ಲ. ನಾನು ಕೆ.ಸಿ. ರೆಡ್ಡಿಯವರ ಕಾಲದಿಂದಲೂ ನೋಡಿಕೊಂಡು ಬಂದಿದ್ದೇನೆ. ಎಲ್. ಸಿದ್ದಪ್ಪನವರು ಸಚಿವರಾಗಿದ್ದಾಗ ಮಂಡ್ಯಕ್ಕೆ ಒಂದು ಸಲ ಬಂದಿದ್ದರು, ನಾನು ಆಗ ಇನ್ನು ಚಿಕ್ಕ ಹುಡುಗ, ಆಗ ಶಾಲೆಯ ಒಂದೇ ಒಂದು ಕೊಠಡಿಯನ್ನು ಕಟ್ಟಿದ್ದರು. ಅವರು ಹಾಗೆ ಬಂದಂಥ ಸಂದರ್ಭದಲ್ಲಿ ಏನು ಹೆಂಚು ಬಿದ್ದುಹೋಗಿದೆಯಲ್ಲಾ ಎಂದು ಡಿ.ಸಿ. ಯವರಾಗಿದ್ದ ತಿಪ್ಪೇರುದ್ರಯ್ಯನವರನ್ನು ಕೇಳಿದರು, ಆಗ ಅವರು ಈ ಊರಿನ ಜನರು ತರಲೆಗಳು ಎಂದು ಹೇಳಿದರು. ಆಗ ಸಿದ್ದಪ್ಪನವರು ಏನು ತಿಪ್ಪೇರುದ್ರಯ್ಯನವರೇ ಹೀಗೆ ಮಾತನಾಡುತ್ತೀರಿ, ಜನರು ವೋಟು ಹಾಕುವುದಿಲ್ಲವೇ ಎಂದು ಕೇಳಿದರು, ಆಗ ತಿಪ್ಪೇರುದ್ರಯ್ಯನವರು ನನಗೇಕೆ ವೋಟು ಹಾಕುತ್ತಾರೆ ನಿಜವನ್ನೇ ನಾನು ಹೇಳುತ್ತಿದ್ದೇನೆಂದು ಹೇಳಿದರು. ಇವತ್ತಿನ ದಿವಸ ಯಾವ ಸಚಿವರು ಯಾವ ಊರಿಗೆ ಹೋಗಿ ನೋಡುತ್ತಿದ್ದಾರೆ? ಯಾವ ಕಾರ್ಯಕ್ರಮಗಳಿಗೆ ಹೋಗುತ್ತೀರಿ? ಆದರೆ ನಿಜವಾಗಿಯೂ ರಾಜ್ಯಾದ್ಯಂತ ಪ್ರವಾಸ ಮಾಡಿ ತಮ್ಮ ತಮ್ಮ ಕ್ಷೇತ್ರದಲ್ಲಿ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ನಡೆಸಿದ್ದೇ ಆದರೆ ಐದು ವರ್ಷಗಳಲ್ಲಿ ರಾಮರಾಜ್ಯವನ್ನು ಮಾಡಲು ಸಾಧ್ಯವಾಗುತ್ತದೆ. ಆ ಕೆಲಸವನ್ನು ಮಾಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್.ಜಿ. ನಂಜಯ್ಯನಮಠ್ **(ಗುಳೇದಗುಡ್ಡ)**: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ರಾಜ್ಯಕ್ಕೆ ನೀಡಿರುವ ಈ ವರ್ಷದ ಬಜೆಟ್‌ನ್ನು ಸ್ವಾಗತ ಮಾಡುತ್ತೇನೆ. ಪಕ್ಷದ ಒಬ್ಬ ಶಾಸಕನಾಗಿ ಇದನ್ನು ಸ್ವಾಗತ ಮಾಡುತ್ತಿರತಕ್ಕದಲ್ಲ. ರಾಜ್ಯದ ಬಹು ಜನತೆ, ಆರ್ಥಿಕ ತಜ್ಞರು, ಬಹಳಷ್ಟು ಪತ್ರಿಕೆಯವರು, ಚಾರ್ಟೆಡ್ ಅಕೌಂಟ್ಸ್‌ನವರು, ವಿಶೇಷವಾಗಿ ಈ ಬಜೆಟ್ ಬಹಳಷ್ಟು ಹೊಗಳಿಸಿಕೊಳ್ಳುವಷ್ಟು ಇರದಿದ್ದರೂ ಕಿಂಚಿತ್ತು ಬೈಸಿಕೊಳ್ಳತಕ್ಕ ಬಜೆಟ್ ಅಲ್ಲ ಎಂದು ಹೇಳಿದ್ದಾರೆ. ಆದರೆ ಕರ್ತವ್ಯ ಪಾಲನೆಯ ದೃಷ್ಟಿಯಿಂದ ವಿರೋಧ ಪಕ್ಷದಲ್ಲಿದ್ದಾಗ ಇದನ್ನು ಟೀಕೆ ಮಾಡಿದರೆ ಮಾತ್ರ ಸಾರ್ಥಕ ಎಂಬ ದೃಷ್ಟಿಯಿಂದ ಅಥವಾ ಹಲವಾರು ಸಲಹೆ ಸೂಚನೆಗಳನ್ನು ಕೊಡಬೇಕು ಎಂಬ ದೃಷ್ಟಿಯಿಂದ ಎಲ್ಲವನ್ನೂ ಸ್ವಾಗತ ಮಾಡಲು ಅವರುಗಳು ವಿರೋಧ ಪಕ್ಷದಲ್ಲಿರುವುದೇ ಅಡ್ಡ ಬಂದಿದೆ ಎಂಬ ಸಂಶಯ ನನಗೆ ಬರುತ್ತಿದೆ. ಆದರೂ ಕೆಲವನ್ನಾದರೂ ಸ್ವಾಗತ ಮಾಡಿದ್ದಾರೆ. ಹೃದಯವಿದ್ದವರ್ಯಾರೂ ಈ ಬಜೆಟ್‌ನ ಬಗ್ಗೆ ಟೀಕೆಯನ್ನು ಮಾಡಿಲ್ಲ. ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ, ಮುಂದಿನ ಭವಿಷ್ಯದ ದೃಷ್ಟಿಯಿಂದ ಈ ಬಜೆಟ್ ಪೂರಕವಾಗಿದೆ. ಸವಾಲುಗಳನ್ನು ಎದುರಿಸುವಂಥ ಯೋಚನೆ ಬಹಳ ಮುಖ್ಯ. ಮುಂದಿನ ಚುನಾವಣೆ ದೃಷ್ಟಿಯಿಂದ, ರಾಜಕೀಯ ದೃಷ್ಟಿಯಿಂದ ಬಜೆಟ್ ಮಂಡಿಸುವ ದೃಷ್ಟಿ ಇರಬಾರದು. ಮುಂದಿನ ಪೀಳಿಗೆಯ ಭವಿಷ್ಯದ ದೃಷ್ಟಿಯಿಂದ ಇಂಥ ಬಜೆಟ್‌ನ್ನು ಕೊಟ್ಟಿರುವುದಿದ್ದರೆ ಇದೇ ಮೊದಲನೆಯ ಬಜೆಟ್ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇಲ್ಲಿ ಸವಾಲುಗಳನ್ನು ಕಂಡುಹಿಡಿದಿದ್ದಾರೆ. ಇದು ಬಹಳ ಮುಖ್ಯ. ಸುಮ್ಮನೆ ಹಣವನ್ನು

ಹಂಚಿಕೊಡುವುದು ಮುಖ್ಯವಲ್ಲ. ಆ ಸವಾಲುಗಳನ್ನು ಸಮರ್ಪಕವಾಗಿ, ಯೋಜನಾ ಬದ್ಧವಾಗಿ ವಿವೇಕತೆಯಿಂದ ಎದುರಿಸತಕ್ಕಂಥ ಬಜೆಟ್ ಇದು ಎನ್ನುವುದು ಇಲ್ಲಿ ಕೊಟ್ಟಿರುವ ಅಂಕಿಅಂಶಗಳಿಂದ ಮತ್ತು ಆಯಾಯ ಇಲಾಖೆಗಳಿಗೆ ಕೊಟ್ಟಿರುವ ಹಣಕಾಸಿನ ವ್ಯವಸ್ಥೆಗೆ ಸಾಕ್ಷಿಯಾಗಿದೆ. ನಾನು ಪ್ರಥಮವಾಗಿ ವಿದ್ಯುತ್ ಬಗ್ಗೆ ಹೇಳಬಯಸುತ್ತೇನೆ. ವಿದ್ಯುತ್ ಕೊರತೆ ಸುಮಾರು 18 ವರ್ಷಗಳಿಂದಲೂ ಬಂದಿದೆ. ನಮ್ಮ ಕಾಲದಲ್ಲೇ ವಿದ್ಯುತ್ ಕೊರತೆ ಪ್ರಾರಂಭವಾಗಿಲ್ಲ. ಹಿಂದಿನ ಸರ್ಕಾರದಲ್ಲಿ ವಿದ್ಯುತ್ ಯಾವಾಗಲಾದರೊಮ್ಮೆ ಬರುತ್ತಿತ್ತು, ಆದರೆ ಈಗಿನ ಸರ್ಕಾರದಲ್ಲಿ ವಿದ್ಯುತ್ ಯಾವಾಗಲಾದರೊಮ್ಮೆ ಹೋಗುತ್ತದೆ ಎಂದು ಜನರು ಮಾತನಾಡುತ್ತಾರೆ. ರೈತರನ್ನೇ ಕೇಳಿ, ಈ ವರ್ಷದಲ್ಲಿ ಸಾಕಷ್ಟು ಪಂಪುಸೆಟ್ಟುಗಳಿಗೆ ಸತತವಾಗಿ ಏಳೆಂಟು ಗಂಟೆಗಳ ಕಾಲ ವಿದ್ಯುತ್ ಸರಬರಾಜಾಗುತ್ತಿದೆಯೆಂದು ಹೇಳುತ್ತಾರೆ. ನಮಗೆ 83,968 ಮಿಲಿಯನ್ ಯನಿಟ್‌ಗಳ ಸರಬರಾಜಾಗುತ್ತಿದೆ. ಇದರಲ್ಲಿ 25,208 ಮಿಲಿಯನ್ ಯೂನಿಟ್‌ಗಳನ್ನು ಬೇರೆ ಕಡೆಯಿಂದ ತಂದು ಕೊಡಬೇಕಾಗುತ್ತದೆ. ಒಟ್ಟು 89,175 ಮಿಲಿಯನ್ ಯೂನಿಟ್‌ಗಳನ್ನು ಪೂರೈಕೆ ಮಾಡುತ್ತಿರತಕ್ಕದ್ದು. ನಮ್ಮ ಬೇಡಿಕೆ 95,000 ಮಿಲಿಯನ್ ಯೂನಿಟ್‌ಗಳು, ಕೊರತೆ ಇನ್ನೂ 5,875 ಮಿ. ಯೂ. ಕಳೆದ ಹತ್ತು ವರ್ಷಗಳಿಂದ ವಿದ್ಯುತ್ ಉತ್ಪಾದನೆ, ಪೂರೈಕೆಯ ಬಗ್ಗೆ ಯಾರೂ ಕೂಡ ಹೆಚ್ಚು ಲಕ್ಷ್ಯವನ್ನು ಕೊಟ್ಟಿರುವ ಉದಾಹರಣೆಗಳು ಇಲ್ಲ. ಇವತ್ತು ಕೊರತೆ ಇದ್ದರೂ ಸಹ, ಮಾನ್ಯ ಎಸ್.ಎಸ್. ಪಾಟೀಲರು ರಾತ್ರಿ ಸಮಯದಲ್ಲಿ ನೀರನ್ನು ಹಾಯಿಸುವುದು ಕಷ್ಟವೆಂದು ಹೇಳಿದರು.

5.50 ಪಿ.ಎಂ.

ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಇಂದು ವಿದ್ಯುತ್ ಅಭಾವವಿದ್ದರೂ ಕೂಡ ನಮ್ಮ ಸರ್ಕಾರ ರಾತ್ರಿ ಹತ್ತು ಗಂಟೆಯಿಂದ ಬೆಳಗಿನ ಜಾವದವರೆಗೆ ಒಟ್ಟು ಹತ್ತು ಗಂಟೆಗಳ ಕಾಲ ನೀರನ್ನು ಹಾಯಿಸಲು ಅನುಕೂಲಮಾಡಿಕೊಟ್ಟಿದೆ. ಇದನ್ನು ಕೂಡ ಒಬ್ಬ ರೈತನಾಗಿ ಸ್ವಾಗತ ಮಾಡದಿದ್ದರೆ ಹೇಗೆ? ಎಲ್ಲರಿಗೂ ಕೂಡ ಇದರಿಂದ ಸಂತೋಷವಾಗಿದೆ. ರಾತ್ರಿ ಹೊತ್ತು ಹುಳಹುಪ್ಪಟೆಗಳು, ಹಾವು, ಚೇಳು ಇರುವ ಸಂಭವನೀಯತೆಗಳನ್ನು ನಾನು ಕೂಡ ಒಪ್ಪಿಕೊಳ್ಳುತ್ತೇನೆ. ಆದರೆ ಪರಿಸ್ಥಿತಿ ಇಂದು ರಾತ್ರಿ ಹೊತ್ತು ನಿರಂತರವಾಗಿ ವಿದ್ಯುತ್ ಸರಬರಾಜು ಮಾಡುವ ಹಾಗೆ ಮಾತ್ರವಿದೆ. ರಾತ್ರಿ ಹತ್ತು ಗಂಟೆಗಳ ಕಾಲ ವಿದ್ಯುತ್ ಸರಬರಾಜನ್ನು ರೈತರ ಸಲುವಾಗಿ ಜನತಾದಳ ಸರ್ಕಾರ ಮಾಡಿರಲಿಲ್ಲ. ಇದನ್ನು ಅವರೂ ಕೂಡ ಯೋಚನೆ ಮಾಡಲಿ.

ಶ್ರೀ ಎಸ್.ಎಸ್. ಪಾಟೀಲ್: ನಂಜಯ್ಯನಮಠ್‌ರವರೆ, ನಮ್ಮ ಸರ್ಕಾರದ ಅವಧಿಗಿಂತಲೂ ಹಿಂದೆ ನಿಮ್ಮ ಸರ್ಕಾರವಿದ್ದಾಗ ಒಂದು ಯೂನಿಟ್ ವಿದ್ಯುತ್ ಉತ್ಪಾದನೆಯನ್ನಾದರೂ ಹೆಚ್ಚು ಮಾಡಿದ್ದೀರಾ ಎಂಬ ಬಗ್ಗೆ ನೋಡಿ ಹೇಳಿ. ನಾವು ಐದು ವರ್ಷಗಳ ಕಾಲ ಆಡಳಿತದಲ್ಲಿದ್ದಾಗ ವಿದ್ಯುತ್ ಉತ್ಪಾದನೆಗೆ ಏನು ಮಾಡಿದ್ದೇವೆ ಎಂಬುದನ್ನು ನೀವು ಹೇಳಿ. ನಾವು ವಿದ್ಯುತ್ ಉತ್ಪಾದನೆಯನ್ನು ಹೆಚ್ಚು ಮಾಡಿದ ಕಾರಣದಿಂದಲೇ ಇಂದು ಇಷ್ಟರಮಟ್ಟಿಗಾದರೂ ನಡೆದುಕೊಂಡು ಹೋಗುತ್ತಿದೆ.

ಶ್ರೀ ಎಸ್.ಜಿ. ನಂಜಯ್ಯನಮಠ್: ಮಾನ್ಯ ಎಸ್.ಎಸ್. ಪಾಟೀಲರೇ, ನಿಮ್ಮ ಸರ್ಕಾರದಲ್ಲಿ ಕನಿಷ್ಠ ಆರು ಗಂಟೆಗಳ ಕಾಲ ಕೂಡ ಕರೆಂಟ್ ಕೊಟ್ಟಿರಲಿಲ್ಲ. ಆದರೆ ನಮ್ಮ ಸರ್ಕಾರ ಬರತಕ್ಕಂಥ ದಿನಗಳಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ನಿರಂತರವಾಗಿ ಹತ್ತು ಗಂಟೆಗಳ ಕಾಲ ವಿದ್ಯುತ್ ಸರಬರಾಜನ್ನು ಮಾಡುತ್ತೇವೆಂದು ಹೇಳಿದೆ. ಇದರಲ್ಲಿ ಏನಾದರೂ ಅವ್ಯವಸ್ಥೆಯಾದರೆ ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿಗಳ ಗಮನಕ್ಕೆ ನೀವು ತೆಗೆದುಕೊಂಡು ಬರಬಹುದು. ಆದರೆ ಆ ರೀತಿಯ ಅವ್ಯವಸ್ಥೆಯಾಗುವುದಿಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಇನ್ನು ನಮ್ಮ ಸರ್ಕಾರ ಮುಂದಿನ ದಿನಗಳಲ್ಲಿ ಸುಮಾರು 680 ಮೆಗಾವಾಟ್ ವಿದ್ಯುತ್ ಉತ್ಪಾದನೆಯನ್ನು ಮಾಡುವ ಗುರಿ ಹಾಕಿಕೊಂಡಿದೆ. ರಾಯಚೂರು ಘಟಕದಿಂದ 2003 ರೊಳಗೆ 210 ಮೆಗಾವ್ಯಾಟ್, ಆಲಮಟ್ಟಿ ಘಟಕದಿಂದ 2004 ರೊಳಗೆ 290 ಮೆಗಾವ್ಯಾಟ್ ಮತ್ತು ಗೇರುಸೊಪ್ಪೆ ಒಂದು, ಎರಡು ಮತ್ತು ಮೂರನೇ ಘಟಕದಿಂದ 180 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯನ್ನು ಮಾಡಲು ಗುರಿ ಹಾಕಿಕೊಂಡಿದೆ. ಈ ವಿದ್ಯುತ್ ಉತ್ಪಾದನೆಯನ್ನು ಮಾಡಿ ಜನರಿಗೆ ಉಪಯೋಗಿಸಲು ಕೊಡಬೇಕೆಂಬ ಇಚ್ಛೆ ಸರ್ಕಾರಕ್ಕಿಂದೆ. ಇದರಲ್ಲಿ ಹಿಂದೆ ಬೀಳುವ ಸಾಧ್ಯತೆಯೇ ಇಲ್ಲ. ಇನ್ನು ಬಹುಶಃ ಎಲ್ಲಾ ಪಕ್ಷದವರು ಮೆಚ್ಚಬಹುದಾದ ವಿಷಯವನ್ನು ಹೇಳಲಾಗಿದೆ. ಅದೇನೆಂದರೆ ಎಲ್ಲಾ ರೀತಿಯ ಗ್ರಾಹಕರಿಗೂ ಮೀಟರ್ ಅಳವಡಿಸಲಾಗುವುದೆಂದು ನಮ್ಮ ಸರ್ಕಾರ ಹೇಳಿದೆ. ವಿದ್ಯುತ್‌ನ್ನು ಪುಕ್ಕಟೆಯಾಗಿ ಕೊಟ್ಟರೆ ರಾಜ್ಯದ ಅಭಿವೃದ್ಧಿಗೆ ಪೂರಕವಾಗುತ್ತದೆನ್ನುವುದನ್ನು ನಾವೆಲ್ಲರೂ ಸ್ಪಷ್ಟವಾಗಿ ಒಪ್ಪಿಕೊಳ್ಳಲೇಬೇಕಾಗುತ್ತದೆ. ನಾನು ಇನ್ನೊಂದು ಸಲಹೆಯನ್ನು ಸರ್ಕಾರಕ್ಕೆ ಕೊಡುತ್ತೇನೆ. ಅದೇನೆಂದರೆ ವಿದ್ಯುತ್ ಪ್ರಸರಣ ನಿಗಮದಲ್ಲಿರುವ ನೌಕರರೂ ಕೂಡ ವಿದ್ಯುತ್ ಬಿಲ್‌ನ್ನು ಪಾವತಿ ಮಾಡುವ ಹಾಗೆ ಅವರಿಗೂ ಮೀಟರ್‌ನ್ನು ಅಳವಡಿಸಬೇಕೆಂದು ಹೇಳಬಯಸುತ್ತೇನೆ. ಅವರಿಗೆ ವಿದ್ಯುತ್‌ನ್ನು ಏಕೆ ಪುಕ್ಕಟೆಯಾಗಿ ಕೊಡಬೇಕು? ಆಹಾರ ಇಲಾಖೆಯವರಿಗೆ, ರೇಷ್ಮೆ ಇಲಾಖೆಯವರಿಗೆ, ಹ್ಯಾಂಡ್‌ಲೂಮ್ ಇಲಾಖೆಯವರಿಗೆ ಆಯಾಯ ಇಲಾಖೆಯ ಉತ್ಪಾದನೆಯನ್ನು ನೌಕರರುಗಳಿಗೆ ಪುಕ್ಕಟೆಯಾಗಿ ಕೊಡುತ್ತೇವೆಯೇ? ಇಲ್ಲ. ಅದೇರೀತಿ ವಿದ್ಯುತ್ ಇಲಾಖೆಯ ನೌಕರರುಗಳಿಗೂ ಕೂಡ ವಿದ್ಯುತ್‌ನ್ನು ಪುಕ್ಕಟೆಯಾಗಿ ಕೊಡದೇ ಅವರಿಗೂ ಮೀಟರ್ ಅಳವಡಿಸಿ ವಿದ್ಯುತ್ ದರವನ್ನು ನಿಗದಿ ಮಾಡಬೇಕೆಂದು ಹೇಳುತ್ತೇನೆ. ಸರ್ಕಾರ ಬೇಕಾದರೆ ಅವರಿಗೆ ರಿಯಾಯಿತಿ ದರವನ್ನು ನಿಗದಿ ಮಾಡಲಿ. ಭಾಗ್ಯಜ್ಯೋತಿ ಯೋಜನೆಯ ಫಲಾನುಭವಿಗಳಿಗೂ ಕೂಡ ವರ್ಷಕ್ಕೆ ಇಂತಿಷ್ಟು ವಿದ್ಯುತ್ ಬಿಲ್‌ನ್ನು ಪಾವತಿ ಮಾಡಲು ನಿಗದಿ ಮಾಡಿದರೆ ತಪ್ಪೇನಿಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಆದರೆ, ಇಷ್ಟು ವರ್ಷಗಳಿಂದ ಆ ಯೋಜನೆಯ ಫಲಾನುಭವಿಗಳು ಏನು ಬಿಲ್ ಕೊಡಬೇಕೋ ಅದನ್ನು ರದ್ದು ಮಾಡಿ ಇನ್ನು ಮುಂದೆ ಕನಿಷ್ಠ ದರವನ್ನು ನಿಗದಿ ಮಾಡಿ ಅದನ್ನು ಕಟ್ಟುವಂತೆ ಹೇಳಬೇಕು. ಏಕೆಂದರೆ ದುಡ್ಡು ಕೊಟ್ಟು ವಿದ್ಯುತ್ ಪಡೆದಾಗಲೇ ಅದರ ಮಹತ್ವ ಪ್ರತಿಯೊಬ್ಬರಿಗೂ ಅರಿವಾಗುತ್ತದೆ ಎನ್ನುವುದೇ ನನ್ನ ಅಭಿಪ್ರಾಯ. ಇಂದು ವಿದ್ಯುತ್ ಇಲಾಖೆಯ ನೌಕರರುಗಳು ಮನೆಯಲ್ಲಿ ಎಲ್ಲಾ ಕಡೆಯಲ್ಲಿಯೂ ಲೈಟ್ ಹಾಕಿರುತ್ತಾರೆ, ಅದೂ 24 ಗಂಟೆಯೂ ಉರಿಯುತ್ತಿರುತ್ತದೆ, ಏಕೆಂದರೆ ವಿದ್ಯುತ್ ಬಿಲ್ ಕಟ್ಟುವ ಗೋಜೇ ಅವರಿಗಿಲ್ಲದಿರುವುದರಿಂದ ಅವರ ಬಗ್ಗೆ ಅವರು ಗಮನ

ಹರಿಸುವುದಿಲ್ಲ. ಆದರೆ ನಾವು ಮತ್ತು ನೀವು ಒಂದು ರೂಮಿನಲ್ಲಿ ಲೈಟ್ ಹಾಕಿದ್ದರೆ ಮತ್ತೊಂದು ರೂಮಿಗೆ ಹೋಗುವಾಗ ರಾತ್ರಿ ಮೊದಲು ಮೊದಲಿನ ರೂಮಿನಲ್ಲಿ ಸ್ವಿಚ್ ಆಫ್ ಮಾಡುತ್ತೇವೆ. ಆದರೆ ಈ ರೀತಿಯಲ್ಲಿ ವಿದ್ಯುತ್ ಇಲಾಖೆಯ ನೌಕರರು ಮಾಡುವುದಿಲ್ಲ. ಆದುದರಿಂದ, ಇಂದು ವಿದ್ಯುತ್ ಇಲಾಖೆಯ ಅಧ್ಯಕ್ಷರಿಂದ ಹಿಡಿದು ಎಲ್ಲಾ ಬಗೆಯ ನೌಕರರ ಮನೆಗಳಿಗೆ ವಿದ್ಯುತ್ ಮೀಟರ್ ಅಳವಡಿಸಿ ದರವನ್ನು ನಿಗದಿ ಮಾಡಿ ವಸೂಲು ಮಾಡಿದರೆ ತಪ್ಪೇನಿಲ್ಲವೆಂಬುದು ನನ್ನ ಅಭಿಪ್ರಾಯ. ಇಂದು ಸರ್ಕಾರ ಹಣವನ್ನು ಪ್ರಿಂಟ್ ಮಾಡಿ ರಾಜ್ಯದ ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ. ರಾಜ್ಯಕ್ಕೆ ಬರುವ ತೆರಿಗೆಯ ಹಣದಿಂದ, ಮತ್ತಿನ್ನಿತರ ವರಮಾನದಿಂದ ಹಾಗೂ ವಿಶ್ವಬ್ಯಾಂಕ್ ನೆರವಿನ ಸಾಲವನ್ನು ಪಡೆದು ಅಭಿವೃದ್ಧಿ ಮಾಡಬೇಕಾಗಿದೆ. ಈ ವಿಷಯದಲ್ಲಿ ಎಲ್ಲಾ ಬಗೆಯ ಜನರು ಸಹಕಾರ ಕೊಟ್ಟರೆ ಮಾತ್ರ ರಾಜ್ಯದ ಅಭಿವೃದ್ಧಿ ಚೆನ್ನಾಗಿ ನಡೆಯಲು ಸಾಧ್ಯವಾಗುತ್ತದೆ. ಇಂದು ನಮ್ಮ ಸರ್ಕಾರ ನಿರಂತರವಾಗಿ ಹತ್ತು ಗಂಟೆಗಳ ಕಾಲ ರಾತ್ರಿ ಹೊತ್ತು ವಿದ್ಯುತ್ ಸರಬರಾಜು ಮಾಡುತ್ತೇವೆಂದು ನಿರ್ಣಯ ಮಾಡಿರುವುದನ್ನು ರಾಜ್ಯದ ಎಲ್ಲಾ ರೈತರು ಸ್ವಾಗತ ಮಾಡಿದ್ದಾರೆನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳಲು ಇಚ್ಛಿಸುತ್ತೇನೆ. ಇನ್ನು ಈ ವರ್ಷ ಹೆಚ್ಚು ಬೆಳೆ ಬಂದಿದ್ದು ಬೆಲೆ ಕುಸಿದಿರುವುದು ನಿಜ. ಕಳೆದ ವರ್ಷ ಒಂದು ಎಕರೆಗೆ ಮೂರು ಚೀಲ ಬಿಳಿಜೋಳ ಬೆಳೆದಿದ್ದರೆ ಈ ವರ್ಷ ರೈತ ಐದು ಚೀಲ ಬೆಳೆದಿದ್ದಾನೆ. ಹಾಗಾಗಿ ಒಂದು ಕ್ವಿಂಟಾಲ್ ಬಿಳಿಜೋಳಕ್ಕೆ ಕಳೆದ ವರ್ಷ 1000 ರೂಪಾಯಿಗಳಿದ್ದರೆ ಈ ವರ್ಷ ಆ ದರ 300 ರಿಂದ 450 ರೂಪಾಯಿಗಳಿಗೆ ಇಳಿದಿವೆ. ಇದರ ಜೊತೆಗೆ ಈ ಬೆಲೆ ಕುಸಿತಕ್ಕೆ ಮತ್ತೊಂದು ಕಾರಣವೆಂದರೆ ಈ ರಾಜ್ಯದಿಂದ ಬೇರೆ ರಾಜ್ಯಕ್ಕೆ ಬೆಳೆದ ಉತ್ಪನ್ನಗಳು ರಫ್ತಾಗದೇ ಇರುವುದೂ ಕೂಡ ಒಂದು ಕಾರಣವಾಗಿದೆ. ಏಕೆಂದರೆ ಮಹಾರಾಷ್ಟ್ರಕ್ಕೆ ಸಾಮಾನ್ಯವಾಗಿ ಜೋಳ ಮತ್ತು ಕಬ್ಬು ಮತ್ತು ಇತರ ಉತ್ಪನ್ನಗಳು ನಮ್ಮ ರಾಜ್ಯದಿಂದಲೇ ಹೋಗುತ್ತವೆ. ಆದರೆ ಆ ರಾಜ್ಯದವರು ಈ ಉತ್ಪನ್ನಗಳನ್ನು ಹೆಚ್ಚು ಬೆಳೆದಿದ್ದೇ ಆದರೆ ಆ ವರ್ಷದಲ್ಲಿ ನಮ್ಮ ಉತ್ಪಾದನೆಗೆ ರಾಜ್ಯದಲ್ಲಿ ಬೆಲೆ ಕಡಿಮೆಯಾಗಿಬಿಡುತ್ತದೆ. ಇಂಥ ದಿನಗಳಲ್ಲಿ ನಮ್ಮ ರಾಜ್ಯ ಸರ್ಕಾರ ರೈತರಿಂದ ಉತ್ಪನ್ನಗಳನ್ನು ಸಂಪೂರ್ಣವಾಗಿ ಖರೀದಿ ಮಾಡದಿದ್ದರೂ ಹೆಚ್ಚಿನ ಪ್ರಮಾಣದಲ್ಲಿ ಖರೀದಿ ಕೇಂದ್ರಗಳನ್ನು ತೆರೆದು ಖರೀದಿ ಮಾಡಿದೆಯೆಂದು ನಾನು ಹೇಳಬಯಸುತ್ತೇನೆ. ರಾಜ್ಯ ಸರ್ಕಾರಕ್ಕೆ ಈ ವರ್ಷ ಸಿಡಿಲು ಬಡಿದ ಹಾಗೆ ಇಂಥ ಪರಿಸ್ಥಿತಿ ಒಮ್ಮಿಂದೊಮ್ಮೆಲೇ ಬಂದಿದ್ದರಿಂದ ಸ್ವಲ್ಪ ತೊಂದರೆಯಾಯಿತಷ್ಟೆ. ಆದರೂ 3 ಲಕ್ಷ 90 ಸಾವಿರ ಕ್ವಿಂಟಾಲ್ ಮೆಕ್ಕೆ ಜೋಳವನ್ನು ಖರೀದಿ ಮಾಡಲಾಗಿದೆ, 11,305 ಕ್ವಿಂಟಾಲ್ ಭತ್ತವನ್ನು, 17 ಸಾವಿ ಕ್ವಿಂಟಾಲ್ ತೊಗರಿ, 61 ಸಾವಿರ ಕ್ವಿಂಟಾಲ್ ರಾಗಿಯನ್ನು ನಮ್ಮ ಸರ್ಕಾರ ಖರೀದಿ ಮಾಡಿದೆ. ಅತ್ಯಧಿಕ ಉತ್ಪಾದನೆಯಿಂದಾಗಿ ಬೆಳಗೆ ಬೆಲೆ ಸಿಗದೇ ಖರೀದಿಯೂ ಆಗದಿದ್ದರಿಂದ ಎಷ್ಟೋ ರೈತರು ತರಕಾರಿಗಳನ್ನು ರಸ್ತೆಗೆ ತಂದು ಚೆಲ್ಲಿದ್ದರು. ನಾಳೆ ರಸ್ತೆಗೆ ಉತ್ಪನ್ನಗಳನ್ನು ಚೆಲ್ಲುತ್ತಾರೆ ಎನ್ನುವಾಗ ಅದನ್ನು ಖರೀದಿ ಮಾಡಲು ಯಾವ ಸರ್ಕಾರ ತಾನೇ ವ್ಯವಸ್ಥೆ ಮಾಡುತ್ತದೆ ಎನ್ನುವ ಬಗ್ಗೆ ಎಲ್ಲರೂ ವಿಚಾರ ಮಾಡಬೇಕು. ಸುಮಾರು 1 ಕೋಟಿ 37 ಲಕ್ಷ ಟನ್ ಆಲೂಗಡ್ಡೆಯನ್ನು ಹುಬ್ಬಳ್ಳಿಯಲ್ಲಿ ಶ್ರೀಮಾನ್ ಹೆಚ್.ಕೆ. ಪಾಟೀಲ್‌ರವರು ಹಾಗೂ ಶ್ರೀಮಾನ್ ಹಿಂಡಸಗೇರಿಯವರು ನಿಂತು ಖರೀದಿ ಮಾಡಿದ್ದಾರೆ. ಅದರಲ್ಲಿ 37 ಲಕ್ಷ ಟನ್

ಆಲೂಗೆಡ್ಡೆ ಕೊಳೆತುಹೋಗಿತ್ತು. ಟೊಮ್ಯಾಟೋ ಹಣ್ಣನ್ನು ಒಮ್ಮೆಗೇ ಸರ್ಕಾರ ಖರೀದಿ ಮಾಡಿ ಇಟ್ಟುಕೊಳ್ಳಲು ಸಾಧ್ಯವೇ? ಒಮ್ಮೊಮ್ಮೆ ಇಂಥ ಪರಿಸ್ಥಿತಿ ಬಂದು ರೈತರಿಗೆ ತೊಂದರೆಯಾಗುತ್ತದೆ. ಈ ದೃಷ್ಟಿಯಿಂದಲೇ ನಮ್ಮ ಸರ್ಕಾರ ಸುಮಾರು 200 ಕೋಟಿ ರೂಪಾಯಿಗಳ ರೈತರ ಕಲ್ಯಾಣ ನಿಧಿಯನ್ನು ಸ್ಥಾಪನೆ ಮಾಡಿದೆ. ಇದರ ಜೊತೆ ಮೂರೂವರೆ ಲಕ್ಷ ಟನ್ ಸಾಮರ್ಥ್ಯದ ಗೋದಾಮುಗಳನ್ನು ಕಟ್ಟಲು ನಮ್ಮ ಸರ್ಕಾರ ನಿರ್ಣಯ ಮಾಡಿದೆ. ಇದನ್ನು ರೈತರ ಹಿತದೃಷ್ಟಿಯಿಂದಲೇ ಮುಂಜಾಗ್ರತಾ ಕ್ರಮವಾಗಿ ಕಟ್ಟಲಾಗುತ್ತದೆ. ಇನ್ನು ವಸತಿ ಬಗ್ಗೆ ಹೇಳಬೇಕೆಂದರೆ ಸಮರೋಪಾದಿಯಲ್ಲಿ ಇಂದು ಕೆಲಸ ನಡೆದಿದ್ದು ಇನ್ನೂ ಹಲವು ಕಡೆ ಫಲಾನುಭವಿಗಳನ್ನೇ ಆಯ್ಕೆ ಮಾಡದ ಉದಾಹರಣೆಗಳಿವೆ. ಕೆಲವು ಕಡೆ ಮತಕ್ಷೇತ್ರಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿ 600 ಮನೆಗಳನ್ನು ಒಂದೊಂದು ಮತ ಕ್ಷೇತ್ರದಲ್ಲಿ ಹಂಚಲಾಗಿದೆ. ಒಂದೊಂದು ಮತ ಕ್ಷೇತ್ರದಲ್ಲೂ ಸುಮಾರು 90 ಪರ್ಸೆಂಟ್ ಕಟ್ಟಡದ ಕೆಲಸ ಮುಗಿದು ಇಂದು ಲಿಂಟಲ್ ಲೆವೆಲ್‌ವರೆಗೆ ಬಂದಿರುವುದನ್ನು ಯಾರೂ ಬೇಕಾದರೂ ನೋಡಿಕೊಂಡು ಬರಬಹುದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ನಿಮ್ಮ ಕಾಲಾವಧಿಯಲ್ಲೇ ನೀವು ಕೊಟ್ಟಿರತಕ್ಕಂಥಾದ್ದು ಎಷ್ಟು? ನನ್ನ ಮತ ಕ್ಷೇತ್ರದ್ದೇ ಹೇಳುತ್ತೇನೆ ಒಂದು ಉದಾಹರಣೆ. ಬೇರೆ ಬೇಡ. ಗುಳೇದಗುಡ್ಡ ಬಗ್ಗೆ ಹೇಳುತ್ತೇನೆ, 1997-98ರಲ್ಲಿ 29 ಮನೆಗಳನ್ನು ಕೊಟ್ಟರು. 1998-99 ರಲ್ಲಿ ಒಂದೂ ಇಲ್ಲ. 2000-2001ನೇ ವರ್ಷದಲ್ಲಿ ನಾವು 160 ಮನೆಯನ್ನು ಹಂಚಿ 85 ಮನೆಗಳನ್ನು ಪುನಃ ಕಟ್ಟುವುದಕ್ಕೆ ಬಂದಿದ್ದು, ಆ 85 ಮನೆಗಳನ್ನು ಕಟ್ಟುತ್ತಿದ್ದಾರೆ. ಇವತ್ತು ಅಲ್ಲಿ ಕೆಲಸ ನಡೆದಿರುವಂತಹ ಸ್ಥಿತಿ. ಇದು ಅಭಿವೃದ್ಧಿ ಅಲ್ಲವೇ? ಇದಕ್ಕೆ ಕಿವಿ ಬೇಕಾಗುತ್ತದೆ, ಕಣ್ಣು ಬೇಕಾಗುತ್ತದೆ ಹಾಗೂ ಹೃದಯ ಬೇಕಾಗುತ್ತದೆ ಎಂದು ನಾನು ಹೇಳಿದ್ದು ಇದೆ. ಇದನ್ನು ಸ್ವಾಗತ ಮಾಡಲೇಬೇಕಾಗುತ್ತದೆ. ಹಿಂದೆ ನೀವು ನಿಮ್ಮ ಕಾಲಾವಧಿಯಲ್ಲಿ ಕೊಟ್ಟಿರತಕ್ಕಂಥ ಅಂಕಿಸಂಖ್ಯೆ ಇದೆ. ಇನ್ನೂ ಕೂಡ ನನ್ನ ಸರ್ಕಾರ ಎರಡು ಲಕ್ಷ ಮನೆಗಳನ್ನು ಕೊಡಬೇಕೆಂದು ಗುರಿ ಇಟ್ಟುಕೊಂಡಿದೆ. ಈ ಮನೆಗಳ ಹಂಚಿಕೆ ಏನು ತೋರಿಸುತ್ತದೆ ಎಂದರೆ ಸೂರು ಇಲ್ಲದವರಿಗೆ ಸೂರು ಕೊಡಬೇಕು ಎನ್ನುವ ವಿಚಾರ ಇದೆ. ಅದರ ಜೊತೆಗೆ ದುರ್ಬಲ ವರ್ಗದವರ ಬಗ್ಗೆ ಆಸಕ್ತಿ ಇದೆ ಎನ್ನುವುದನ್ನು ಎತ್ತಿ ತೋರಿಸುತ್ತದೆ. ನಮ್ಮ ಸಿಂಧ್ಯರವರು ಹೇಳಿದರು, ನೀವು ಬಡವರ ಓಟು ತೆಗೆದುಕೊಂಡು ಬಂದವರು ಎಂದು. ನಿಜ, ಇದೆಲ್ಲಾ ಕೆಲಸ ಮಾಡಿದ್ದರಿಂದ ಬಡವರ ಸಲುವಾಗಿ, ಬಡವರ ಪರವಾಗಿ ಕೆಲಸ ಮಾಡಿದ್ದರಿಂದ ಬಡವರ ಓಟು ತೆಗೆದುಕೊಂಡು ಇಷ್ಟು ಜನ ಕುಳಿತು ಕೊಂಡಿದ್ದೇವೆ. ನೀವು ಆ ಕೆಲಸ ಮಾಡದೇ ಇರುವುದಕ್ಕೆ ಅಲ್ಲಿ ಕುಳಿತಿರಬಹುದು. ನನಗೆ ಗೊತ್ತಿಲ್ಲ. ಇನ್ನು ಪಂಚಾಯತ್ ರಾಜ್ ಸ್ಥಿತಿ ಏನಿತ್ತು? ನೀವು ವಿಚಾರ ಮಾಡಿ. ಒಂದು ಲಕ್ಷ ರೂಪಾಯಿ ನೀವು ಇದ್ದಾಗ ಕೊಡುತ್ತಿದ್ದೀರಿ. ಆ ಒಂದು ಲಕ್ಷ ರೂಪಾಯಿ ಕರೆಂಟ್ ಬಿಲ್‌ಗೆ ಸಾಕಾಗಿ ಹೋಗುತ್ತಿತ್ತು. ನೌಕರರಿಗೆ ಸಂಬಳ ಕೊಡುವುದು ಇರಲಿ, ಒಮ್ಮೊಮ್ಮೆ ಪಂಚಾಯಿತಿಯಲ್ಲಿ ಅಮವಾಸ್ಯೆ ದಿವಸ ಕಾಯಿ ಒಡೆಯುವುದಕ್ಕೆ ದುಡ್ಡು ಇರಲಿಲ್ಲ. ಕರ್ಪೂರ ತರುವುದಕ್ಕೆ ರೊಕ್ಕ ಇರಲಿಲ್ಲ. ಅಂತಹ ಪರಿಸ್ಥಿತಿ ಇತ್ತು. ನಮ್ಮ ಸರ್ಕಾರ ಬಂದಮೇಲೆ, ಎರಡು ಲಕ್ಷ ರೂಪಾಯಿಗೆ ಏರಿಸಿ, ಇವತ್ತು ಅದು ಮೂರೂವರೆ ಲಕ್ಷ ರೂಪಾಯಿಗಳನ್ನು ಒಂದು ಪಂಚಾಯಿತಿಗೆ

ಕೊಡುವುದನ್ನು ನೋಡಿದರೆ ಪಂಚಾಯಿತಿ ವ್ಯವಸ್ಥೆಯನ್ನು ಸದೃಢಗೊಳಿಸತಕ್ಕಂಥ, ಪಂಚಾಯಿತಿಯನ್ನು ಅಭಿವೃದ್ಧಿಗೊಳಿಸತಕ್ಕಂಥ ಒಂದು ಕೆಲಸ ಇವತ್ತು ನಮ್ಮಲ್ಲಿ ಆಗಿದೆ. ಅದಕ್ಕೆ ನಾವು ಬದ್ಧರಾಗಿದ್ದೇವೆ. ಪಂಚಾಯಿತಿ ವ್ಯವಸ್ಥೆಯನ್ನು ನಾವು ಮಾಡಿದ್ದೇವೆಂದು ನೀವು ಹೇಳುವವರು ಒಂದು ಬಾರಿಗೂ ಕೂಡ ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚಿಗೆ ಹಣ ಕೊಡಲಿಲ್ಲ. ಕಸ ಹೊಡೆಯುವವರಿಗೆ ಹಣ ಕೊಡುವುದಕ್ಕೆ ಸಹ ಪಂಚಾಯಿತಿಯಲ್ಲಿ ಇರಲಿಲ್ಲ. ಈ ರೀತಿಯಾದಂತಹ ಒಂದು ಕಾರ್ಯಕ್ರಮ ತೆಗೆಯುವುದರ ಜೊತೆಗೆ ಇವತ್ತು ಅಂಗನವಾಡಿ ರಾತ್ರಿ ಶಿಕ್ಷಣ ವ್ಯವಸ್ಥೆಯನ್ನು ಅದರ ವ್ಯಾಪ್ತಿಯಲ್ಲಿ ಕೊಟ್ಟು, ಅಧಿಕಾರ ವಿಕೇಂದ್ರೀಕರಣವನ್ನು ಪಂಚಾಯತ್ ಮಟ್ಟದಲ್ಲಿ ಕೊಡಬೇಕೆಂದು ನಮ್ಮ ಸರ್ಕಾರ ಇವತ್ತು ಒತ್ತು ಕೊಟ್ಟಿದೆ. ಇನ್ನು ಸ್ವಚ್ಛಗ್ರಾಮ ಯೋಜನೆ, ಇದರ ಬಗ್ಗೆ ಎಲ್ಲರೂ ಒಪ್ಪಿಕೊಂಡು ಸ್ವಾಗತ ಮಾಡಿದ್ದೀರಿ. ಒಂದು ಪಂಚಾಯಿತಿಗೆ ಎರಡು ಲಕ್ಷ ರೂಪಾಯಿ ತುಂಬಿದರೆ, ಅದಕ್ಕೆ 18 ಲಕ್ಷ ರೂಪಾಯಿ ಕೊಟ್ಟು ಒಟ್ಟು 20 ಲಕ್ಷ ರೂಪಾಯಿಯಲ್ಲಿ ಅಭಿವೃದ್ಧಿ ಕಾರ್ಯಗಳು ಆಗಬೇಕೆನ್ನುವ ವಿಚಾರ ಇದೆ. ನಾಳೆ ಎಂದರೆ ಮಾರ್ಚ್ 31 ರಂದು ಕೊನೆಯ ದಿವಸ ಇದೆ. ಈಗಾಗಲೇ ಒಂದು ತಿಂಗಳಲ್ಲಿ ಸ್ವಚ್ಛಗ್ರಾಮ ಮಾಡಿ ಮುಗಿಸುವುದಕ್ಕೆ ಸಾಧ್ಯವಾಗುತ್ತದೆಯೋ ಯೋಚನೆ ಮಾಡಿ ನೀವು. ಎಲ್ಲಿ ಮಾಡಿದ್ದೀರಿ? ಇನ್ನು ಮಾಡಬೇಕಾಗಿರುವುದು ಮುಂದೆ. ಮುಂದೆ ಮಾಡುವಂತಾದ್ದನ್ನು ತಮಗೆ ಹೇಳಿದ್ದೇನೆ. ಇನ್ನು ಪಂಚಾಯಿತಿಗಳಿಗೆ ಹಣ ಕೊಡುವುದಕ್ಕೆ 31-3-2001 ಕೊನೆಯ ದಿವಸ. ಈ ಸ್ವಚ್ಛಗ್ರಾಮ ಯೋಜನೆ ಗ್ರಾಮೀಣ ನೈರ್ಮಲ್ಯವನ್ನು ಕಾಪಾಡತಕ್ಕಂಥ, ಗ್ರಾಮದಲ್ಲಿರುವಂತಹ ಹೊಲವನ್ನು ಹೋಗಲಾಡಿಸುವುದು ಮತ್ತು ಸಣ್ಣಪುಟ್ಟ ಕೂಡು ರಸ್ತೆಯನ್ನು ಮಾಡಿ ಕೆಲವು, ಸಣ್ಣಪುಟ್ಟ ಅಂಗನವಾಡಿ ಕಟ್ಟಡವನ್ನು ಮಾಡಿ ಗ್ರಾಮ ಪಂಚಾಯಿತಿಯಲ್ಲಿ ಇರತಕ್ಕಂಥ ಸಮಸ್ಯೆಗಳನ್ನು ಹೋಗಲಾಡಿಸಿ, ಗ್ರಾಮಪಂಚಾಯಿತಿಯನ್ನು ಸದೃಢಗೊಳಿಸುವ ಕಾರ್ಯ ಸ್ವಚ್ಛಗ್ರಾಮದಲ್ಲಿ ಒಂದು. ಇನ್ನು ಜವಳಿ ವಿಚಾರವಾಗಿ ಕೆಲವೊಂದು ವಿಚಾರ ಹೇಳುತ್ತೇನೆ. ಜವಳಿ ವಿಚಾರದಲ್ಲಿ ಸರ್ಕಾರ ಇನ್ನೂ ಹೆಚ್ಚು ಕೆಲಸ ಮಾಡಬೇಕಾಗಿದೆ. ಕೆ.ಹೆಚ್.ಡಿ.ಸಿ. ಯಲ್ಲಿ ನೋಂದಾಯಿತ ಮಗ್ಗಗಳು 35,000 ಇವೆ. ಇವತ್ತು 12 ರಿಂದ 14 ಸಾವಿರ ಮಗ್ಗಗಳು ನಡೆಯುತ್ತಿವೆ. ಈಗ ಎರಡು ಮೂರು ಸಾವಿರ ಜಾಸ್ತಿಯಾಗಿವೆ. ಒಮ್ಮೊಮ್ಮೆ 5-6 ಸಾವಿರ ಮಗ್ಗಗಳಿಗೆ ಹೋಗಿರುವುದು ಉಂಟು. ಈ ಕೆ.ಹೆಚ್.ಡಿ.ಸಿ., ನಾವು ದಾರಿಯಲ್ಲಿ ಹೋಗತಕ್ಕಂಥವರನ್ನು ಕರೆದು ನಾವು ನಿನಗೆ ವ್ಯವಸ್ಥೆ ಮಾಡುತ್ತೇವೆಂದು ಹೇಳಿ ಮಾಡಿರತಕ್ಕಂಥ ಒಂದು ವ್ಯವಸ್ಥೆ ಅಲ್ಲಿ ನಾವು ಸರಿಯಾದಂತಹ ನೂಲನ್ನು ಹಾಗೂ ಮಜೂರಿಯನ್ನು ಕೊಡಬೇಕಾಗಿರುವುದು ನಮ್ಮ ಕರ್ತವ್ಯ. ಅದು ನಾವು ಮಾಡಬೇಕಾಗಿರತಕ್ಕಂಥ ಕೆಲಸ. ಈಗಾಗಲೇ ಅದರಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹಾಹಾಕಾರ ಎದ್ದಿದ್ದರೂ ಕೂಡ ಅದನ್ನು ಸಾಂತ್ವನಗೊಳಿಸತಕ್ಕಂಥ ಕೆಲಸ ಮಾಡುತ್ತಿದ್ದೇವೆ. ಸಹಕಾರಿ ನೇಕಾರರಲ್ಲಿ ಮೂರು ಕಾಲಂ ಬರುತ್ತದೆ. ಒಬ್ಬ ನೇಕಾರ ಕೆ.ಹೆಚ್.ಡಿ.ಸಿ. ಕೆಳಗಡೆ ನೇಯುತ್ತಾನೆ, ಒಬ್ಬ ನೇಕಾರ ಸಹಕಾರಿ ಸಂಘದ ಕೆಳಗಡೆ ನೇಯುತ್ತಾನೆ. ಇನ್ನೊಬ್ಬ ನೇಕಾರ ಶ್ರೀಮಂತರ ಕೈಕೆಳಗಡೆ ನೇಯುತ್ತಾನೆ. ಅದು ನಮಗೆ ಸಂಬಂಧ ಇಲ್ಲ. ಆದರೆ ಸಹಕಾರ ಸಂಘಗಳ ಕೆಳಗಡೆ ಮತ್ತು ಕೆ.ಹೆಚ್.ಡಿ.ಸಿ. ಕೆಳಗಡೆ ನೇಯತಕ್ಕಂಥ ನೇಕಾರರನ್ನು ನಾವು ಕಾಯತಕ್ಕಂಥ, ಸಾಕಿಕೊಂಡು, ಸಾಧಿಸಿ ಕೊಂಡು

ಹೋಗುವಂತಹ ಒಂದು ಜವಾಬ್ದಾರಿ ನಮ್ಮ ಮೇಲೆ ಇದೆ. ಒಮ್ಮೊಮ್ಮೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಂತ್ರಿಗಳು ಎಷ್ಟೇ ಚೆನ್ನಾಗಿ ಕೆಲಸ ಮಾಡಬೇಕೆಂದರೂ ಕೂಡ ಅಧಿಕಾರಿಗಳು ಅಡ್ಡ ಹೋಗುತ್ತಿರುತ್ತಾರೆ. ಅದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. 1998-99ನೇ ಸಾಲಿನಲ್ಲಿ ನೇಕಾರರ ಸಹಕಾರ ಸಂಘಕ್ಕೆ ಒಂದು ಕೋಟಿ ಇಪ್ಪತ್ತೊಂದು ಲಕ್ಷ ರೂಪಾಯಿ ರಿಬೆಟ್ ಕೊಡಬೇಕಾಗಿರುವುದು ಇದೆ. ದಿನಾಂಕ 31-3-99 ರವರೆಗೆ ಆ ನೇಕಾರ ಸಹಕಾರ ಸಂಘಕ್ಕೆ ರಿಬೆಟ್ ಕೊಡಬೇಕಾದಂತಹ ಅವಕಾಶ ಇತ್ತು. ಎಂಟು ಕೋಟಿ ರೂಪಾಯಿ ಹಣ ಕೂಡ ತೆಗೆದು ಇಟ್ಟಿದ್ದರು. ಆರು ಕೋಟಿ ರೂಪಾಯಿ ಕೆ.ಹೆಚ್.ಡಿ.ಸಿ. ಯವರು ತೆಗೆದುಕೊಂಡು ಹೋದರು. ಎರಡು ಕೋಟಿ ರೂಪಾಯಿ ಪಿ.ಡಿ. ಅಕೌಂಟ್‌ನಲ್ಲಿ ಇಟ್ಟು ಕೊಡಬಹುದಾಗಿತ್ತು. ಇವತ್ತಿಗೂ ಕೂಡ ಆ ನೇಕಾರರ ಸಹಕಾರ ಸಂಘಗಳಿಗೆ ಒಂದು ಕೋಟಿ 28 ಲಕ್ಷ ರೂಪಾಯಿ ಹಣ ಬರುತ್ತಿಲ್ಲ. ಸಾಕಷ್ಟು ಬಾರಿ ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ರಿಲೀಸ್ ಅಮೌಂಟ್ ಎಂದು ಆರ್ಡರ್ ಮಾಡಿದ್ದರೂ ಕೂಡ ಆ ಕಡತ ನಮ್ಮ ಟೆಕ್ಸ್‌ಟೈಲ್ ಇಲಾಖೆಯಲ್ಲಿ ಸುಮ್ಮ ಸುಮ್ಮನೆ ಕಾರಣವಿಲ್ಲದೆ ಓಡಾಡುತ್ತಿದೆ. ಆದುದರಿಂದ ಸರ್ಕಾರದ ಅಧಿಕಾರಿಗಳು ಕೂಡ ಒಮ್ಮೊಮ್ಮೆ ಉತ್ತಮವಾದ ಕೆಲಸಕಾರ್ಯಗಳನ್ನು ಚುರುಕಿಯಿಂದ ಮಾಡಿದಾಗ ಮಾತ್ರ ಜನರಿಗೆ ಮುಟ್ಟಿಸುವುದಕ್ಕೆ ಸಾಧ್ಯವಾಗುತ್ತದೆ. ಇವೆರಡು ರಥದ ಮೂಲೆಗಳಿದ್ದಂತೆ, ಆ ಗಾಲಿ ಕೂಡ ಅಲ್ಲಿ ಓಡಾಡಬೇಕಾಗುತ್ತದೆ. ಆದುದರಿಂದ ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳುತ್ತದೆ ಎಂದು ವಿಶ್ವಾಸ ಇದೆ. ಇನ್ನು ಭಾರೀ ಮತ್ತು ಮಧ್ಯಮ ನೀರಾವರಿಯಲ್ಲಿ ಆಮೂಲಾಗ್ರವಾದ ಬದಲಾವಣೆ ಹಿಂದೆ ಏನಿತ್ತು? ಕಂಟ್ರಾಕ್ಟ್ ಹಾವಳಿ. ಎಲ್‌ಒಸಿಗೆ ಅಡ್ಡಾಡತಕ್ಕಂಥವರ ಹಾವಳಿ. ಇವತ್ತು ಗುತ್ತಿಗೆದಾರರ ಹಾವಳಿ ಏನಿತ್ತು ಅದಕ್ಕೆಲ್ಲಾ ಕಡಿವಾಣ ಹಾಕಿ ಟೆಂಡರ್ ಮೂಲಕ ಕೆಲಸಕಾರ್ಯಗಳನ್ನು ಕೊಡತಕ್ಕಂಥ ವಿಚಾರ ಮಾಡಿದ್ದಾರೆ. ಇನ್ನು ಆಲಮಟ್ಟಿ ಗೇಟ್ 519ಕ್ಕೆ ಹಾಕಿರತಕ್ಕಂಥಾದ್ದು. ನಾವು ಗೇಟ್ ಅನ್ನು ಮಾಡಿರತಕ್ಕಂಥಾದ್ದು ಒಂದು ಇತಿಹಾಸ ಇದೆ. ಇವತ್ತು 515ಕ್ಕೆ ನೀರು ನಿಲ್ಲಿಸಿರುವುದು. ಘಟಪ್ರಭಾ ಬಲದಂಡೆ ಕಾಲುವೆ ಸರ್ವೆ ಕೂಡ ಆಗಿರಲಿಲ್ಲ. ಆದರೆ ಇವತ್ತು ಸರ್ವೆ ಕಾರ್ಯ ಸಮರೋಪಾದಿಯಲ್ಲಿ ನಡೆಯುತ್ತಿದೆ. ಆಲಮಟ್ಟಿ ಬಲದಂಡೆ ಕಾಲುವೆ ಸಮರೋಪಾದಿಯಲ್ಲಿ ಕೆಲಸ ನಡೆದಿರತಕ್ಕಂಥಾದ್ದು ನೋಡಿದರೆ ಭಾರೀ ಹಾಗೂ ಮಧ್ಯಮ ನೀರಾವರಿಗೆ ಇವತ್ತು ಸರ್ಕಾರ ಎಷ್ಟು ಪ್ರಮಾಣದಲ್ಲಿ ಕೆಲಸವನ್ನು ಮಾಡಿಕೊಂಡು ಹೊರಟಿದೆ ಎನ್ನುವುದು ಇಲ್ಲಿರತಕ್ಕಂಥ ಅಂಕಿಸಂಖ್ಯೆಗಳೇ ಸಾಕ್ಷಿ ಮತ್ತು ನೂರಾರು ಕೋಟಿ ರೂಪಾಯಿಗಳ ವಾಹನಗಳು ಹತ್ತು ವರ್ಷದಿಂದ ಕೇಳುವವರಿಲ್ಲದೆ ಬಿದ್ದಿತ್ತು. ಅದನ್ನು ಹರಾಜಿನ ಮೂಲಕ ಇವತ್ತು ಸರ್ಕಾರಕ್ಕೆ ಹಣ ಸಂದಾಯ ಮಾಡಿಕೊಳ್ಳತಕ್ಕಂಥ ಕ್ರಮ ಏನಿದೆ ಅದನ್ನು ಸ್ವಾಗತ ಮಾಡಲೇಬೇಕಾಗುತ್ತದೆ. ಇದನ್ನು ಮೆಚ್ಚಿಕೊಳ್ಳಬೇಕಾಗುತ್ತದೆ. ಶ್ರೀಮಾನ್ ಸಿಂಧ್ಯರವರೂ ಕೂಡ ಈ ವಿಚಾರವನ್ನು ಮೆಚ್ಚಿಕೊಂಡಿದ್ದಾರೆ. ಇನ್ನು ಶಾಸಕರ ನಿಧಿ ಕೊಟ್ಟಿದ್ದಾರೆ. ಆ ನಿಧಿಯನ್ನು ಶಿಕ್ಷಣ ಇಲಾಖೆಗಾಗಲಿ, ಗ್ರಾಮೀಣಾಭಿವೃದ್ಧಿ ಇಲಾಖೆಗಾಗಲಿ ಬಳಸತಕ್ಕಂಥಾದ್ದು ಕೂಡ ಒಂದು ಕಂಡೀಷನ್ ಮಾಡಬೇಕೆಂದು ನನ್ನ ನಿವೇದನೆ. 25 ಲಕ್ಷ ರೂಪಾಯಿ ಏನು ಕೊಡುತ್ತಿದ್ದಾರೆ, ಅದು ಸಾಕಾಗುವುದಿಲ್ಲವೆಂದು ನಾವು ಹೇಳಿದ್ದೇವೆ. ಕೇಂದ್ರದಲ್ಲಿ ಈ ಒಂದು ಯೋಜನೆ ಮಾಡಿದಾಗ

ಎಂ.ಪಿ. ಗಳಿಗೆ 50 ಲಕ್ಷ ರೂಪಾಯಿ ಕೊಟ್ಟಿದ್ದರು. ಮುಂದೆ ಎರಡು ಕೋಟಿ ರೂಪಾಯಿಗೆ ಬಂದಿದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈ 25 ಲಕ್ಷ ರೂಪಾಯಿಗೆ ನಿಲ್ಲಿಸಬೇಕೆಂದು ಇಲ್ಲ. ಇದು ಪರಿಣಾಮಕಾರಿಯಾಗಿ ವೆಚ್ಚವಾದ ಮೇಲೆ ಜಾಸ್ತಿ ಮಾಡಬೇಕೆಂದು ನಮ್ಮ ಇಚ್ಛೆ. ಮತ್ತು ಅವರು ಮಾಡುತ್ತಾರೆ ಎಂಬ ನಂಬಿಕೆ ಇದೆ ಎಂದು ಹೇಳುತ್ತಾ, ಆಡಳಿತ ಸುಧಾರಣೆ ಬಗ್ಗೆ ಒಂದು ಮಾತು ಹೇಳುತ್ತೇನೆ. ಅದೇನೆಂದರೆ ವರ್ಗಾವರ್ಗಿಗೆ ಏನಾದರೂ ನೀತಿ ಸಂಹಿತೆಯನ್ನು ತರಲೇಬೇಕಾಗುತ್ತದೆ. ಏಕೆಂದರೆ ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಶಾಸಕರ ಸಂಪೂರ್ಣವಾದಂತಹ ಶ್ರಮ ಇದಕ್ಕೆ ವಿನಿಯೋಗವಾಗಿ ಹೋಗುತ್ತದೆ. ಇದಕ್ಕೆ ಒಂದು ಕಾನೂನನ್ನು ಮಾಡಿದರೆ ಒಳ್ಳೆಯದು. ಮೂರು ವರ್ಷದವರೆಗೆ ವರ್ಗ ಮಾಡಬಾರದು. ಕ್ಯಾಟಗರಿವೈಸ್ ಕ್ಲಾಸ್-1 ಆದವರಿಗೆ ಎರಡು ವರ್ಷ, ಕ್ಲಾಸ್-2 ಆದವರಿಗೆ ಮೂರು ವರ್ಷ, ಕ್ಲಾಸ್-3 ಆದವರಿಗೆ ಐದು ವರ್ಷ ಎಂದು ಈ ರೀತಿಯಾದಂತಹ ವ್ಯವಸ್ಥೆ ಮಾಡಿದರೆ ಒಳ್ಳೆಯದು. ನಾವು 10 ಲೆಟರ್ ಪ್ಯಾಡ್ ತೆಗೆದುಕೊಂಡು ಹೋದರೆ ಐದು ಲೆಟರ್ ಪ್ಯಾಡ್ ವರ್ಗಾವರ್ಗಿಗೆ ಖರ್ಚಾಗಿ ಹೋಗುತ್ತದೆ. ಏಕೆಂದರೆ ಇದರಲ್ಲಿ ನಿರ್ದಿಷ್ಟ ಪಡಿಸದೆ ಇರುವುದರಿಂದ, ಹಿಂದೆ ಬಂದಿರತಕ್ಕಂಥ ವ್ಯವಸ್ಥೆ. ಇಲ್ಲಿ ಚೀಟಿ ಕೊಡಿ, ಅಲ್ಲಿ ಚೀಟಿ ಕೊಡಿ ಎಂದು ಬರುತ್ತಾರೆ. ನಾವು ನಮ್ಮನ್ನು ಆರಿಸಿದಂತಹವರನ್ನು ಕಾಯ್ದುಕೊಳ್ಳಬೇಕಾದಂತಹ ವಿಚಾರ ಇದ್ದು, ಕಾನೂನು ಇಲ್ಲದೆ ಇರುವುದರಿಂದ ಕಾಯಬೇಕಾಗುತ್ತದೆ. ಆದುದರಿಂದ ಆಡಳಿತ ದೃಷ್ಟಿಯಿಂದ ವರ್ಗಾವರ್ಗಿ ವಿಚಾರದಲ್ಲಿ ಒಂದು ಕಡಿವಾಣ ಹಾಕುವುದು ಸೂಕ್ತ ಎಂದು ಹೇಳಿ ಇನ್ನು ಸಮಾಜ ಕಲ್ಯಾಣ ಇಲಾಖೆಯಲ್ಲಿ 38 ವಸತಿ ಶಾಲೆ ಕಟ್ಟಡ ಪೂರ್ತಿ ಆಗತಕ್ಕಂಥಾದ್ದು ಹಾಗೂ ಮುರಾರ್ಜಿ ದೇಸಾಯಿ ವಸತಿ ಶಾಲೆ ಇರಬಹುದು, ಹಾಸ್ಟೆಲ್ ಕಟ್ಟಡ ಕೊಟ್ಟಿದ್ದೇವೆ. ಇನ್ನು ಡಿಪಾರ್ಟ್‌ಮೆಂಟಲ್ ಸ್ಟೋರ್ಸ್‌ನಲ್ಲಿ ವೈನ್ ಮತ್ತು ಬಿಯರ್ ವಿಚಾರದಲ್ಲಿ ಮಾನ್ಯ ಸದಾನಂದಗೌಡರು ಬಹಳ ಹೇಳಿದರು. ನಾನು ಅವರನ್ನು ಕೇಳಿದೆ, ಗೌಡರೇ, ನಿಮಗೆ ವೈನ್ ಎಂದರೆ ಗೊತ್ತಾ ಎಂದು. ಇಲ್ಲ ಎಂದರು. ಅದರ ಬಗ್ಗೆ ನಿಮಗೆ ತಿಳುವಳಿಕೆ ಇಲ್ಲ, ಆದಕ್ಕೆ ನೀವು ಅದರ ಬಗ್ಗೆ ಪರದಾಡುತ್ತಿದ್ದೀರಿ. ವೈನ್ ಎಂದರೆ ಆಹಾರ, ಬಿಯರ್ ಎಂದರೆ ಆಹಾರ, ಅದರಲ್ಲಿ ಎರಡು ಮೂರು ಪರ್ಸೆಂಟ್ ಆಲ್ಕೋಹಾಲ್ ಇರುತ್ತದೆ. ಬಿಯರ್ ಎಂದರೆ ಬಾರ್ಲಿ ಅಕ್ಕಿಯಿಂದ ತೆಗೆದಿರತಕ್ಕಂಥ ನೀರು. ವೈನ್ ಎಂದರೆ ದ್ರಾಕ್ಷಿ ಹಣ್ಣಿನಿಂದ ತೆಗೆದಿರತಕ್ಕಂಥ ರಸ. ಅದೂ ಕೂಡ ಆಹಾರ ಆಗುತ್ತದೆ. ಇದರ ರುಚಿ ನೀವು ನೋಡಿಲ್ಲ. ಅದು ನಿಶೆ ಬರಬೇಕಾದರೆ ಹತ್ತು ಬಿಯರ್ ಬಾಟಲ್ ಕುಡಿಯಬೇಕಾಗುತ್ತದೆ. ಅದು ಸಾಧ್ಯ ಇಲ್ಲ. ಒಂದು ಫುಲ್ ಬಾಟಲ್ ಕುಡಿದರೆ ನಿಶೆ ಬರುವುದಕ್ಕೆ ಸಾಧ್ಯವಿಲ್ಲ. ಪಾಪ ನೀವು ಏನು ಅರ್ಥಮಾಡಿಕೊಂಡಿದ್ದೀರಿ ಎಂದು ಹೇಳಿದೆ. ಮಾನ್ಯ ಸದಾನಂದಗೌಡರು ವಿಸ್ಕಿ ಬ್ರಾಂದಿ ಕುಡಿದಾಗ ನಿಶೆಯೇರುತ್ತದೆ ಆ ರೀತಿ ಎಂದು ತಿಳಿದುಕೊಂಡಿದ್ದಾರೆ. ಅದು ಆಹಾರ ಏಕೆಂದರೆ ಟಾನಿಕ್‌ನಲ್ಲಿ ಕೂಡ ಒಂದು ಪರ್ಸೆಂಟ್ ಆಲ್ಕೋಹಾಲ್ ಇರುತ್ತದೆ. ಆದರೆ ಇದರಲ್ಲಿ ಎರಡು-ಮೂರು ಪರ್ಸೆಂಟ್ ಇರುತ್ತದೆ. ಕುಡಿಯದವರು ಡಿಪಾರ್ಟ್‌ಮೆಂಟ್ ಸ್ಟೋರ್‌ನಲ್ಲಿ ಇಟ್ಟರೂ ಕುಡಿಯುವುದಿಲ್ಲ, ಎಲ್ಲಿಟ್ಟರೂ ಕುಡಿಯುವುದಿಲ್ಲ, ಆ ಬಗ್ಗೆ ತಲೆ ಕೆಡಿಸಿಕೊಳ್ಳುವುದು ಬೇಡವೆಂದು ಹೇಳುತ್ತೇನೆ. ಇನ್ನು ರಸ್ತೆಗಳ ಬಗ್ಗೆ ಹೇಳುವುದಾದರೆ ಸುಮಾರು ಮೂರ್‍ನಾಲ್ಕು ವರ್ಷಗಳ ಕಾಲ ಗುಂಡಿಗಳು ತುಂಬಿರುವಂತಹ

ರಸ್ತೆಗಳು ನಮ್ಮಲ್ಲಿ ಇದ್ದವು, ಈ ವರ್ಷ ಒಂದು ಗುಂಡಿ ಉಳಿಯದಂತೆ ಸಂಪೂರ್ಣ ಗುಂಡಿಗಳನ್ನು ತುಂಬಲಾಗಿದೆ, ಬೇಕಾದರೆ ಸಮೀಕ್ಷೆ ಮಾಡಿ ನೋಡಬಹುದು. 790 ಕೋಟಿ ರೂಪಾಯಿಗಳನ್ನು ರಸ್ತೆಗಾಗಿ ಮೀಸಲಿಡಲಾಗಿದೆ. ಪ್ರಧಾನಮಂತ್ರಿಗಳ ಗ್ರಾಮಾಂತರ ರಸ್ತೆಗಳ ಸಡಕ್ ಯೋಜನೆಯನ್ನು ಸ್ವಾಗತ ಮಾಡುತ್ತೇನೆ. ನಾವು ಎಲ್ಲವನ್ನೂ ಟೀಕೆ ಮಾಡುವಂತಹವರಲ್ಲ, ಅದು ಕಾಂಗ್ರೆಸ್‌ನ ಸಂಸ್ಕೃತಿಯೂ ಅದಲ್ಲ, ಒಳ್ಳೆಯದನ್ನು ಒಳ್ಳೆಯದೆಂದು ಹೇಳುವುದು ನಮ್ಮ ಸಂಸ್ಕೃತಿ. ಈ ಯೋಜನೆಯನ್ನು ತಂದಿರುವುದು ಯೋಗ್ಯವಾಗಿದ್ದು ಅದಕ್ಕಾಗಿ ಪ್ರಧಾನಮಂತ್ರಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅದೇ ರೀತಿ ನೀವೂ ಕೂಡ ನಮ್ಮಲ್ಲಿರುವ ಒಳ್ಳೆಯ ಕೆಲಸಗಳನ್ನು ಮೆಚ್ಚಿಕೊಳ್ಳಬೇಕೆಂಬುದು ನನ್ನ ವಿನಂತಿಯಾಗಿದೆ. ಹಾಗಾಗಿ ಈ ಆಯವ್ಯಯವನ್ನು ಸಂಪೂರ್ಣವಾಗಿ ನಾನು ಸ್ವಾಗತ ಮಾಡುತ್ತೇನೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎ. ರಾಮದಾಸ್ (ಚಾಮರಾಜ): ಸನ್ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ನಾವು ಬಹಳ ನಿರೀಕ್ಷೆ ಇಟ್ಟಿದ್ದಂತಹ ಆಯವ್ಯಯ ಇದಾಗಿತ್ತು. ಕಾರಣ, ಸರ್ಕಾರ ಅಧಿಕಾರಕ್ಕೆ ಬಂದ ಅಲ್ಪ ಕಾಲದಲ್ಲೇ ಆಯವ್ಯಯ ಮಂಡನೆ ಮಾಡುವ ಸಂದರ್ಭದ ಕಾರಣ ಹಿಂದಿನ ಸರ್ಕಾರದ ಸಮಸ್ಯೆಗಳೇನಾದರೂ ಇದ್ದರೆ ಅದನ್ನು ಸರಿಪಡಿಸಿಕೊಳ್ಳುವ ಕೆಲಸಗಳಾಗುತ್ತವೆ, ಹಾಗಾಗಿ ಈ ಆಯವ್ಯಯಕ್ಕೆ ಬಹಳ ಪ್ರಾಮುಖ್ಯತೆ ಇತ್ತು. ಸತ್ಯವನ್ನು ಒಪ್ಪಿಕೊಂಡಿರುವುದು ಬಹಳ ಸಂತೋಷದ ವಿಚಾರ. ಕರ್ನಾಟಕ ತೀವ್ರ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿಲ್ಲ ನಿಜ, ರಾಜ್ಯದ ಆರ್ಥಿಕ ಪರಿಸ್ಥಿತಿ ಆಶಾದಾಯಕವಾಗಿಯೂ ಇಲ್ಲ, ಅಂದರೆ ತಾವು ಒಪ್ಪಿಕೊಂಡಿದ್ದೀರಿ, ಆರ್ಥಿಕ ಪರಿಸ್ಥಿತಿ ನಿರಾಶದಾಯಕವಾಗಿದೆ ಎಂದು ಹೇಳುವ ಮುಖಾಂತರ ಆಯವ್ಯಯವನ್ನು ಆರಂಭಿಸುವುದರ ಮುಖಾಂತರ ಸತ್ಯಾಂಶವನ್ನು ಹೊರಗೆಡುವ ವಿಚಾರವನ್ನು ತಾವು ಒಪ್ಪಿದ್ದಿರಿ. ಪ್ರಮುಖವಾದ ಅಂಶ, ಕೊನೆಯ ಪಕ್ಷ ಪುಸ್ತಕದಲ್ಲಾದರೂ ವಿದ್ಯುತ್‌ಗೆ ಆದ್ಯತೆ ಇದೆ. ಸಾಮಾನ್ಯವಾಗಿ ಆಯವ್ಯಯದಲ್ಲಿ ವಿದ್ಯುತ್‌ಗೆ ಆದ್ಯತೆಯನ್ನು ನೀಡಬೇಕು, ವಿದ್ಯುತ್ ಇಲಾಖೆಯ ಬಗ್ಗೆ ಬಹಳ ಒಳ್ಳೆಯ ಮಾತುಗಳನ್ನು ಹೇಳಿದ್ದಿರಿ. ನಾವೂ ಕೂಡ ಸಂತೋಷದಿಂದ ಸ್ವಾಗತ ಮಾಡಿದೆವು. 210 ಮೆ.ವ್ಯಾ. ರಾಯಚೂರು ಥರ್ಮಲ್ ಯೂನಿಟ್ ಇರಬಹುದು, 500 ಮೆ.ವ್ಯಾ. ವಿಜಯನಗರದ ಕೋಲ್‌ನ ಆಧಾರಿತ ಸ್ಥಾವರವಿರಬಹುದು. ಇವು ಕಳೆದ ಚುನಾವಣೆಯಲ್ಲಿ ಪ್ಯಾಕೇಜ್‌ನಲ್ಲಿ ಇದ್ದಂತಹ ವಿಚಾರವಾಗಿದೆ, ಕಳೆದ ಸಾರಿ ಈ ಸಾರಿ ಎರಡು ಸಾರಿಯು ಹೇಳಿದ್ದೀರಿ, ಅದು ಕಾರ್ಯಗತವಾಗುವ ವಿಚಾರದಲ್ಲಿ ಎಲ್ಲರ ನಿರೀಕ್ಷಣೆ ಇದೆ. ಎರಡನೆಯದಾಗಿ, ವಿದ್ಯುತ್‌ನ ವಿತರಣಾ ಹಾಗೂ ವಿಸ್ತರಣಾ ನಷ್ಟವನ್ನು ಶೇ. 9 ರಷ್ಟು ಕಡಿಮೆ ಮಾಡುತ್ತೇವೆ, ವಿದ್ಯುತ್ ಕಳ್ಳತನವನ್ನು ಹತ್ತಿಕ್ಕಲು ಮುಂದಿನ ವಿಧಾನಸಭೆಯ ಅಧಿವೇಶನದಲ್ಲಿ ಹೊಸ ಮಸೂದೆಯನ್ನು ನಾವು ತರಲಿದ್ದೇವೆ. ಕರ್ನಾಟಕ ವಿದ್ಯುತ್ ನಿಯಂತ್ರಣಾ ಆಯೋಗಕ್ಕೆ ರೈತ ಪ್ರತಿನಿಧಿಯೊಬ್ಬರನ್ನು ನೇಮಕ ಮಾಡುತ್ತೇವೆ ಎಂದು ಹತ್ತು ಹಲವಾರು ವಿಚಾರಗಳನ್ನು ಹೇಳಲಾಗಿದೆ. ಆಯವ್ಯಯದಲ್ಲಿ ವಿದ್ಯುತ್ ಇಲಾಖೆಯಲ್ಲಿ ಸುಧಾರಣೆ ತರುತ್ತೇವೆಂದು ಹೇಳಿದಿರಿ. ಕಳೆದ ಸಾರಿಗಿಂತ ಅಲೋಕೇಷನ್ ಕೇವಲ 1.3 ರಷ್ಟು ಮಾತ್ರ ಜಾಸ್ತಿಯಾಗಿದೆ, ಆದರೆ ನಮ್ಮ ನಿರೀಕ್ಷೆಯ ಮಟ್ಟಕ್ಕೆ ಇದಾಗಿಲ್ಲ. ಇನ್ನು ಆಯವ್ಯಯದ ಚರ್ಚೆಯೇ ಮುಗಿದಿಲ್ಲ, ಒಳ್ಳೆಯ ವಿಚಾರಕ್ಕೆ ನಮ್ಮದೇ ಆದ ಸಹಮತವನ್ನು ವ್ಯಕ್ತಪಡಿಸಿಲ್ಲ, ತಾವೇನು ಸುಧಾರಣೆಗಳನ್ನು

ಮಾಡುತ್ತೇವೆಂದು ಹೇಳಿದಿರಿ, ಅದಕ್ಕೆ ತೆಗೆದುಕೊಂಡ ಕ್ರಮಗಳೇನು ಎಂಬುದನ್ನು ಕೇಳಬಯಸುತ್ತೇನೆ. ಕಾವೇರಿ ಬೇಸಿನ್‌ನಲ್ಲಿರುವ 1,800 ಮೆ.ವ್ಯಾ. ವಿದ್ಯುತ್ ಯೋಜನೆ ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಬರಬೇಕಾದ 1,075 ಮೆ.ವ್ಯಾ ವಿದ್ಯುತ್ ಅನ್ನು ಬಳಸಿಕೊಳ್ಳುವ ವಿಚಾರವನ್ನು ಆಯವ್ಯಯದಲ್ಲಿ ಪ್ರಸ್ತಾಪ ಮಾಡಿಲ್ಲ. ಮಾನ್ಯ ಮುಖ್ಯಮಂತ್ರಿಗಳು ನಾಲ್ಕು ದಿವಸಗಳ ಹಿಂದೆ, ಯಾರು ವಿದ್ಯುತ್ ಕಳ್ಳತನವನ್ನು ಮಾಡುತ್ತಾರೆ ಅಂತಹವರನ್ನು ಜೈಲಿಗೆ ಕಳುಹಿಸುವುದಕೋಸ್ಕರ ಕಾನೂನನ್ನು ಮುಂದಿನ ಅಧಿವೇಶನದಲ್ಲಿ ನಾವು ತರುತ್ತೇವೆಂದು ಹೇಳಿದ್ದರು. ಬಹಳ ಪ್ರಮುಖವಾಗಿ ಕೆಇಆರ್‌ಸಿ ಹೇಗೆ ಶೇಕಡ 17 ರಷ್ಟು ವಿದ್ಯುತ್ ದರವನ್ನು ಜಾಸ್ತಿ ಮಾಡಬಹುದು ಎಂದು ಹೇಳುವಾಗ ಆ ಟ್ಯಾರಿಫ್ ರಿಪೋರ್ಟ್‌ನಲ್ಲಿ ಒಂದು ವಿಚಾರವನ್ನು ಹೇಳಿದ್ದರು. ಮೊದಲನೆಯದಾಗಿ ಟ್ರಾನ್ಸ್‌ಮಿಷನ್ ಅಂಡ್ ಡಿಸ್ಟ್ರಿಬ್ಯೂಷನ್ ಲಾಸ್ ಏನಿದೆ ಅದನ್ನು ಕಡಿಮೆ ಮಾಡಬೇಕು. ಎರಡನೆಯದಾಗಿ ರೈತನಿಗೆ ನಿಲುಗಡೆಯಾಗದ ರೀತಿಯಲ್ಲಿ ವಿದ್ಯುತ್ ಕೊಡಬೇಕು. ವಿದ್ಯುತ್ ಹಾಗೂ ಸರ್ವೀಸ್ ಅನ್ನು ಆತನಿಗೆ ಕೊಡದಿರುವ ಸಂದರ್ಭದಲ್ಲಿ ಫೆನಾಲ್ಟಿಯನ್ನು ಕೊಡಬೇಕಾಗುತ್ತದೆ. ಈ ಸಮಸ್ಯೆಗಳನ್ನು ಹೇಳಿಕೊಳ್ಳಲು ಟೋಲ್ ಫ್ರೀ ಟೆಲಿಫೋನ್ ಸೌಲಭ್ಯಗಳನ್ನು ತಾವು ಮಾಡಿಕೊಡಬೇಕು. ಜೊತೆಗೆ ಇಂಪ್ರೂವ್‌ಮೆಂಟ್ ಆಫ್ ಕ್ವಾಲಿಟಿ ಆಫ್ ಸರ್ವೀಸ್ ಹಾಗೂ ಎನರ್ಜಿ ಆಡಿಟ್ ಆಗಬೇಕು ಮತ್ತು ಬಡವರಿಗೋಸ್ಕರ ಸಮಾಜ ಕಲ್ಯಾಣ ಇಲಾಖೆಯಿಂದ ಭಾಗ್ಯ ಜ್ಯೋತಿ, ಕುಠೀರ ಜ್ಯೋತಿ ಇತ್ಯಾತಿ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವ ಬಗ್ಗೆ ಆರ್ಥಿಕ ಸ್ಥಿತಿಯನ್ನು ನೋಡಿಕೊಂಡು ಅದರ ಆಧಾರದ ಮೇಲೆ ಅವರಿಗೆ ಸುಧಾರಣೆಗಳನ್ನು ತರಬೇಕೆಂದು ಕೆಪಿಟಿಸಿಎಲ್ ಮುಖಾಂತರ ಕೆಇಆರ್‌ಸಿ ಸರ್ಕಾರಕ್ಕೆ ಆದೇಶವನ್ನು ನೀಡಿತ್ತು. ಇವತ್ತು ಐಪಿ ಸೆಟ್‌ಗಳ ಹೆಸರನ್ನು ಹೇಳಿಕೊಂಡು ದೊಡ್ಡ ದೊಡ್ಡ ಉದ್ಯಮಿಗಳು ಟ್ರಾನ್ಸ್‌ಮಿಷನ್ ಹಾಗೂ ಡಿಸ್ಟ್ರಿಬ್ಯೂಷನ್ ಲಾಸ್ ಹಾಗೂ ಕಳ್ಳತನವನ್ನು ಮಾಡುತ್ತಿದ್ದಾರೆ. ಅದಕ್ಕೋಸ್ಕರ ತಕ್ಷಣ ಆರು ತಿಂಗಳೊಳಗಾಗಿ ಬೋರ್‌ವೆಲ್‌ಗಳು ಓಪನ್‌ವೆಲ್‌ಗಳ್ಯಾವುವು ಇವೆ, ಕೆಲಸ ಮಾಡದಿರುವ ಐಪಿ ಸೆಟ್‌ಗಳು ಯಾವುವು ಇವೆ ಅವನ್ನು ಗುರುತಿಸಿ ಎಷ್ಟು ವಿದ್ಯುತ್ ಉಪಯೋಗವಾಗುತ್ತಿದೆ ಎಂಬುದನ್ನು ತಿಳಿಸಬೇಕೆಂದು ಕೆಇಆರ್‌ಸಿ ಹೇಳಿತ್ತು. ಈ ಎಲ್ಲಾ ಸುಧಾರಣೆಗಳನ್ನು ಮಾಡುತ್ತೇವೆಂದು ಆಯವ್ಯಯದಲ್ಲಿ ಸರ್ಕಾರ ಹೇಳಿತು, ಆದರೆ ನಿನ್ನೆಯ ದಿವಸ ರಾಜ್ಯ ಸರ್ಕಾರ ನ್ಯಾಯಾಲಯಕ್ಕೆ ರಿಟ್ ಫೈಲ್ ಮಾಡಿ ಈ ಕೆಇಆರ್‌ಸಿ ಏನೇನು ಹೇಳಿದ್ದರು ಅದಕ್ಕೆ ವಿರುದ್ಧವಾಗಿ ತಡೆಯಾಜ್ಞೆಯನ್ನು ಯಾರ ಪರವಾಗಿ ತಂದಿದ್ದೀರಿ? ನ್ಯಾಯಾಲಯಕ್ಕೆ ಹೋಗಿ ಕೆಇಆರ್‌ಸಿ ಸುಧಾರಣೆಗಳ ಬಗ್ಗೆ ತಡೆಯಾಜ್ಞೆಯನ್ನು ತರುತ್ತೀರಿ ಮತ್ತೊಂದೆಡೆ ಸುಧಾರಣೆಗಳನ್ನು ತರುತ್ತೇವೆಂದು ದೊಡ್ಡ ದೊಡ್ಡ ಮಾತುಗಳನ್ನು ಹೇಳುತ್ತೀರಾ ಏಕೆ? ವಿದ್ಯುತ್ ಸುಧಾರಣೆಗಳ ಬಗ್ಗೆ ಐದು ಪುಟಗಳಷ್ಟು ಹೇಳಿದಂತಹ ನೀವು ನ್ಯಾಯಾಲಯಕ್ಕೆ ಹೋಗಿ ರೈತನಿಗೆ ವಿರುದ್ಧವಾಗಿ ತಡೆಯಾಜ್ಞೆಯನ್ನು ತಂದಿರುವುದನ್ನು ನೋಡಿದರೆ ನಮಗೆ ತುಂಬಾ ನೋವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು): ಕೆಇಆರ್‌ಸಿಯವರು ಕೊಟ್ಟಂತಹ ಕೆಲವು ಸಲಹೆಗಳನ್ನು ಕಾರ್ಯಗತ ಮಾಡುವಲ್ಲಿ ಇರುವಂತಹ ಕೆಲವೊಂದು ಸಂದಿಗ್ಧತೆಯನ್ನು ಮನವರಿಕೆ ಮಾಡಿಕೊಟ್ಟು ನ್ಯಾಯಾಲಯಕ್ಕೆ ಹೋಗಲಾಗಿದೆಯೇ ವಿನಃ ಬೇರೆ

ಉದ್ದೇಶವಿಲ್ಲ. ನಾವೇನು ಆಯವ್ಯಯದಲ್ಲಿ ಹೇಳಿದ್ದೇವೆ ಅದನ್ನು ಮಾಡಲೇಬೇಕಾದ ಅಗತ್ಯವಿದೆ. ಕಾರ್ಯಗತ ಮಾಡುವ ಬಗ್ಗೆ ನಮ್ಮ ಇಚ್ಛಾ ಶಕ್ತಿಯನ್ನೂ ಕೂಡ ಅದರಲ್ಲಿ ಪ್ರಕಟ ಮಾಡಿದ್ದೇವೆ.

ಶ್ರೀ ಎ. ರಾಮದಾಸ್: ಕಾಗೋಡು ತಿಮ್ಮಪ್ಪನವರಿಗೆ ಇಚ್ಛಾಶಕ್ತಿ ಇದೆ, ಇಲ್ಲವೆಂದು ನಾನು ಹೇಳಿಲ್ಲ, ಕೆಇಆರ್‌ಸಿ ಯಾವ ಸುಧಾರಣೆಗಳನ್ನು ಮಾಡಬೇಕೆಂದು ಹೇಳಿತ್ತು, ಅದರ ವಿರುದ್ಧವಾಗಿ ರಾಜ್ಯ ಸರ್ಕಾರವೇ ನ್ಯಾಯಾಲಯಕ್ಕೆ ಹೋಗುವ ಪರಿಸ್ಥಿತಿ ಇದೆ. ಕಾರಣ, ಪ್ರಮುಖವಾಗಿ ಮೂರು ತಿಂಗಳೊಳಗಾಗಿ ಈ ರಾಜ್ಯದಲ್ಲಿರುವ ವಿದ್ಯುತ್ ಬಾಕಿಯನ್ನು ವಸೂಲ್ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಈ ಸುಧಾರಣೆಗಳನ್ನು ಆರು ತಿಂಗಳೊಳಗಾಗಿ ಕಾರ್ಯಗತ ಮಾಡದಿದ್ದರೆ ಟ್ಯಾರಿಫ್ ಅನ್ನು ನಿಲ್ಲಿಸುವಂವಂತಹ ವ್ಯವಸ್ಥೆ ಕೆಇಆರ್‌ಸಿ ಮುಂದಿತ್ತು.

6.20 ಪಿ.ಎಂ.

ಶ್ರೀ ಕಾಗೋಡು ತಿಮ್ಮಪ್ಪ: ಅದಕ್ಕೆ ಕಾರಣವೇನು ಎನ್ನುವುದನ್ನು ನಾನು ಹೇಳುತ್ತೇನೆ, ಅದು ನಿಮಗೆ ಗೊತ್ತಿದೆಯೇ? ಗೊತ್ತಿದ್ದರೆ ಹೇಳಿ.

ಶ್ರೀ ಎ. ರಾಮದಾಸ್: ಕಾರಣವೇನೆಂದು ಹೇಳುತ್ತೇನೆ. ಪ್ರಮುಖವಾಗಿ ಮೂರು ತಿಂಗಳೊಳಗಾಗಿ ಈ ರಾಜ್ಯದಲ್ಲಿರುವಂಥ ಅರಿಯರ್ಸ್ ಅನ್ನು ವಸೂಲು ಮಾಡಬೇಕಾದಂಥ ಪರಿಸ್ಥಿತಿ ನಿರ್ಮಾಣವಾಗಿತ್ತು. ಆರು ತಿಂಗಳೊಳಗಾಗಿ ರಿಫಾರ್ಮ್ಸ್ ಅನ್ನು ಮಾಡದೇ ಹೋದರೆ ಟ್ಯಾರಿಫ್ ಅನ್ನು ನಿಲ್ಲಿಸುವಂಥ ವ್ಯವಸ್ಥೆ ಕೆ.ಇ.ಆರ್.ಸಿ. ಮುಂದೆ ಇತ್ತು. ಯಾರೋ ಒಬ್ಬ ಸಣ್ಣ ವ್ಯಕ್ತಿ ಎರಡು ತಿಂಗಳ ವಿದ್ಯುತ್ ಬಿಲ್ಲನ್ನು ಕೊಡಲಿಲ್ಲ ಎಂದರೆ ಪರಿಸ್ಥಿತಿ ಹೇಗೆ ಆಗುತ್ತದೆ. ಪಟ್ಟಿಯನ್ನೆಲ್ಲಾ ನಾನು ಹೇಳುವುದಿಲ್ಲ. ಕೇವಲ ನಾಲ್ಕು ಸಂಸ್ಥೆಗಳ ಹೆಸರನ್ನು ಹೇಳುತ್ತೇನೆ. ಇಂಥ ಸಂಸ್ಥೆಗಳ ಪ್ರೆಷರ್‌ಗೆ ದಯವಿಟ್ಟು ಯಾವುದೇ ಕಾರಣಕ್ಕೂ ಯೀಲ್ಡ್ ಆಗುವುದು ಬೇಡ. ಸಂಡೂರ್ ಐರನ್ ಅಂಡ್ ಮ್ಯಾಂಗನೀಸ್ ಕಂಪನಿಯಿಂದ ಬಾಕಿ ಇರುವಂಥಾದ್ದು 105.54 ಕೋಟಿ ರೂಪಾಯಿಗಳು, ಹೆಚ್.ಎಂ.ಪಿ. ಸಿಮೆಂಟ್‌ನಿಂದ 14.27 ಕೋಟಿ, ಆಂಧ್ರ ಸ್ಟೀಲ್ಸ್‌ನಿಂದ 1.28 ಕೋಟಿ, ನಂದಿ ರೋಲಿಂಗ್ ಮಿಲ್ಸ್‌ನಿಂದ 1.77 ಕೋಟಿ, ಬೃಂದಾವನ್ ಮಿಲ್ಸ್‌ನಿಂದ 1.73 ಕೋಟಿ ಬಾಕಿ ಇದೆ. ಹೀಗೆ ಪಟ್ಟಿ ದೊಡ್ಡದಾಗಿ ಹೋಗುತ್ತಿದೆ. ಸುಮಾರು ಒಂದು ಕೋಟಿ ರೂಪಾಯಿಗೂ ಹೆಚ್ಚು ಬಾಕಿಯನ್ನು ಉಳಿಸಿಕೊಂಡಿರುವಂಥ 50 ದೊಡ್ಡ ದೊಡ್ಡ ಕಂಪನಿಗಳಿವೆ. ತಾವು ಮಾಡಿಕೊಂಡ ಒಪ್ಪಂದದ ಪ್ರಕಾರ, ಕೆ.ಇ.ಆರ್.ಸಿ. ಮುಂದೆ ಒಪ್ಪಿಕೊಂಡ ರೀತಿಯಲ್ಲಿ ಇದನ್ನು ಮೂರು ತಿಂಗಳಲ್ಲಿ ವಸೂಲು ಮಾಡಬೇಕಾದಂಥ ವ್ಯವಸ್ಥೆಯಿತ್ತು. ಅದರ ವಿರುದ್ಧವಾಗಿ ಸರ್ಕಾರ ನ್ಯಾಯಾಲಯಕ್ಕೆ ಹೋಗಿದ್ದು ಸರಿ, ತಡೆಯಾಜ್ಞೆ ತಂದದ್ದು ಸರಿ, ರೈತರಿಗೆ ಕೊಡಬೇಕಾದಂಥ ಫೆಸಿಲಿಟೀಸ್ ವಿಚಾರದಲ್ಲಿ ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತಂದದ್ದು ಸರಿ ಎಂದು ಸರ್ಕಾರ ಒಪ್ಪಿಕೊಳ್ಳುವುದಾದರೆ ಅದಕ್ಕೆ ನನ್ನದು ಯಾವುದೇ ರೀತಿಯಾದಂಥ ಅಭ್ಯಂತರವಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಬಜೆಟ್‌ನಲ್ಲಿ ಹೇಳಿರುವಂಥ ರಿಫಾರ್ಮ್ಸ್ ಅನ್ನು ನಾವು ಸ್ವಾಗತ ಮಾಡಿದೆವು, ಆದರೆ ಆ ರಿಫಾರ್ಮ್ಸ್‌ಗೆ ವಿರುದ್ಧವಾಗಿ ರಾಜ್ಯ ಸರ್ಕಾರ ತಡೆಯಾಜ್ಞೆಯನ್ನು ತಂದಿದೆ ಎನ್ನುವ ನೋವನ್ನು ನಿಮ್ಮ ಮುಂದೆ ಹೇಳಲು ನಾನು ಇಚ್ಛಿಪಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಪಂಪ್‌ಸೆಟ್‌ಗಳಿಗೆ ಅನ್‌ಆಥರೈಸ್ಡ್ ಕನೆಕ್ಷನ್ ತೆಗೆದುಕೊಂಡಿರುವಂಥಾದ್ದು ಎಲ್ಲರಿಗೂ ಗೊತ್ತಿದೆ. ಅದಕ್ಕೆ ನಾವು ಒಂದು ವಾಯಿದೆ ಕೊಟ್ಟು, ಇಷ್ಟರೊಳಗಾಗಿ ಇಷ್ಟು ದುಡ್ಡು ಕಟ್ಟಿದರೆ ಅದನ್ನು ರೆಗ್ಯುಲರೈಸ್ ಮಾಡುತ್ತೇವೆ ಎಂದು ಹೇಳಿದ್ದೆವು. ಇನ್ನೂ ಸ್ವಲ್ಪ ಸಮಯ ಜಾಸ್ತಿ ಕೊಟ್ಟರೆ ಎಲ್ಲರೂ ಹಾಕಿಕೊಳ್ಳುತ್ತಾರೆ ಎಂದು ಅನೇಕ ಜನ ಶಾಸಕರು ಮತ್ತು ಬೇರೆಯವರೆಲ್ಲರಿಂದಲೂ ಒತ್ತಾಯ ಬಂತು. ರೆಗ್ಯುಲೇಟರಿ ಕಮೀಷನ್ ಒಂದು ವಾಯಿದೆಯನ್ನು ನಿಗದಿ ಮಾಡಿಬಿಡುತ್ತದೆ. ಶಾಸಕರ ಮತ್ತು ಸಾರ್ವಜನಿಕರ ಒತ್ತಾಯದ ಮೇರೆಗೆ.ಸಮಯವನ್ನು ವಿಸ್ತರಣೆ ಮಾಡುವುದರಿಂದ ಎಲ್ಲರೂ ನಿಗದಿಪಡಿಸಿದ ಪೆನಾಲ್ಟಿಯನ್ನು ಕಟ್ಟಿ ರೆಗ್ಯುಲರೈಸ್ ಮಾಡಿಕೊಳ್ಳುತ್ತಾರೆ ಎನ್ನುವ ದೃಷ್ಟಿಯಿಂದ ಅಂಥ ಒಂದು ವಾದವನ್ನು ಮುಂದಿಟ್ಟರೆ, ಅದು ತಪ್ಪು ಎಂದು ಹೇಳುತ್ತೀರೇನು?

ಶ್ರೀ ಎ. ರಾಮದಾಸ್: ಆ ವಾದಕ್ಕೆ ನಾನು ಯಾವತ್ತೂ ವಿರೋಧ ಮಾಡಿಲ್ಲ. ಆದರ ಬಗ್ಗೆ ಇಲ್ಲೂ ಇದೆ. ಆದರೆ ಟಿ ಅಂಡ್ ಡಿ ಲಾಸಸ್, ಥೆಫ್ಟ್, ಅರಿಯರ್ಸ್ ಇವೆಲ್ಲವುಗಳಿಗೂ ತಡೆಯಾಜ್ಞೆಯನ್ನು ತೆಗೆದುಕೊಂಡಿರುವುದು ನೋವಿನ ಸಂಗತಿ ಎನ್ನುವುದನ್ನು ಹೇಳಲು ಇಚ್ಛಿಸುತ್ತೇನೆ. ಅಂಥ ವಿಚಾರಗಳಲ್ಲಿ ರಾಜ್ಯ ಸರ್ಕಾರ ನ್ಯಾಯಾಲಯಕ್ಕೆ ಹೋಗಬೇಕಾದಂಥ ಪರಿಸ್ಥಿತಿ ಇರಲಿಲ್ಲ. ರಾಜ್ಯ ಸರ್ಕಾರವೇ ನ್ಯಾಯಾಲಯಕ್ಕೆ ಹೋಗಿ ಇಂಥ ಒಂದು ಆದೇಶವನ್ನು ಪಡೆಯುವಲ್ಲಿ ಯಶಸ್ವಿಯಾಗುವುದು, ಅದರ ಮೂಲಕ ಈ ರಿಫಾರ್ಮ್ಸ್‌ಗಳನ್ನು ನಿಲ್ಲಿಸುವಂಥ ಕೆಲಸ ಆಗಬಾರದು ಎನ್ನುವುದು ನನ್ನ ಪ್ರಮುಖವಾದಂಥ ವಿಚಾರ. ಅದನ್ನು ಮಾಡುವುದೇ ಆದರೆ, ಇಂಥ ರಿಫಾರ್ಮ್ಸ್ ಬಗ್ಗೆ ಬಜೆಟ್‌ನಲ್ಲಿ ಹೇಳುವಂಥ ಅವಶ್ಯಕತೆ ಇರಲಿಲ್ಲ ಎಂದು ಹೇಳುತ್ತೇನೆ.

ಎರಡನೆಯದಾಗಿ, ಪ್ರವಾಸೋದ್ಯಮದ ವಿಚಾರ. ಪ್ರವಾಸೋದ್ಯಮ ಇಲಾಖೆಗೆ ಸಂಬಂಧಪಟ್ಟ ಹಾಗೆ ನಾನು ತಮ್ಮಿಂದ ಬಹಳ ನಿರೀಕ್ಷೆ ಮಾಡಿದ್ದೆ. ರಾಜ್ಯದಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿಯನ್ನು ಮಾಡಲು ಹೆಚ್ಚು ಅವಕಾಶಗಳಿವೆ ಎನ್ನುವ ಮಾತುಗಳನ್ನು ಹೇಳಿದ್ದೀರಿ. ಆದರ ಜೊತೆಗೆ, ಈ ವರ್ಷ 1,752 ಕೋಟಿ ರೂಪಾಯಿಗಳ ಹೂಡಿಕೆಯ 52 ಹೊಸ ಪ್ರವಾಸೋದ್ಯಮ ಯೋಜನೆಗಳಿಗೆ ಅನುಮತಿ ನೀಡಲಾಗಿದೆ ಎನ್ನುವುದನ್ನೂ ಹೇಳಿದ್ದೀರಿ. ಖಾಸಗಿ ವಲಯದಲ್ಲಿ ಬರುವಂಥ 52 ಸಂಸ್ಥೆಗಳಿಗೆ ತಾವು ಪರವಾನಗಿಯನ್ನು ನೀಡಿರುವುದು ಬಹಳ ಸ್ವಾಗತವಾದಂಥ ವಿಚಾರ. ಆದರೆ, ಪ್ರವಾಸೋದ್ಯಮದ ಅಭಿವೃದ್ಧಿಗೆ ರಾಜ್ಯ ಸರ್ಕಾರದ ಪಾಲು ಏನು? ರಾಜ್ಯ ಸರ್ಕಾರದವರು ಈ ಬಗ್ಗೆ ಏನು ಮಾಡಲು ಹೊರಟಿದ್ದೀರಿ? ಪ್ರವಾಸೋದ್ಯಮದ ದೃಷ್ಟಿಯಿಂದ ನಿಮ್ಮಲ್ಲಿ ಒಂದು ಪ್ಯಾಕೇಜನ್ನೂ ಕಾಣುತ್ತಿಲ್ಲ. ಕೇರಳದಂಥ ಸಣ್ಣ ರಾಜ್ಯದ ಈ ವರ್ಷದ ಬಜೆಟ್‌ನಲ್ಲಿ ಸುಮಾರು 800 ಕೋಟಿ ರೂಪಾಯಿಗಳ ಅರ್ನಿಂಗ್ಸ್ ಇರುವುದನ್ನು ನಾವು ಕಂಡಿದ್ದೇವೆ. ಇಲ್ಲಿ ನಾನು ಒಂದು ಪ್ರಮುಖವಾದಂಥ ವಿಚಾರವನ್ನು ಹೇಳಬೇಕಾಗಿದೆ. ಪ್ರವಾಸೋದ್ಯಮ ಇಲಾಖೆಯ ವ್ಯಾಪ್ತಿಯಲ್ಲಿದ್ದಂಥ ಮೈಸೂರಿನ ಮೆಟ್ರೋಪೋಲ್ ಹೋಟೆಲ್ ಮುಚ್ಚಿ ಎರಡು ವರ್ಷವಾಯಿತು. ಇವತ್ತಿಗೂ ಕೂಡ ಕೋಟ್ಯಾಂತರ ರೂಪಾಯಿಗಳ ಬೆಲೆ ಬಾಳುವ ಆ ಕಟ್ಟಡ ಹಾಗೆಯೇ ಹಾಳುಬಿದ್ದಿದೆ. ಇನ್ನೊಂದು ಕಡೆ, ದೊಡ್ಡ ದೊಡ್ಡ ಉದ್ದಿಮೆಗಳನ್ನು

ಮುಚ್ಚುವ ವಿಚಾರದಲ್ಲಿ ನೀವು ಡಿಸ್-ಇನ್‌ವೆಸ್ಟ್‌ಮೆಂಟ್ ಬಗ್ಗೆ ಮಾತನಾಡುತ್ತಿದ್ದೀರಿ. ಅದಕ್ಕೆ ನನ್ನದೇನೂ ವಿರೋಧವಿಲ್ಲ. ಆದರೆ ಅದಕ್ಕೆ ಏನು ರಿಫಾರ್ಮ್ಸ್ ಆಗಬೇಕು ಎಂದು ಚಿಂತನೆ ಮಾಡಬೇಕು. ಸಾವಿರಾರು ಜನ ಕಾರ್ಮಿಕರು ಬೀದಿ ಪಾಲಾಗುವಂಥ ಪರಿಸ್ಥಿತಿ ಬಂದಿರುವ ಈ ಸಂದರ್ಭದಲ್ಲಿ, ಕೇಂದ್ರ ಸರ್ಕಾರದ ಸೆಂಟ್ರಲ್ ಟೂರಿಸಂ ಡೆವೆಲಪ್‌ಮೆಂಟ್ ಕಾರ್ಪೊರೇಷನ್ನಿನವರು ಡಿಸ್-ಇನ್‌ವೆಸ್ಟ್‌ಮೆಂಟ್ ಅಡಿಯಲ್ಲಿ ಮೈಸೂರಿನ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಅನ್ನು ಹೊರಗುತ್ತಿಗೆ ಕೊಡಬೇಕು ಎನ್ನುವ ಚಿಂತನೆ ಮಾಡಿದ್ದು, ಅದನ್ನು ಪ್ರವಾಸೋದ್ಯಮ ಇಲಾಖೆಯಡಿಯಲ್ಲಿ ರಾಜ್ಯ ಸರ್ಕಾರ ಕೊಂಡುಕೊಳ್ಳಬೇಕು ಎನ್ನುವ ನಿರ್ಧಾರಕ್ಕೆ ಬರುತ್ತಿದೆ ಎನ್ನುವ ವಿಚಾರ ಗೊತ್ತಾಗಿದೆ. ರಾಜ್ಯ ಸರ್ಕಾರ ಆ ಚಿಂತನೆಯಲ್ಲಿದೆ. ಕೋಟ್ಯಾಂತರ ರೂಪಾಯಿ ಬೆಲೆಬಾಳುವಂಥ ಇಂಥ ಹೋಟೆಲ್‌ಗಳನ್ನು ರಾಜ್ಯದ ಪ್ರವಾಸೋದ್ಯಮ ಇಲಾಖೆ ಕೊಂಡುಕೊಳ್ಳಬೇಕಾದ ಅವಶ್ಯಕತೆ ಇದೆಯೇ ಎಂದು ಕೇಳುತ್ತೇನೆ. ಪ್ರವಾಸೋದ್ಯಮ ಇಲಾಖೆಗೆ ಸಂಬಂಧಪಟ್ಟಂತೆ ಯಾವುದೇ ಪ್ರೋಗ್ರಾಂಗಳನ್ನು ಕೊಡದೇ ಇರುವಾಗ, ಅಂಥ ಹೋಟೆಲ್‌ಗಳನ್ನು ಕೊಂಡುಕೊಳ್ಳುವ ಯೋಜನೆ ಸರ್ಕಾರದ ಮುಂದೆ ಏಕೆ ಇದೆ ಎಂದು ಕೇಳುತ್ತೇನೆ.

ಇನ್ನು, ಬಜೆಟ್‌ನ ಕ್ರಮ ಸಂಖ್ಯೆ ಏಳರಲ್ಲಿ ತಾವು ಪ್ರಮುಖವಾದಂಥ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. 'ಮುಂದಿನ ಅಧಿವೇಶನದಲ್ಲಿ ನಾನು ಆರ್ಥಿಕ ಜವಾಬ್ದಾರಿ ಮಸೂದೆಯನ್ನು ಮಂಡಿಸಲಿದ್ದೇನೆ' ಎಂದು ಫೈನಾನ್ಷಿಯಲ್ ಅಕೌಂಟಬಿಲಿಟಿ ಬಗ್ಗೆ ಬಹಳ ದೊಡ್ಡ ವಿಚಾರವನ್ನು ಹೇಳಿ, ಬೆಂಗಳೂರಿನಲ್ಲಿರುವ ಸಮಾಜಿಕ-ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಗೆ ಇದನ್ನು ವಹಿಸುವಂಥ ಕೆಲಸವನ್ನು ಮಾಡುತ್ತಿದ್ದೇವೆ ಎಂದು ಹೇಳಿದ್ದೀರಿ. ಆಗಲೇ ಭೈರೇಗೌಡರು ಹೇಳಿದ್ದಾರೆ, ಪ್ರತಿಯೊಂದಕ್ಕೂ ಒಂದು ಆಯೋಗವನ್ನು ರಚನೆ ಮಾಡುವುದು ಎಂದು. ಇದರ ಬಗ್ಗೆ ನಾನು ಏನೂ ಹೇಳಲು ಹೋಗುವುದಿಲ್ಲ. ಆದರೆ ಈಗಿರುವಂಥ ಕಾನೂನಿನ ಅಡಿಯಲ್ಲಿ, ತಾವು ಹೇಳಿರುವ ಕ್ರಮಸಂಖ್ಯೆ ಏಳರ ಅಡಿಯಲ್ಲಿ ಹೇಳುವುದಾದರೆ, ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ರಸ್ತೆಗಳನ್ನು ಮಾಡದೇ ಬಿಲ್ ತೆಗೆದುಕೊಂಡಿರುವಂಥಾದ್ದನ್ನು ನಾವು ನೋಡಿದ್ದೇವೆ, ಹೀಗೆ ಬೇರೆ ಎಲ್ಲಾ ಇಲಾಖೆಗಳಲ್ಲೂ ಆಗಿದೆ. ಆದರೆ ಆರ್ಕಿಯಾಲಜಿ ಡಿಪಾರ್ಟ್‌ಮೆಂಟಿನ ಅಡಿಯಲ್ಲಿ ಬರುವಂಥ ದೇವಸ್ಥಾನಗಳಲ್ಲಿನ ಅಕೌಂಟಬಿಲಿಟಿಯ ವಿಚಾರವನ್ನು ಹೇಳಲು ಇಚ್ಛೆಪಡುತ್ತೇನೆ. ಈಗಿರುವಂಥ ಲೆಕ್ಕದ ಪ್ರಕಾರ ಸುಮಾರು 18.52 ಕೋಟಿ ರೂಪಾಯಿಗಳ ಹಗರಣಗಳಿಗೆ ಸಂಬಂಧಪಟ್ಟಂತೆ ಮುಖ್ಯಮಂತ್ರಿಗಳಿಗೆ ದಿನಾಂಕ 10-11-2000 ದಂದು ಒಂದು ಪತ್ರ ಬಂತು. ಅದರಲ್ಲಿ ಆರ್ಕಿಯಾಲಜಿ ಡಿಪಾರ್ಟ್‌ಮೆಂಟಿನಲ್ಲಿ ಆಗಿರುವಂಥ ಅನ್ಯಾಯಗಳ ಬಗ್ಗೆ ಒಂದು ದೊಡ್ಡ ಪಟ್ಟಿಯನ್ನೇ ಕೊಡಲಾಗಿತ್ತು. ಇದಲ್ಲದೆ, ಅರ್ಥ ಇಲಾಖೆಯ ಪ್ರಿನ್ಸಿಪಾಲ್ ಸೆಕ್ರೆಟರಿಯವರು ಚಂದ್ರಹಾಸ ಗುಪ್ತಾರವರಿಗೆ ಒಂದು ಪತ್ರವನ್ನ ಬರೆದು, ಇದರಲ್ಲಿ ಸುಮಾರು 220 ಕೋಟಿ ರೂಪಾಯಿಗಳ ಹಗರಣ ನಡೆಯುತ್ತಿದೆ, ಇದಕ್ಕೆ ಸಂಬಂಧಪಟ್ಟಹಾಗೆ ತನಿಖೆ ಮಾಡಿ ಎಂದು ಹೇಳಿದರೂ, ಇವತ್ತಿನವರೆಗೂ ಅದನ್ನು ಮಾಡಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಒಂದೆರಡು ವಿಚಾರಗಳನ್ನು ತಮ್ಮ ಮುಂದೆ ಇಡಲು ಇಚ್ಛೆಪಡುತ್ತೇನೆ. ವೀರಭದ್ರಸ್ವಾಮಿ ದೇವಸ್ಥಾನ, ಗುಳೂರು, ಇಲ್ಲಿ ಕಳೆದ ನಾಲ್ಕು ವರ್ಷದಿಂದ ಒಂದೇ ಕೆಲಸವನ್ನು ತೋರಿಸಿ ಹಣ ಪಡೆದಿದ್ದಾರೆ. ಒಂದು ವರ್ಷದಲ್ಲಿ ಒಂದು ಲಕ್ಷದ 98 ಸಾವಿರ, ಇನ್ನೊಂದು ವರ್ಷದಲ್ಲಿ

ಒಂದು ಲಕ್ಷದ 96 ಸಾವಿರ, ಇನ್ನೊಂದು ವರ್ಷದಲ್ಲಿ 8 ಲಕ್ಷದ 87 ಸಾವಿರ, ಇನ್ನೊಂದು ವರ್ಷದಲ್ಲಿ 2 ಲಕ್ಷದ 98 ಸಾವಿರ ಹೀಗೆ ಪಡೆದಿದ್ದಾರೆ. ದೇವಸ್ಥಾನ ಮೊದಲು ಹೇಗಿತ್ತೋ ಈಗಲೂ ಹಾಗೆಯೇ ಇದೆ. ಅದಕ್ಕೆ ಸಂಬಂಧಪಟ್ಟ ಫೋಟೋಗ್ರಾಫ್ಸ್ ನನ್ನ ಹತ್ತಿರ ಇವೆ. ಈ ರೀತಿಯಲ್ಲಿ ಈ ದೇವಸ್ಥಾನದ ರಿಪೇರಿಗೆಂದು ಕಳೆದ ನಾಲ್ಕು ವರ್ಷಗಳಿಂದ 37,39,721 ರೂಪಾಯಿಗಳನ್ನು ಡ್ರಾ ಮಾಡಿದ್ದಾರೆ. ಈ ರೀತಿ ನಡೆಯುತ್ತಿರುವಂಥ ಹಲವು ದೇವಸ್ಥಾನಗಳು ನಮ್ಮ ಮುಂದೆ ಇವೆ.

ಶ್ರೀ ಕಾಗೋಡು ತಿಮ್ಮಪ್ಪ: ಇಂಥ ಸ್ಪೆಸಿಫಿಕ್ ಇಶ್ಯೂಸ್ ಇದ್ದರೆ, ಅವುಗಳನ್ನು ಇಲಾಖೆಯ ಬೇಡಿಕೆಯ ಮೇಲೆ ಚರ್ಚೆ ಮಾಡುವಾಗ ಹೇಳಿದರೆ ಆಗ ಸಂಬಂಧಪಟ್ಟ ಮಂತ್ರಿಗಳು ನಿರ್ದಿಷ್ಟವಾದಂಥ ಉತ್ತರ ಕೊಡಲು ಸಾಧ್ಯವಾಗುತ್ತದೆ.

ಶ್ರೀ ಸಿ. ಬೈರೇಗೌಡ: ಜನರಲ್ ಡಿಸ್ಕಷನ್‌ಗೆ ಕೂಡ ಬಾಯಿ ಬಿಡಲು ಅವಕಾಶವಿಲ್ಲದ ಹಾಗೆ ಮಾಡಿ ಎಲ್ಲವೂ ಆಗಲೇಬೇಕು ಎಂದು ಕುಳಿತಿದ್ದೀರಿ. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಹೇಳಿದರೆ, ಬಜೆಟ್ ಮೇಲೆ ಚರ್ಚೆಯಾಗುವಾಗ ಹೇಳಿ ಎಂದು ಹೇಳುತ್ತೀರಿ. ಅಡ್ಜರ್ನ್‌ಮೆಂಟ್ ಮೋಷನ್ ತಂದರೆ ಬಜೆಟ್ ಮೇಲೆ ಮಾತನಾಡುವಾಗ ಮಾತನಾಡಿ ಎಂದು ಉಪದೇಶ ಮಾಡುತ್ತೀರಿ.

ಶ್ರೀ ... ಮದಾಸ್: ಕೇವಲ ಎರಡು ಪ್ರಕರಣಗಳನ್ನು ಹೇಳಿದ್ದರಿಂದಲೇ ಇಲಾಖೆಯಲ್ಲಿ ಏನಾಗಿದೆ ಎಂದು ಕಾಗೋಡು ತಿಮ್ಮಪ್ಪನವರಿಗೆ ಅರ್ಥವಾಗಿರುವುದಕ್ಕೆ ಸಂತೋಷ ವ್ಯಕ್ತಪಡಿಸುತ್ತಾ, ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಕೇವಲ ಒಂದು ಪ್ರಕರಣವಲ್ಲ, ಈ ರೀತಿಯ ಹತ್ತಾರು ಪ್ರಕರಣಗಳಿವೆ. ಮೈಸೂರಿನಲ್ಲಿರುವಂಥ ವೆಲ್ಲಿಂಗ್‌ಟನ್ ಲಾಡ್ಜ್ ರಿಪೇರಿಗೋಸ್ಕರವಾಗಿ 18 ಕೋಟಿ 24 ಲಕ್ಷದ 226 ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂದು ಇದೆ. ಇದಕ್ಕೆ ಸಂಬಂಧಪಟ್ಟ ಎಲ್ಲಾ ಬಿಲ್‌ಗಳು ನಮ್ಮ ಹತ್ತಿರ ಇವೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಚೇರ್‌ಮೆನ್‌ರವರೇ, ಶ್ರೀ ರಾಮದಾಸ್ ಅವರು ಮಾತನಾಡುತ್ತಾ 18 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆಂದು ಹೇಳಿದರು. ಅದು 18 ಕೋಟಿ ರೂಪಾಯಿಗಳೋ ಅಥವಾ 18 ಲಕ್ಷ ರೂಪಾಯಿಗಳೋ ಎಂಬುದನ್ನು ಸರಿಯಾಗಿ ಕನ್‌ಫರ್ಮ್ ಮಾಡಿ ಹೇಳಿದರೆ ಒಳ್ಳೆಯದು.

ಶ್ರೀ ಎ. ರಾಮದಾಸ್: ಸರ್ಕಾರಕ್ಕೆ ಬಂದಿರುವ ಪತ್ರದ ಪ್ರಕಾರ ವೆಲ್ಲಿಂಗ್‌ಟನ್ ಲಾಡ್ಜ್‌ಗೋಸ್ಕರವಾಗಿ 40 ಲಕ್ಷ ರೂಪಾಯಿಗಳು ಖರ್ಚಾಗುವಂಥದ್ದು ಎಂದು ಎಸ್ಟಿಮೇಟ್‌ನಲ್ಲಿದೆ. ಆದರೆ ನಾಲ್ಕು ವರ್ಷದಲ್ಲಿ ವೆಲ್ಲಿಂಗ್‌ಟನ್ ಲಾಡ್ಜ್‌ಗೆ 14 ಕೋಟಿ ರೂಪಾಯಿಗಳನ್ನು ಡ್ರಾ ಮಾಡಿದ್ದಾರೆ. ಇದನ್ನು ಕೇಳಿದಾಗ ಬಹುಶಃ ಸರ್ಕಾರಕ್ಕೆ ಆಶ್ಚರ್ಯವಾಗಬಹುದು. ಇದರ ಬಿಲ್ಲನ್ನು ಸರ್ಕಾರಕ್ಕೆ ಕೊಡುತ್ತಿದ್ದೇನೆ. ಇಷ್ಟು ಹಣಕ್ಕೆ ಯಾವ ಯಾವ ಬಿಲ್‌ಗಳನ್ನು ಎಲ್ಲಿಂದ ಅಡ್ಜಸ್ಟ್ ಮಾಡಿದ್ದಾರೋ ಅರ್ಥವಾಗುತ್ತಿಲ್ಲ. ಇದಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರ ಬಂದಿದೆ. ಅಕೌಂಟಬಿಲಿಟಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ

ಒಬ್ಬ ಅಧಿಕಾರಿ ಕಳೆದ 4 ವರ್ಷಗಳ ಕಾಲದಿಂದ 14 ಲಕ್ಷ ರೂಪಾಯಿಗಳನ್ನು ಟಿ.ಎ. ಬಿಲ್ಲಿನ ರೂಪದಲ್ಲಿ ಕ್ಲೈಮ್ ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟ ಬಿಲ್‌ಗಳು ನನ್ನ ಹತ್ತಿರ ಇವೆ. ಇದನ್ನು ಏಕೆ ಹೇಳಿದೆ ದರೆ ಆರ್ಥಿಕ ವಿಚಾರದಲ್ಲಿ ತಮ್ಮದೇ ಆದಂಥ ರೀತಿಯಲ್ಲಿ ಒಂದು ಜವಾಬ್ದಾರಿಯನ್ನು, ಫೈನಾನ್ಸಿಯಲ್ ಅಕೌಂಟಬಿಲಿಟಿ ಕೊಡಬೇಕೆಂದು ಸರ್ಕಾರದ ಕಡೆಯಿಂದ ಹೇಳುತ್ತಿದ್ದಿರಿ. ಆದ್ದರಿಂದ, ಇದರ ಬಗ್ಗೆ ಜ್ಯುಡಿಷಿಯಲ್ ಅಥವಾ ಬೇರೆ ಯಾವ ಎನ್‌ಕ್ವಯರಿ ಮಾಡಿ ಎಂದು ಕೇಳುತ್ತಿಲ್ಲ. ಸರ್ಕಾರವೇ ರಚನೆ ಮಾಡಿದಂಥ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಇದನ್ನು ವಹಿಸಿಕೊಡಿ. ತನಿಖೆಗೆ ಬೇಕಾದಂಥ ಎಲ್ಲಾ ದಾಖಲೆಗಳನ್ನು ಕೊಡಲಿಕ್ಕೆ ಸಿದ್ಧರಾಗಿದ್ದೇವೆ. ಕೇವಲ ಒಂದು ದೇವಸ್ಥಾನ ಅಲ್ಲ, ಈ ರೀತಿಯಾದಂಥ ಹತ್ತಾರು ಪ್ರಕರಣಗಳಿದ್ದು ಇರುವಂಥ ಈ ಪ್ರಕರಣವನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ವಹಿಸಿಕೊಡಬೇಕು. ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಕಳೆದ ಸಾಲಿನ ಬಜೆಟ್‌ಗೆ ಹೋಲಿಕೆ ಮಾಡಿಕೊಂಡರೆ ಈ ಸಲ ಯಾವುದೇ ರೀತಿಯ ಹೊಸ ಯೋಜನೆಗಳನ್ನು ಮಾಡಿರುವಂಥದ್ದು ಕಾಣುತ್ತಿಲ್ಲ. ಕಳೆದ ಬಾರಿ ಸುರಕ್ಷ ಹೆರಿಗೆ ಪದ್ಧತಿಯನ್ನು ತಂದಿರಿ. ಅದಕ್ಕೆ ಈ ಸಲ ಕೂಡ ಬಜೆಟ್ ಅಲೋಕೇಷನ್ಸ್‌ನಲ್ಲಿ ತುಂಬಾ ಕಡಿಮೆಯಾಗಿದೆ. ಪ್ರೈಮರಿ ಹೆಲ್ತ್‌ಗೋಸ್ಕರವಾಗಿ ತಾವು ಏನು ಹೆಚ್ಚು ವಿಚಾರಗಳನ್ನು ಹೇಳಿದಿರಿ ಈ ಬಾರಿಯ ಬಜೆಟ್‌ನಲ್ಲಿ ಅವು ಯಾವುದನ್ನೂ ತರುವಂಥ ವಿಚಾರವನ್ನು ಮಾಡಿಲ್ಲ. ರಾಜ್ಯದಲ್ಲಿನ ಮೈಸೂರು ಮತ್ತು ಬೆಂಗಳೂರು ಮೆಡಿಕಲ್ ಕಾಲೇಜುಗಳ ಬಗ್ಗೆ ಕಳೆದ ಸಾರಿ ಎಂ.ಸಿ.ಐ. ನವರು ಸರ್ಕಾರಕ್ಕೆ ಒಂದು ಪತ್ರವನ್ನು ಬರೆಯುತ್ತಾ ಸದರಿ ಕಾಲೇಜುಗಳಲ್ಲಿ ಉಪನ್ಯಾಸಕರು ಒಳಗೊಂಡಂತೆ ಇನ್ನಿತರ ಅಗತ್ಯ ಸೌಲಭ್ಯಗಳ ಕೊರತೆ ಇರುವುದರಿಂದ ಸೀಟುಗಳ ಸಂಖ್ಯೆ ಕಡಿಮೆ ಮಾಡಿದ್ದೇವೆ' ಎಂದು ಹೇಳಿದ್ದರು. ರಾಜ್ಯಸರ್ಕಾರದ ವತಿಯಿಂದ ತಾವು ಪತ್ರ ಬರೆದು ಕಾಲೇಜುಗಳಲ್ಲಿ ಕೊರತೆ ಇರುವ ಸೌಲಭ್ಯಗಳನ್ನು ಮುಂದಿನ ವರ್ಷದ ಒಳಗಾಗಿ ಸರಿದೂಗಿಸುತ್ತೇವೆ, ಆದಕಾರಣ ಒಂದು ವರ್ಷದವರೆಗೆ ನಮಗೆ ಕಾಲಾವಕಾಶ ನೀಡಬೇಕೆಂದು ಕೋರಿದ್ದೀರಿ. ಆದರೆ, ಸದರಿ ಸೌಲಭ್ಯಗಳನ್ನು ಹೆಚ್ಚಿಸುವ ದಿಶೆಯಲ್ಲಿ ಪ್ರಸಕ್ತ ವರ್ಷದ ಆಯವ್ಯಯದಲ್ಲಿ ತಾವು ಯಾವುದೇ ರೀತಿಯಾದ ಹಂಚಿಕೆಯನ್ನು ಮಾಡಲು ಕ್ರಮ ಕೈಗೊಂಡಿರುವುದಿಲ್ಲ. ತಾವು ಈ ಬಗ್ಗೆ ಏನೂ ಕ್ರಮ ಕೈಗೊಂಡಿಲ್ಲದಿರುವ ಕಾರಣ ಪ್ರಸಕ್ತ ವರ್ಷದಲ್ಲಿ ನಮಗೆ ಏನು ಕೋಟಾ ಸಿಗಬೇಕಾಗಿತ್ತೋ ಅದೂ ಸಹ ಕಡಿಮೆಯಾಗುತ್ತಿದೆ. ವಿಶೇಷವಾಗಿ ಅಂಗವಿಕಲರ ಕಲ್ಯಾಣಕ್ಕೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳು ಕಳೆದ ಸಾಲಿನ ವರ್ಷದ ಆಯವ್ಯಯ ಮುಂಗಡಪತ್ರವನ್ನು ಮಂಡಿಸಿದ ನಂತರ ವಿಶ್ವ ಅಂಗವಿಕಲರ ದಿನಾಚರಣೆಯಂದು ಒಂದು ನೀತಿಯನ್ನು ಘೋಷಿಸಿದರು. ಅದೇನೆಂದರೆ ಕರ್ನಾಟಕ ರಾಜ್ಯ ಅಂಗವಿಕಲರ ಕಲ್ಯಾಣ ಹಣಕಾಸು ಸಂಸ್ಥೆಯನ್ನು ಸ್ಥಾಪನೆ ಮಾಡಿದ್ದು ಇದಕ್ಕೆ ಮುಂದಿನ ವರ್ಷದ ಬಜೆಟ್‌ನಲ್ಲಿ ಅಲೋಕೇಷನ್ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ವಿಶೇಷವಾಗಿ ಅಂಗವಿಕಲರು ಸ್ವಂತ ಉದ್ಯೋಗ ಮಾಡಲಿಕ್ಕಾಗಿ ಬೇಕಾದಂಥ ಹಣವನ್ನು ಕೇವಲ 4 ಪರ್ಸೆಂಟ್ ಬಡ್ಡಿ ದರದಲ್ಲಿ ಕೊಡುವ ಸಲುವಾಗಿ ಅಂಗವಿಕಲರ ಕಲ್ಯಾಣ ಹಣಕಾಸು ಸಂಸ್ಥೆಯನ್ನು ಮಾಡುತ್ತೇವೆಂದು ಅನೌನ್ಸ್‌ಮೆಂಟ್ ಮಾಡಿದ್ದೀರಿ. ಆದರೆ ಈ ವರ್ಷದ ಬಜೆಟ್‌ನಲ್ಲಿ ಎಲ್ಲೂ ಕೂಡ ಇದರ ಬಗ್ಗೆ ಪ್ರಸ್ತಾಪ ಇಲ್ಲ ಮತ್ತು ಹಣಕಾಸಿನ ಅಲೋಕೇಷನ್ ಕೂಡ ಕಾಣುತ್ತಿಲ್ಲ.

ಇನ್ನು ಈ ಬಜೆಟ್‌ನಲ್ಲಿ ಕೈಗಾರಿಕೆಗಳ ನೀತಿ ಏನು ಎನ್ನುವುದನ್ನು ಹೇಳಿಲ್ಲ, ಆದರೆ ಪಬ್ಲಿಕ್ ಸೆಕ್ಟಾರ್‌ಗಳನ್ನು ಖಾಸಗೀಕರಣ ಮಾಡುತ್ತೇವೆಂದು ಹೇಳಿದ್ದೀರಿ. ಹಾಗಾದರೆ ತಮ್ಮ ಕಾಂಗ್ರೆಸ್ ಪಕ್ಷದ ನೀತಿ ಏನು? ಉತ್ತರ ಪ್ರದೇಶ ಉತ್ತರಾಂಚಲದಲ್ಲಿನ ಬಾಲ್ಕೊ ಕಂಪನಿಯ ವಿಚಾರ ಬಂದಾಗ - ಖಾಸಗೀಕರಣ ಮಾಡುವುದು ತಪ್ಪು ಎನ್ನುವಂಥ ತಮ್ಮ ಪಕ್ಷದ ವಿಚಾರವನ್ನು ಇಡೀ ದೇಶಕ್ಕೆ ಗೊತ್ತಾಗುವ ರೀತಿಯಲ್ಲಿ ಹೇಳಿದಿರಿ. ಆದರೆ ಇಲ್ಲಿ ವಿಶೇಷವಾಗಿ ಪಬ್ಲಿಕ್ ಲಿಮಿಟೆಡ್ ಕಂಪನಿಗಳನ್ನು ಖಾಸಗೀಕರಣ ಮಾಡುತ್ತೇವೆ ಅಥವಾ ಕ್ಲೋಸ್ ಮಾಡುತ್ತೇವೆ ಎನ್ನುವಂಥ ಮಾತನ್ನು ಹೇಳುತ್ತಿದ್ದೀರಿ. ಖಾಸಗೀಕರಣ ಮಾಡುವುದರಲ್ಲಿ ನಮ್ಮ ವಿರೋಧ ಇಲ್ಲ. ಆದರೆ ಪ್ರಮುಖವಾಗಿ ಇಂಥ ಸಾರ್ವಜನಿಕ ಉದ್ಯಮಗಳಲ್ಲಿ ಕೆಲಸ ಮಾಡುವಂಥ ಲಕ್ಷಾಂತರ ಕಾರ್ಮಿಕರ ಹಿತವನ್ನು ಕಾಪಾಡುವ ದೃಷ್ಟಿಯಲ್ಲಿ ಸರ್ಕಾರದ ಪಾಲು ಏನು ಎನ್ನುವುದನ್ನು ಕೇಳಲಿಕ್ಕೆ ಇಚ್ಛೆಪಡುತ್ತೇನೆ. ನಿನ್ನೆಯ ದಿವಸ ಇಂಥದ್ದೇ ಒಂದು ಸಂಸ್ಥೆಯಾದಂಥ ಚಾಮುಂಡಿ ಮೆಷಿನ್ ಟೂಲ್ಸ್‌ಗೆ ಒಂದು ಸರ್ಕಾರಿ ಆಜ್ಞೆಯನ್ನು ಕಳುಹಿಸಿದ್ದು ಅದನ್ನು ಅಲ್ಲಿಯ ನೋಟೀಸ್ ಬೋರ್ಡ್‌ಗೆ ಹಾಕಿದ್ದಾರೆ. ಅದರಲ್ಲಿ ಯಾರು ವಿ.ಆರ್.ಎಸ್. ನ್ನು ತೆಗೆದುಕೊಳ್ಳುವುದಿಲ್ಲ ಅಂಥವರನ್ನು ಪನಿಷ್ ಮಾಡಬೇಕಾಗುತ್ತದೆ ಎಂದು ಇದೆ. ಈ ರೀತಿ ನೋಟೀಸ್ ಕೊಟ್ಟು ಬಲವಂತವಾಗಿ ಅವರಿಂದ ಸ್ವಯಂ ನಿವೃತ್ತಿ ತೆಗೆದುಕೊಳ್ಳುತ್ತಿದ್ದೀರಿ. ಈ ಬಗ್ಗೆ ಸರ್ಕಾರದಿಂದ ಚಿಂತನೆ ಮಾಡಿ ಒಂದು ಸಮಿತಿಯನ್ನು ಮಾಡುತ್ತೇವೆಂದು ಹೇಳಿದಿರಿ. ಆ ಸಮಿತಿಯ ವರದಿ ಇನ್ನೂ ಕೂಡ ಬಂದಿಲ್ಲ. ಹೀಗಿರುವಂಥ ಸಂದರ್ಭದಲ್ಲಿ ಅಲ್ಲಿರುವಂಥ ಕಾರ್ಮಿಕರ ಹಿತವನ್ನು ಕಾಪಾಡುವ ದೃಷ್ಟಿಯಿಂದ ಅವರಿಗೆ ಎಲ್ಲಾದರೂ ರಿಹ್ಯಾಬಿಲಿಟೇಷನ್ ಮಾಡಲಿಕ್ಕೆ ಸಾಧ್ಯವಿದೆಯೇ ಎನ್ನುವುದರ ಬಗ್ಗೆ ಚಿಂತನೆ ಮಾಡಬೇಕು. ಆ ನಂತರದಲ್ಲಿ ಮಾತ್ರ ಈ ಸಂಸ್ಥೆಯನ್ನು ಕ್ಲೋಸ್ ಮಾಡಬೇಕೇ ಅಥವಾ ಖಾಸಗೀಕರಣ ಮಾಡಬೇಕೇ ಎನ್ನುವ ನಿರ್ಣಯ ತೆಗೆದುಕೊಳ್ಳಬೇಕೇ ಹೊರತು ಬಲವಂತವಾಗಿ ಆ ಕೆಲಸವನ್ನು ಮಾಡುವಂಥದ್ದನ್ನು ತಕ್ಷಣವೇ ನಿಲ್ಲಿಸಬೇಕೆನ್ನುವಂಥ ಮಾತನ್ನು ಹೇಳುತ್ತಾ, ಈ ಬಜೆಟ್‌ನ ಮೇಲೆ ನನ್ನ ವಿಚಾರಗಳನ್ನು ಹೇಳಲಿಕ್ಕೆ ಅವಕಾಶ ಮಾಡಿಕೊಟ್ಟಂಥ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: 14 ಕೋಟಿ ರೂಪಾಯಿಗಳನ್ನು ಡ್ರಾ ಮಾಡಿದ್ದಾರೆ ಎನ್ನುವುದರ ಬಗ್ಗೆ ದಾಖಲೆ ಇದ್ದರೆ ದಯಮಾಡಿ ಅದನ್ನು ಸರ್ಕಾರಕ್ಕೆ ಕಳುಹಿಸಿಕೊಡಿ.

ಶ್ರೀ ಎ. ರಾಮದಾಸ್: ಮಾನ್ಯ ಚೇರ್‌ಮನ್‌ರವರೆ, 14 ಕೋಟಿ ರೂಪಾಯಿಗಳನ್ನು ಡ್ರಾ ಮಾಡಿರುವುದಕ್ಕೆ, ಖರ್ಚು ಮಾಡಿರುವುದಕ್ಕೆ ಕೂಡ ದಾಖಲೆಗಳಿವೆ, ಬಿಲ್‌ಗಳು ಇವೆ. ನಾನು ಮತ್ತೊಂದು ಸಲ ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ, ಫೈನಾನ್ಸ್ ಅಕೌಂಟಬಿಲಿಟಿ ಇರಬೇಕೆಂದು ಸರ್ಕಾರ ಹೇಳುತ್ತಿದೆ, ಈ ಪ್ರಕರಣದ ಬಗ್ಗೆ ಯಾವುದೇ ರೀತಿಯಾದಂಥ ಬೇರೆ ಎನ್‌ಕ್ವಯರಿ ಕೇಳುತ್ತಿಲ್ಲ. ಸರ್ಕಾರದ್ದೇ ಆದಂಥ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಇದನ್ನು ರೆಫರ್ ಮಾಡಿದ್ದೇ ಆದರೆ ಇದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: 14 ಕೋಟಿ ರೂಪಾಯಿಗಳನ್ನು ರಿಪೇರಿಗೆಂದು ಮತ್ತು 14 ಲಕ್ಷ ರೂಪಾಯಿಗಳನ್ನು ಟಿ.ಎ. ಮತ್ತು ಡಿ.ಎ. ಗೆ ಡ್ರಾ ಮಾಡಿದ್ದಾರೆ ಎಂದರೆ ಇದು ಬಹಳ ದೊಡ್ಡ ಪ್ರಕರಣ.

ಶ್ರೀ ಎ. ರಾಮದಾಸ್: ಮಾನ್ಯ ಚೇರ್‌ಮೆನ್‌ರವರೇ, ಇದಕ್ಕೆ ಸಂಬಂಧಪಟ್ಟ ಪತ್ರ ನನ್ನ ಹತ್ತಿರ ಇದೆ. ಅದರ ಜೆರಾಕ್ಸ್ ಪ್ರತಿಯನ್ನು ಕೊಡುತ್ತೇನೆ. ಹಾಗೆಯೇ ಬಿಲ್‌ಗಳನ್ನು ಕೂಡ ತಂದಿದ್ದೇನೆ. ಇದರಲ್ಲಿ 4 ವರ್ಷಗಳ ಟಿ.ಎ. ಬಿಲ್ ಕೂಡ ಇದೆ. ಇದರ ಜೆರಾಕ್ಸ್ ಪ್ರತಿಯನ್ನೂ ಸಹ ಕಳುಹಿಸಿಕೊಡುತ್ತೇನೆ.

+ ಶ್ರೀ ಬಿ. ಸೋಮಶೇಖರ್ (ಮಳವಳ್ಳಿ): ಮಾನ್ಯ ಚೇರ್‌ಮೆನ್‌ರವರ, ಈ ಸರ್ಕಾರ ಆಡಳಿತಕ್ಕೆ ಬಂದಮೇಲೆ ಎರಡು ಆಯವ್ಯಯವನ್ನು ಮಂಡನೆ ಮಾಡಿದೆ. ಈ ಆಯವ್ಯಯದಲ್ಲಿ ಕೆಲವು ಒಳ್ಳೆಯ ಚಿಂತನೆಗಳು ನಡೆದಿರತಕ್ಕಂಥದ್ದನ್ನು ನಾನೂ ಸಹಿತ ಒಪ್ಪುತ್ತೇನೆ. ಇಲ್ಲ ಎಂದು ಹೇಳುವುದಿಲ್ಲ. ಒಳ್ಳೊಳ್ಳೆಯ ಚಿಂತನೆಗಳು ಯಾವ ಯಾವ ಕ್ಷೇತ್ರದಲ್ಲಿ ಎಲ್ಲೆಲ್ಲಿ ಇವೆ ಎನ್ನುವುದನ್ನು ಹೇಳುತ್ತೇನೆ. ಬಹಳ ಮುಖ್ಯವಾದಂಥ ಒಂದು ವಿಚಾರವನ್ನು ಕಳೆದ ಸಾಲಿನ ವರ್ಷದಲ್ಲಿ ಸರ್ಕಾರದವರು ಹೇಳಿದ್ದರು. ಅಂತಿಮವಾಗಿ ನಾವು ನಮ್ಮ ಬಡ ಜನತೆಯ ಅಗತ್ಯತೆಯನ್ನು ಪೂರೈಸುವ ಆರ್ಥಿಕ ವ್ಯವಸ್ಥೆಯನ್ನು ರೂಢಿಸಬೇಕು, ಹಾಗೆಯೇ, ಸಾಮಾಜಿಕ, ಆರ್ಥಿಕ ಕಾಳಜಿಯನ್ನು ಬೆಂಬಲಿಸುವ ಆದರ್ಶಪ್ರಾಯ ಸಾರ್ವಜನಿಕ ವೆಚ್ಚದ ಶೈಲಿಯನ್ನು ರೂಪಿಸಬೇಕು, ಇದೇ ಸಮಯದಲ್ಲಿ ರಾಜ್ಯವನ್ನು ಸಾಲದ ಸುಳಿಯಿಂದ ದೂರವಿಡುವ ಆರ್ಥಿಕ ನೀತಿಯನ್ನು ಹಮ್ಮಿಕೊಳ್ಳಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳು ಕಳೆದ ಆಯವ್ಯಯದಲ್ಲಿ ಹೇಳಿರುವ ಮಾತುಗಳು. ಇವು ಸೆಲ್ಫ್‌ಸಸ್ಟೇನ್ಡ್ ಬಜೆಟ್‌ನ್ನು ಈ ಅಧಿವೇಶನದಲ್ಲಿ ಮಂಡಿಸಬಹುದೇನೋ ಎಂದು ನಾನು ವಿಚಾರ ಹೇಳಿದ್ದೆ. ಏಕೆಂದರೆ, ಕಳೆದ ಬಾರಿ, ಮುಂದಿನ ಬಾರಿ ನಾವು ಸಾಲವನ್ನೇ ಕಡಿಮೆ ಮಾಡುತ್ತೇವೆ ಎಂದಿದ್ದು, ನಮ್ಮ ನಮ್ಮ ರಾಜ್ಯದ ಆರ್ಥಿಕ ಆದಾಯದಿಂದ ಸರ್ಕಾರವನ್ನು ನಡೆಸುತ್ತಾರೆಂಬ ಭಾವನೆ ನನ್ನಲ್ಲಿತ್ತು. ಈ ವರ್ಷದಲ್ಲಿ ಅದಕ್ಕೆ ತದ್ವಿರುದ್ಧವಾಗಿ ಎಷ್ಟು ಸಾಲ ಮಾಡಿದ್ದಾರೆಂದರೆ, ಕಳೆದ ವರ್ಷ 1,071 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಸಂಸ್ಥೆಗಳಿಂದ ಸಾಲ ಮಾಡಿದ್ದರು. ಹಿಂದಿನ ಹೇಳಿಕೆಯನ್ನು ನೋಡಿಕೊಂಡು ಈ ವರ್ಷ ಸುಮಾರು 400-500 ಕೋಟಿ ರೂಪಾಯಿಗಳನ್ನು ಸಾಲ ಮಾಡಬಹುದೇನೋ ಎಂದು ನಾನು ಭಾವಿಸಿದ್ದೆ. ಆದರೆ, ಈ ವರ್ಷ 2,106 ಕೋಟಿ ರೂಪಾಯಿಗಳು ಅಂದರೆ, 1,000 ಕೋಟಿ ರೂಪಾಯಿಗಳ ಹೆಚ್ಚು ಸಾಲವನ್ನು ಪಡೆದಿದ್ದೀರಿ. ನಿಮ್ಮ ಆರ್ಥಿಕ ಪರಿಸ್ಥಿತಿಯನ್ನು ಎಲ್ಲಿ ಉತ್ತಮಪಡಿಸಿದ್ದೀರಿ? ನಮ್ಮ ಒಂದು ವರದಿಯ ಪ್ರಕಾರ, ಕಮರ್ಷಿಯಲ್ ಟ್ಯಾಕ್ಸ್, ಎಕ್ಸೈಸ್, ರಿಜಿಸ್ಟ್ರೇಷನ್ ಇವು ಬಹಳ ಪ್ರಮುಖವಾದ ಕ್ಷೇತ್ರಗಳು. ಸೇಲ್ಸ್ ಟ್ಯಾಕ್ಸ್‌ನಲ್ಲಿ ಒಂದು ವರ್ಷಕ್ಕೆ ಸುಮಾರು 6,500 ಕೋಟಿ ರೂಪಾಯಿಗಳು ಲಾಸಾಗುತ್ತಿದೆ ಎಂಬ ಒಂದು ವರದಿ ಇದೆ. ಒಂದು ವರ್ಷದಲ್ಲಿ 2,200 ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸುತ್ತಿದ್ದೇವೆ ಈ ಆದಾಯದಿಂದಲೇ ಎಂಬುದು ವರದಿಯಾಗಿದೆ. ಇದು ನಮ್ಮ ವರದಿಯಲ್ಲ, ಟ್ಯಾಕ್ಸ್ ರಿಫಾರ್ಮ್ಸ್ ಕಮೀಷನ್ ಅಧ್ಯಕ್ಷರಾಗಿರುವ ಶ್ರೀ ವೀರಪ್ಪಮೊಯಿಲಿಯವರು ಕೊಟ್ಟಿರುವ ಮಾಹಿತಿ ಪ್ರಕಾರ ಸುಮಾರು 6,500 ಕೋಟಿ ರೂಪಾಯಿಗಳಾಗಿವೆ. ಎಕ್ಸೈಸ್‌ನಿಂದ 1,500 ಕೋಟಿ ರೂಪಾಯಿಗಳು ಲಾಸಾದರೆ ನಿಮ್ಮ ಸ್ವಂತ ಶಕ್ತಿಯಿಂದ ಸರ್ಕಾರವನ್ನು ಹೇಗೆ ನಡೆಸುತ್ತೀರಿ? ಕಳೆದ ವರ್ಷ ನೀವೇನು ಹೇಳಿದ್ದೀರಿ, ಅದಕ್ಕೂ, ಇದಕ್ಕೂ ಎಷ್ಟೊಂದು ಹಾಸ್ಯಾಸ್ಪದವಾಗಿದೆ ಎಂಬುದನ್ನು ನಾನು ಈ ಸದನಕ್ಕೆ ತಿಳಿಸುತ್ತಿದ್ದೇನೆ. 10 ವಲಯಗಳನ್ನು

ನಾವು ಗುರುತಿಸಿದ್ದೇವೆ, ಅದಕ್ಕೆ ಆದ್ಯತೆ ಕೊಟ್ಟು ನಾವು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆಂದು ಹೇಳಿದ್ದಿರಿ. ಸಾಮಾಜಿಕ ವಲಯಗಳೆಂದರೆ ಶಿಕ್ಷಣ, ಶಿಕ್ಷಣಕ್ಕೆ ಕಳೆದ ವರ್ಷ ಎಷ್ಟು ಹಣವನ್ನು ಇಟ್ಟಿದ್ದಿರಿ, 17 ಪೈಸೆ ಇಟ್ಟಿದ್ದು, ಈ ವರ್ಷ 14 ಪರ್ಸೆಂಟ್‌ಗೆ ಇಳಿಸಿದ್ದೀರಿ. ಕೃಷಿಗೆ ಕಳೆದ ವರ್ಷ 6 ಪೈಸೆ ಇಟ್ಟಿದ್ದು, ಈ ವರ್ಷ 5 ಪೈಸೆಗೆ ಇಳಿಸಿದ್ದೀರಿ. ಆರ್ಥಿಕ ಸೇವೆಗಳಿಗೆ 12 ಪೈಸೆ ಇದ್ದದ್ದನ್ನು, ಈ ವರ್ಷ 19 ಪೈಸೆಗೆ ಏರಿಸಿದ್ದೀರಿ. ಸರ್ಕಾರ ಸೋಷಿಯಲ್ ಸೆಕ್ಟಾರ್‌ಗೆ ಎಷ್ಟು ಆದ್ಯತೆ ಕೊಡುತ್ತಿದೆ, ಆರ್ಥಿಕ ಸೇವೆಗಳಿಗೆ ಎಷ್ಟು ಆದ್ಯತೆ ಕೊಡುತ್ತಿದೆ ಎಂಬುದು ಇದರಿಂದಲೇ ಗೊತ್ತಾಗುತ್ತದೆ. ನೀರಾವರಿ ರೈತನಿಗೆ ಬಹಳ ಪ್ರಮುಖವಾದ ಕ್ಷೇತ್ರ. ಅದಕ್ಕೆ ಕಳೆದ ವರ್ಷ ಶೇ. 10 ರಷ್ಟು ಇಟ್ಟಿದ್ದರೆ, ಈ ವರ್ಷ ಶೇ. 7 ರಷ್ಟಕ್ಕೆ ಇಳಿಸಿದ್ದೀರಿ. The Hon'ble Chief Minister is expert in sarcasm. ಈ ಬಜೆಟ್ ಅನ್ನು ಓದಿದಾಗ, ನಮ್ಮ ಹಿಂದಿನ ಸರ್ಕಾರವನ್ನು ಟೀಕೆ ಮಾಡಿಲ್ಲ. ಅವರು ತಮ್ಮ ಬಜೆಟ್‌ನ ಒಂದು ಪ್ಯಾರಾದಲ್ಲಿ ಈ ರೀತಿ ಹೇಳುತ್ತಾರೆ:

> "ಈ ವಲಯದಲ್ಲಿ ನನ್ನ ಸರ್ಕಾರವು ಪ್ರಥಮವಾಗಿ ಕೈಗೆತ್ತಿಕೊಂಡ ಕಾರ್ಯಕ್ರಮವೆಂದರೆ ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದ ಸ್ಥಾಪನೆ. ಹಿಂದಿನ ಸರ್ಕಾರವು ಐದು ವರ್ಷಗಳಲ್ಲಿ ಸಮಾಜದ ದುರ್ಬಲ ವರ್ಗದವರಿಗಾಗಿ ವಿವಿಧ ಯೋಜನೆಗಳಡಿ ವಾರ್ಷಿಕ ಸರಾಸರಿಯಾಗಿ 62,700 ಮನೆಗಳನ್ನು ನಿರ್ಮಿಸಿತ್ತು 2000-2001 ರಲ್ಲಿ ನಾವು ಸುಮಾರು 1,50,000 ಮನೆಗಳನ್ನು ನಿರ್ಮಿಸಲಿದ್ದೇವೆ."

ಅಂದರೆ, ನೀವು ನಮ್ಮ ಸರ್ಕಾರವನ್ನು ಟೀಕೆ ಮಾಡಿದಿರಿ. ಬೇರೆ ಸರ್ಕಾರ ಮಾಡಿದ ಕೆಲಸವನ್ನು ಮೆಚ್ಚುತ್ತಾರೆಂದು ನಾನು ಭಾವಿಸಿದ್ದೆ. ಏಕೆಂದರೆ, ಇವರು ಬಹಳ ಮುತ್ಸದ್ದಿತನದ ಮುಖ್ಯಮಂತ್ರಿಗಳು. ಒಂದು ಕಡೆ ಟೀಕೆ ಮಾಡಿದ್ದನ್ನು ನಾವು ಸ್ವಾಗತಿಸುತ್ತೇವೆ, ಮತ್ತೊಂದು ಕಡೆ ನಮ್ಮ ಸರ್ಕಾರದ ಕಾರ್ಯಕ್ರಮವನ್ನು ನಿಮ್ಮ ಸರ್ಕಾರದ ಕಾರ್ಯಕ್ರಮ ಒಂದು ಒಪ್ಪಿಕೊಂಡರೆ ಅದ್ಯಾವ ನ್ಯಾಯ? ಈ ವರ್ಷದ ಆಯವ್ಯಯದಲ್ಲಿ, ಒಂದು ಪ್ಯಾರಾದಲ್ಲಿ ಈ ರೀತಿ ಹೇಳಿದ್ದಾರೆ:

> "ಕಳೆದ ವರ್ಷ ಈ ಸದನಕ್ಕೆ ನಾನು ಭರವಸೆ ನೀಡಿದ್ದಂತೆ ಕಂಪ್ಯೂಟರೀಕೃತ ಆರ್.ಟಿ.ಸಿ.ಗಳನ್ನು ಈಗ ರಾಜ್ಯದಲ್ಲಿನ 40 ತಾಲ್ಲೂಕುಗಳಲ್ಲಿರುವ ಕಿಯೋಸ್ಕ್‌ಗಳಲ್ಲಿ ಒದಗಿಸಲಾಗುತ್ತಿದೆ. ಇನ್ನು ಕೆಲವೇ ತಿಂಗಳಲ್ಲಿ ಉಳಿದ 125 ತಾಲ್ಲೂಕುಗಳಲ್ಲೂ ಸಹ ಈ ಸೌಲಭ್ಯವನ್ನು ಒದಗಿಸಲಾಗುವುದು."

ಕಳೆದ ವರ್ಷದ ಬಜೆಟ್‌ನ ಒಂದು ಪ್ಯಾರಾದಲ್ಲಿ ಈ ರೀತಿ ಹೇಳುತ್ತಾರೆ:

> "ಆಧುನಿಕ ತಂತ್ರಜ್ಞಾನ, ಸಾಮಾನ್ಯ ಜನತೆಯ ಬದುಕನ್ನು ಉತ್ತಮಗೊಳಿಸಬೇಕು ಎಂದು ನಾನು ಪದೇ ಪದೇ ಹೇಳುತ್ತಾ ಬಂದಿದ್ದೇನೆ. ಸಾಮಾಜಿಕ ಬದುಕಿಗೆ ಅನ್ವಯವಾಗುವಂಥ ತಂತ್ರಜ್ಞಾನ ಕ್ರೋಢೀಕರಿಸಲು ನಿರ್ದಿಷ್ಟ ಯೋಜನೆಗಳನ್ನು ಸರ್ಕಾರವು ರೂಪಿಸಲಿದೆ. ರಾಜ್ಯದ ಪ್ರತಿಯೊಬ್ಬ ರೈತನಿಗೂ 2001ನೇ ಮಾರ್ಚ್ 31 ರೊಳಗೆ ಕಂಪ್ಯೂಟರ್ ನಮೂನೆಯ ಆರ್‌ಟಿಸಿ ಲಭ್ಯವಾಗುತ್ತದೆಂದು ದೃಢ ವಿಶ್ವಾಸದಿಂದ ಈ ಸದನದಲ್ಲಿ ಭರವಸೆ ನೀಡುತ್ತೇನೆ."

ಬಹಳ ದೃಢ ವಿಶ್ವಾಸದಿಂದ ಕಂಪ್ಯೂಟರ್ ಆರ್‌ಟಿಸಿಗಳನ್ನು ಎಲ್ಲಾ 65 ಲಕ್ಷ ಖಾತೆದಾರರುಗಳಿಗೆ ಕೊಡಲಾಗುವುದೆಂಬ ಭರವಸೆಯನ್ನು ಕಳೆದ ವರ್ಷ ಕೊಟ್ಟಿದ್ದರು. ಆ ಭರವಸೆ ಯಾವ ಆಧಾರದ ಮೇಲಿತ್ತೆಂದರೆ, ನಾನು ಕಂದಾಯ ಖಾತೆ ಬಿಡುವ ಮುಂಚೆ, ಶೇ. 75 ರಷ್ಟು ಭಾಗ ಈ ಕಾರ್ಯಕ್ರಮ ಸಂಪೂರ್ಣವಾಗಿತ್ತು. ಶೇ. 95 ಭಾಗ ಆಗಿದ್ದು, ಇನ್ನು ಶೇ. 5 ಭಾಗ ಉಳಿದಿದ್ದು, ಅದರಲ್ಲಿ 2 ಕೋಟಿ 22 ಲಕ್ಷ ರೂಪಾಯಿಗಳನ್ನು ಇದಕ್ಕೋಸ್ಕರ ಖರ್ಚು ಮಾಡಲಾಗಿತ್ತು. ಶೇ. 5 ರಷ್ಟು ಕೆಲಸ ಉಳಿದಿದೆ, ಅದನ್ನು ಇನ್ನೊಂದು ವರ್ಷದೊಳಗೆ ಮುಗಿಸಬಹುದೆಂದು ನಾನು ತಿಳಿದುಕೊಂಡಿದ್ದೆ.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು): ನಮ್ಮ ಜಿಲ್ಲೆಯಲ್ಲಿ ಈ ವರ್ಷ 24,000 ಖಾತೆಗಳನ್ನು ಏರಿಸಿದ್ದೇವೆ. ಪಹಣಿಗಳನ್ನು ಪ್ರತಿಯೊಂದು ಮನೆಗೂ ಕೊಟ್ಟಿದ್ದೇವೆ. ಅದರ ಕಂಪ್ಯೂಟರೀಕರಣವನ್ನು ಈಗ ಪ್ರಾರಂಭಿಸಿದ್ದೇವೆ.

ಶ್ರೀ ಬಿ. ಸೋಮಶೇಖರ್: ಕಳೆದ ವರ್ಷ ನಿವೇನು ಹೇಳಿದ್ದಿರಿ, ಬಡ್ಜೆಟ್‌ನ ಒಂದು ಪ್ಯಾರಾದಲ್ಲಿ,

> "ಈ ವರ್ಷದ ಮಾರ್ಚ್ 31 ರೊಳಗಾಗಿ ಎಲ್ಲಾ 65 ಲಕ್ಷ ಖಾತೆದಾರರುಗಳಿಗೆ ನಾವು ಕಂಪ್ಯೂಟರೈಜ್ಡ್ ಆರ್‌ಟಿಸಿಗಳನ್ನು ಕೊಡುತ್ತೇವೆ."

ಎಂದು ಹೇಳಿದ್ದೀರಿ. ಆದರೆ, ಈ ಬಾರಿ, ಇನ್ನು ಮುಂದಿನ ವರ್ಷದಲ್ಲಿ ಇನ್ನು ಉಳಿದಿರುವುದನ್ನು ಮಾಡುತ್ತೇವೆಂದು ಹೇಳುತ್ತಿದ್ದೀರಿ. ಆದರೆ, ಎಷ್ಟರಮಟ್ಟಿಗೆ ಕಂಪ್ಯೂಟರ್ ಆರ್‌ಟಿಸಿಗಳಿಂದ ರೈತರಿಗೆ ಅನುಕೂಲ ಮಾಡಲು ಆದ್ಯತೆ ಕೊಟ್ಟಿದ್ದೀರಿ ಎನ್ನುವುದು ಈ ಬಡ್ಜೆಟ್‌ನಿಂದ ಗೊತ್ತಾಗುತ್ತದೆ. ಮತ್ತೊಂದು ಕಡೆ, ರಾಜ್ಯ ಸ್ಮಶಾನಗಳಿಗೆ 3 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದಿದ್ದೀರಿ. ಇಗೇನೂ ಹೊಸ ಯೋಜನೆಯಲ್ಲ. ಅದು ಪ್ರತಿವರ್ಷ ನಡೆದುಕೊಂಡು ಬರುತ್ತಿದೆ. ಈ ವರ್ಷದ ಬಡ್ಜೆಟ್‌ನಲ್ಲಿ, ನೀವು ಕುಟುಂಬದ ಸದಸ್ಯರ ನಡುವೆ ಎಂದರೆ, ಗಂಡ, ಹೆಂಡತಿ, ಮಗ, ಮಗಳು ನಡುವೆ ರಿಜಿಸ್ಟ್ರೇಷನ್ ಆಗಬೇಕಾದರೆ ಪಾರ್ಟಿಷನ್ ಡೀಡ್ಸ್, ರಿಲೀಸ್ಡ್ ಡೀಡ್ಸ್ ಮತ್ತು ಗಿಫ್ಟ್ ಡೀಡ್ಸ್‌ಗೆ ನಾವು ಸ್ಟಾಂಪ್ ಡ್ಯೂಟಿಯನ್ನು ತೆಗೆದುಹಾಕಿದ್ದೇವೆ ಎಂದು ತಿಳಿಸಿದ್ದೀರಿ. ಕುಟುಂಬದೊಳಗೆ ಕದನಗಳಾಗುತ್ತಿವೆ, ಪಾಲುಪಾರೀಕತ್ತು ಎಂದು ಬರೆದುಕೊಂಡು ವರ್ಷಾನುಗಟ್ಟಲೆ ಇವರು ಕೋರ್ಟು, ಕಛೇರಿಗಳಲ್ಲಿ ಅಲೆದು, ಕೊಲೆಗಳಾಗುತ್ತಿವೆ, ಇವು ಬಗೆಹರಿಯದ ಸಮಸ್ಯೆಗಳು. ಏಕೆಂದರೆ, ಕನ್‌ಸಿಡರೇಷನ್ ಇಲ್ಲ. ತಂದೆ ಮಗನಿಗೆ ಆಸ್ತಿ ಕೊಡಬೇಕಾದರೆ, ಅವನು ಕೊಂಡುಕೊಳ್ಳುತ್ತಿಲ್ಲ, ಅಥವಾ ಮಗಳು ತನ್ನ ತಂದೆಯಿಂದ ಅಥವಾ ತಾಯಿಯಿಂದ ಏನಾದರೂ ಗಿಫ್ಟ್ ತೆಗೆದುಕೊಂಡರೆ, ಕೊಂಡುಕೊಂಡ ಹಾಗಾಗುವುದಿಲ್ಲವೆಂದು ನಾವು ಎಷ್ಟೇ ವ್ಯಾಲ್ಯೂ ಆಗಲಿ ಅದಕ್ಕೆ ಕೇವಲ 1,000 ರೂಪಾಯಿ ಕೊಟ್ಟರೆ ಸಾಕು.

6.50 ಪಿ.ಎಂ.

ಹಳ್ಳಿಗಳಲ್ಲಿ ತನ್ನ ಜಮೀನಿನಲ್ಲಿ ತನ್ನ ಮಕ್ಕಳಿಗೆ ಭಾಗ ಕೊಟ್ಟರೆ ಅವರಿಗೆ 250 ರೂಪಾಯಿಗಳನ್ನು ಕೊಟ್ಟರೆ ಸಾಕು. ಮುನ್ಸಿಪಲ್ ಏರಿಯಾದಲ್ಲಿ 500 ರೂಪಾಯಿಗಳನ್ನು

ಕೊಟ್ಟರೆ ಸಾಕು. ಇಡೀ ಇಂಡಿಯಾ ದೇಶದಲ್ಲಿಯೇ ನಮ್ಮ ಸರ್ಕಾರದ ಕಾರ್ಯಕ್ರಮವನ್ನು ಮೆಚ್ಚಿ ಬೇರೆ ರಾಜ್ಯಗಳವರೂ ಕೂಡ ಇದನ್ನು ಮಾದರಿಯಾಗಿ ಮಾಡಬೇಕು, ಇದೊಂದು ಐತಿಹಾಸಿಕವಾದ ತೀರ್ಮಾನವೆಂದು ಹೇಳಿದ್ದಾರೆ. ಅದನ್ನು ನಮ್ಮ ಸರ್ಕಾರ ತಂದಿರುವುದು. ಪ್ರತಿಯೊಂದು ಕುಟುಂಬಕ್ಕೂ ಅನುಕೂಲವಾಗುವ ಒಂದು ಕೆಲಸ ಇದು. ಇದನ್ನು ಹೋದ ವರ್ಷ ನೀವು ಯಾವ ಕಾರಣಕ್ಕೆ ತೆಗೆದು ಹಾಕಿದಿರಿ. ಇದು ಕೆಟ್ಟ ಪರಿಣಾಮವೇ, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ ಎಂದು ನೀವು ತೆಗೆದು ಹಾಕಿದಿರಾ? ಮತ್ತೆ ಈ ವರ್ಷ ನೀವು ಅದನ್ನು ಸೇರಿಸಿರುತ್ತೀರಿ. ಇಂತಹ ಪತ್ರಗಳನ್ನು ನೋಂದಣಿ ಮಾಡಿಕೊಳ್ಳದೆ ತಪ್ಪಿಸುತ್ತಿರುವುದರಿಂದ ಇಂತಹ ಪತ್ರಗಳಿಗೆ ನಿಗದಿತವಾದ ಶುಲ್ಕ ಒಂದು ಸಾವಿರ ರೂಪಾಯಿಗಳಿಗೆ ಮಾಡಲು ಉದ್ದೇಶಿಸಲಾಗಿದೆ.- As if it is a new scheme introduced in the Budget! Why did you not have the courtesy to say that it is an old scheme formulated by the former Government? 62 ಸಾವಿರ ಮನೆಗಳಿಗೆ ಹಿಂದಿನ ಸರ್ಕಾರ ಮಾಡಿದ್ದು, ಒಂದು ಲಕ್ಷ 60 ಸಾವಿರ ಮನೆಗಳನ್ನು ಕಟ್ಟಿಸುತ್ತೇವೆಂದು ನಮಗೆ ಟೀಕೆ ಮಾಡಿದ ನೀವು, ನಿಮಗೆ ಈ ಔದಾರ್ಯವನ್ನು ತೋರಿಸುವುದಕ್ಕೆ ಏಕೆ ಆಗಲಿಲ್ಲ?

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಸೋಮಶೇಖರವರು ಮಾಡಿದಂಥ ಕೆಲಸವನ್ನು ಮುಂದುವರೆಸಬೇಕೆಂದು ಮಾಡಿರುವ ಕಂದಾಯ ಸಚಿವರ ಪ್ರತಿಪಾದನೆ ನಿಮಗೆ ಗೊತ್ತಿಲ್ಲ.

ಶ್ರೀ ಬಿ. ಸೋಮಶೇಖರ್: ನೀವು ನಮ್ಮ ಹೆಸರನ್ನು ಹೇಳುವುದು ಬೇಡ. ಇದೂ ಕೂಡ ನಿಮ್ಮ ಕಾರ್ಯಕ್ರಮವಲ್ಲ. ಇದರಲ್ಲಿ ನೀವು ಏನನ್ನು ಸೇರಿಸಿದ್ದೀರೆಂದರೆ, ಮೊಮ್ಮಕ್ಕಳು ಮತ್ತು ಸೊಸೆ ಇಬ್ಬರನ್ನು ನೀವು ಇದರಲ್ಲಿ ಇನ್‌ಕ್ಲೂಡ್ ಮಾಡಿರುತ್ತೀರಿ. ಇಷ್ಟು ಉತ್ತಮವಾದ ಕಾರ್ಯಕ್ರಮವೆಂದು ನೀವು ಇವತ್ತು ವಿಚಾರ ಮಾಡಿದವರು ಹೋದ ವರ್ಷ ಏತಕ್ಕೆ ತೆಗೆದಿದ್ದೀರಿ. ಇದನ್ನು ಹೊಸದಾಗಿ ಮಾಡಿದ್ದೇವೆಂದು ತೋರಿಸಿಕೊಳ್ಳುವುದಕ್ಕಾಗಿ ಇದನ್ನು ನೀವು ಹೋದ ವರ್ಷ ತೆಗೆದಿದ್ದೀರಿ.

ಶ್ರೀ ಎಸ್.ಎಸ್. ಪಾಟೀಲ್: ಈ ರಾಜ್ಯದಲ್ಲಿ ಮೊದಲು ಮಾಹಿತಿ ತಂತ್ರಜ್ಞಾನವನ್ನು ತಂದವರು ಯಾರು? ಅದನ್ನು ಮಾಡಿದ್ದು ನಮ್ಮ ಸರ್ಕಾರ. ಎಲ್ಲವನ್ನೂ ನಾವೇ ಮಾಡಿದ್ದೇವೆಂದು ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿಕೊಂಡು ಹೋಗುತ್ತಿದ್ದಾರೆ. ಆ ಕೀರ್ತಿ ಮಾನ್ಯ ಜೆ.ಹೆಚ್. ಪಟೇಲರವರಿಗೆ ಹೋಗಬೇಕು.

ಶ್ರೀ ಬಿ. ಸೋಮಶೇಖರ್: 4 ಮುದ್ರಾಂಕ ಶುಲ್ಕಗಳು ಇದ್ದವು, ಅದಕ್ಕೆ ನಾವು ನಾಲ್ಕು ಲಕ್ಷ ರೂ. ಗರಿಷ್ಠ ಹಣವನ್ನು ಇಟ್ಟಿದ್ದೇವೆ. ಅದನ್ನು ನೀವು ತೆಗೆದು ಹಾಕಿ 5 ಲಕ್ಷ ರೂಪಾಯಿಗಳೆಂದು ಮಾಡಿರುತ್ತೀರಿ. ಇವರು ಮತ್ತೆ ರಿಜಿಸ್ಟ್ರೇಷನ್ ತಪ್ಪಿಸುತ್ತಾರೆ. 5 ಲಕ್ಷ ರೂಪಾಯಿಗಳನ್ನು ಕೊಟ್ಟು ಯಾರೂ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳುವುದಿಲ್ಲ. ಇದರಿಂದ ಸರ್ಕಾರಕ್ಕೆ ಮತ್ತೆ ಖೋತಾ ಆಗುತ್ತದೆ. ಕೋ-ಆಪರೇಟೀವ್ ಸೊಸೈಟಿಗಳಿಗೆ ಸೈಟ್‌ಗಳನ್ನು ಹಂಚುತ್ತೇವೆ, ಅವರು ಡಾಕ್ಯುಮೆಂಟ್‌ನಲ್ಲಿ ಬರೆದ ವಾಲ್ಯು ಪ್ರಕಾರ ರಿಜಿಸ್ಟ್ರೇಷನ್ ಚಾರ್ಜ್ ಹಾಕುತ್ತಿದ್ದರು. ಈಗ ನೀವು ಮಾರ್ಕೆಟ್ ವಾಲ್ಯು ಮಾಡಿದಿರಿ. ಸಣ್ಣಪುಟ್ಟ ಸರ್ಕಾರಿ ನೌಕರರು, ಸೊಸೈಟಿಗಳ

ಮೆಂಬರರಾಗಿರುತ್ತಾರೆ. ಅವರು ಇವತ್ತು ಒಂದು ಸೈಟ್ ತೆಗೆದುಕೊಳ್ಳಬೇಕಾದರೆ, ಒಂದು ಲಕ್ಷ ಸೈಟ್ ವಾಲ್ಯು ಇದ್ದರೆ, 10 ಲಕ್ಷ ರೂಪಾಯಿಗಳು ಮಾರ್ಕೆಟ್ ವಾಲ್ಯು ಇದ್ದರೆ, ಅವರು 10 ಲಕ್ಷ ರೂಪಾಯಿಗಳ ಮಾರ್ಕೆಟ್ ವಾಲ್ಯು ಕಟ್ಟಬೇಕು. ಇದರಿಂದ ಏನಾಗುತ್ತದೆ, ದಯಮಾಡಿ ಇದನ್ನು ತೆಗೆಯಬೇಕು. ಹಿಂದಿನ ಸರ್ಕಾರ ಮಾಡಿದ್ದು ಇದೆ ಅದನ್ನು ನಾವು ತೆಗೆದು ಹಾಕುತ್ತೇವೆಂದು ಹೇಳುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಜಾಯಿಂಟ್ ಡಾಕ್ಯುಮೆಂಟ್ ಅಗ್ರಿಮೆಂಟ್ ಎಂದು ನಾವು ಮಾಡುತ್ತಿದ್ದೆವು. ಬಾಂಡ್ ಪೇಪರ್ ಮೇಲೆ ಇವತ್ತು ಬರೆದುಕೊಳ್ಳುತ್ತಾರೆ, ಅದನ್ನು ರಿಜಿಸ್ಟ್ರೇಷನ್ ಮಾಡಿಕೊಳ್ಳುವುದಿಲ್ಲ. ಹಿಂದೆ ನಮ್ಮ ಸರ್ಕಾರ ಇದ್ದಾಗ ಮಾಡಿದ್ದನ್ನೇ ಮಾಡಬೇಕು. ಈ ಕಾರ್ಯಕ್ರಮ ಕೂಡ ಹೊಸ ಕಾರ್ಯಕ್ರಮವಲ್ಲ. ಇದು ನಮ್ಮ ಸರ್ಕಾರದ ಕಾರ್ಯಕ್ರಮ. ನಮ್ಮ ಕರ್ನಾಟಕ ರಾಜ್ಯದಲ್ಲಿ ಇವತ್ತು 3 ಲಕ್ಷ 36 ಸಾವಿರ ಪೋಡಿ ಪ್ರಕರಣಗಳು ಬಾಕಿ ಇವೆ. ಒಂದೊಂದು ವರ್ಷಕ್ಕೆ ಸುಮಾರು ಒಂದೂವರೆ ಲಕ್ಷ ಪೋಡಿ ಪ್ರಕರಣಗಳು ಸೇರುತ್ತಿರುತ್ತವೆ. ಮ್ಯುಟೇಷನ್ ಪೋಡಿ ಪ್ರಕರಣಗಳು ಇವತ್ತು 2 ಲಕ್ಷ 26 ಸಾವಿರ ಇವೆ. ಒಂದು ತಿಂಗಳಿಗೆ 10 ಸಾವಿರ ಪೋಡಿ ಪ್ರಕರಣಗಳು ಸೇರುತ್ತಿರುತ್ತವೆ. ರಿಜಿಸ್ಟ್ರೇಷನ್ ಒಂದು ಸಲಾ ಆಗಿರುತ್ತದೆ, ಅಳತೆಗೆ ಹೋದಾಗ ಅದು ಬೇರೆ ರೀತಿಯೇ ಇರುತ್ತದೆ. ಆ ದೃಷ್ಟಿಯಿಂದ ನಾವು ಕಾನೂನಿಗೆ ತಿದ್ದುಪಡಿಯನ್ನು ತಂದಿರುತ್ತೇವೆ, ರಿಜಿಸ್ಟ್ರೇಷನ್ ಮುಂಚೆಯೇ ಸರ್ವೆ ಆಗಿರಬೇಕು. ಸರ್ವೆ ಆದನಂತರ ಎಷ್ಟು ಅಳತೆ ಇರುತ್ತದೆ ಅಷ್ಟಕ್ಕೆ ರಿಜಿಸ್ಟ್ರೇಷನ್ ಆಗುತ್ತದೆ. ಮುಂದೆ ಪೋಡಿ ಪ್ರಕರಣಗಳು ಬರುವುದಿಲ್ಲವೆಂದು ನಾವು ತಿದ್ದುಪಡಿಯನ್ನು ತಂದೆವು. ಆದ್ದರಿಂದ ಇವತ್ತು ಕರ್ನಾಟಕದಲ್ಲಿ ಯಾವುದೇ ಪೋಡಿ ಪ್ರಕರಣಗಳು ಬರುವುದಿಲ್ಲ. ಪ್ರೈವೇಟ್ ಸರ್ವೆ ಮಾಡಿಸಬೇಕೆಂದು ನಾವು ಐತಿಹಾಸಿಕ ತೀರ್ಮಾನವನ್ನು ತೆಗೆದುಕೊಂಡಿದ್ದೆವು, ಅದನ್ನು ನೀವು ಹೇಳಿಕೊಂಡಿರುತ್ತೀರಿ. ಒಂದೂ ಕೂಡ ನಿಮ್ಮ ಹೊಸ ಕಾರ್ಯಕ್ರಮವಿಲ್ಲ. ನಾವು ಮಾಡಿರುವುದನ್ನು ನೀವು ಹೇಳಿಕೊಂಡಿರುತ್ತೀರಿ. ಆಡಳಿತ ಸುಧಾರಣೆ ವಿಷಯಕ್ಕೆ ಬಂದಾಗ, ವಿಭಾಗ ಮಟ್ಟದ ಕಮೀಷನರ್‌ಗಳನ್ನು ತೆಗೆದು ಹಾಕುವ ತೀರ್ಮಾನವನ್ನು ಕೂಡ ನಾವೇ ಮಾಡಿದ್ದೆವು. ಒಂದೊಂದನ್ನು ತಾವು ಅನುಸರಿಸಿದ್ದೀರಿ ಅದನ್ನು ಒಪ್ಪಿಕೊಳ್ಳುತ್ತೇನೆ. ಒಂದು ಯೋಜನೆಯನ್ನು ನಾವು ತಯಾರು ಮಾಡಿ ಸಚಿವ ಸಂಪುಟದ ಮುಂದೆ ಇಟ್ಟಿದ್ದೆವು, ಉದಾಹರಣೆಗೆ, ನಮ್ಮ ಉದ್ದೇಶ ಹಾಗೂ ನಿಮ್ಮ ಉದ್ದೇಶ ಕೂಡ ಒಂದೇ ಅದೇನೆಂದರೆ, ಹಂತಗಳು ಜಾಸ್ತಿ ಇರಬಾರದು. 5-6 ಹಂತಗಳು ಇದ್ದರೆ ನಾವು ಅದನ್ನು ಕಡಿಮೆ ಹಂತ ಮಾಡಬೇಕು. ಕರೆಸ್ಪಾಂಡನ್ಸ್ ಕಡಿಮೆ ಮಾಡಬೇಕು. ಒಂದು ಫೈಲ್ ಮೂವ್ ಆಗಬೇಕೆಂದು ನಾವೆಲ್ಲರೂ ಒಪ್ಪಿಕೊಂಡ ಮೇಲೆ ಪ್ರತಿಯೊಂದು ತಾಲ್ಲೂಕನ್ನು ಸಬ್ ಡಿವಿಜನ್ ಮಾಡಿ ಇರುವ ಸಬ್ ಡಿವಿಜನ್‌ಗಳನ್ನು ತೆಗೆದು ಹಾಕಿ ಜಿಲ್ಲಾಧಿಕಾರಿಗಳಿಗೆ ಕೊಡಬೇಕೆಂದು ಮಾಡಿದೆವು. ಇದು ಸಚಿವ ಸಂಪುಟದಲ್ಲಿ ಇದೆ. ನಮ್ಮ ಸರ್ಕಾರದಿಂದ ಮಾಡುವುದಕ್ಕಾಗಲಿಲ್ಲವೆಂದು ಹೇಳಿದಿರಿ, ನಾವು ಮಾಡಿದ್ದರೆ ನೀವು ಏಕೆ ಮಾಡಬಾರದು? ಇದು ಬಹಳ ಉತ್ತಮವಾದಂಥ ಸಲಹೆ. ಡಿವಿಜನಲ್ ಕಮೀಷನರ್ ಬೇಡ, ಅಸಿಸ್ಟೆಂಟ್ ಕಮೀಷನರ್‌ಗಳನ್ನು ತೆಗೆದುಕೊಂಡು ಹೋಗಿ ತಾಲ್ಲೂಕಿಗೆ ಹಾಕಿ. ತಮಗೆ ಹಾಗೂ ಎಲ್ಲರಿಗೂ ಗೊತ್ತಿರುವಂತೆ ಇವತ್ತು ತಾಲ್ಲೂಕಿನ ಆಡಳಿತ ಪರಿಸ್ಥಿತಿ ಏನಾಗಿದೆ. ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ಎಸ್‌ಡಿಸಿಗಳು ಇವತ್ತು

ತಹಸೀಲ್ದಾರರಾಗಿದ್ದಾರೆ. ಅವರಿಗೆ ತಮ್ಮ ಅಸಿಸ್ಟೆಂಟ್‌ಗಳನ್ನು ಕಂಟ್ರೋಲ್ ಮಾಡುವುದಕ್ಕಾಗುತ್ತಿಲ್ಲ. ಪ್ರತಿಯೊಂದು ಕಾರ್ಯಚಟುವಟಿಕೆಗಳು ಕಂಪಾರ್ಟ್‌ಮೆಂಟಲೈಜ್ ಆಗಿಬಿಟ್ಟಿದೆ. ಫುಡ್ ಅಸಿಸ್ಟೆಂಟ್ ಆಗಿ ಅಸಿಸ್ಟೆಂಟ್ ಕಮೀಷನರಾಗಿ ಜಿಲ್ಲೆಯಲ್ಲಿ ನೋಡಿಕೊಳ್ಳುತ್ತಾನೆ. ಲ್ಯಾಂಡ್ ಅಕ್ವಿಜೇಷನ್ ಆಫೀಸರ್, ಅಸಿಸ್ಟೆಂಟ್ ಕಮೀಷನ್‌ರ ಗ್ರೇಡ್ ಹೋಗಿ ಜಿಲ್ಲೆಯನ್ನು ನೋಡಿಕೊಳ್ಳುತ್ತಾನೆ. ಅಸಿಸ್ಟೆಂಟ್ ಕಮೀಷನರ್ ಹೋಗಿ ಇನ್ನೊಂದು ಸಬ್ ಡಿವಿಜನ್ ನೋಡಿಕೊಳ್ಳುತ್ತಾನೆ. ಒಬ್ಬ ಅಸಿಸ್ಟೆಂಟ್ ಕಮೀಷನ್ ಒಂದು ತಾಲ್ಲೂಕಿನಲ್ಲಿದ್ದು ಅವನು ಎಲ್ಲಾ ಕೆಲಸವನ್ನು ತಾನೇ ನೋಡಿಕೊಳ್ಳುವುದಾದರೆ, ಮುಂದೆ ಜಿಲ್ಲಾಧಿಕಾರಿಗಳಿಗೆ ಹೋಗಬೇಕು. ಇದೊಂದು ಉತ್ತಮವಾದ ಯೋಜನೆ. ಸಚಿವ ಸಂಪುಟದ ಮುಂದೆ ಇರುವುದರಿಂದ ಅದನ್ನು ಮಾಡಿ ನೀವೇ ಅದರ ಕ್ರೆಡಿಟ್ ತೆಗೆದುಕೊಳ್ಳಿ. ನಾವು ನಿಮ್ಮನ್ನು ಹೊಗಳುತ್ತೇವೆ. ನಮ್ಮ ಹೆಸರು ಹೇಳುವುದು ಬೇಡ, ನಿಮ್ಮ ಹೆಸರನ್ನು ತೆಗೆದುಕೊಳ್ಳಿ, ನನಗೆ ಇದನ್ನು ಮಾಡಬೇಕೆಂದು ಬಹಳ ಆಸೆ ಇತ್ತು, ಅದನ್ನು ಮಾಡುವುದಕ್ಕಾಗಲಿಲ್ಲ. ತಾವು ಮಾಡಬೇಕು.

ಛೇರ್ಮನ್: ಗ್ರಾಮ ಲೆಕ್ಕಾಧಿಕಾರಿಗಳನ್ನು ಕಂಟ್ರೋಲ್ ಮಾಡುವುದಕ್ಕೆ ನಿಮ್ಮ ಸಲಹೆ ಏನು?

ಶ್ರೀ ಬಿ. ಸೋಮಶೇಖರ್: ಮಾನ್ಯ ಛೇರ್ಮನ್‌ರವರೇ, ಇದರ ಬಗ್ಗೆ ಮೊದಲು ಒಂದು ಸಲ ಹೇಳಿದೆ. ಇವತ್ತು ಆಡಳಿತ ಎಲ್ಲಿ ಕೆಟ್ಟಿದೆ ಎಂದರೆ, ಗ್ರಾಮ ಲೆಕ್ಕಾಧಿಕಾರಿ ಹಾಗೂ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ ಈ ಇಬ್ಬರನ್ನು ನೀವು ಕಂಟ್ರೋಲ್ ಮಾಡಿಬಿಟ್ಟರೆ 50 ಭಾಗ ಆಡಳಿತ ಸುಧಾರಣೆಯಾಗುತ್ತದೆ. ಇದರ ಬಗ್ಗೆ ನಾನು ಬಹಳ ಪ್ರಯತ್ನವನ್ನು ಮಾಡಿದೆ.

ಶ್ರೀ ಬಿ.ಆರ್. ಯಾವಗಲ್: ನಾನು ಮಾಡಬೇಕೆಂದು ಮಾಡಿದೆ, ಅದನ್ನು ನನಗೆ ಮಾಡುವುದಕ್ಕಾಗಲಿಲ್ಲವೆಂದು ತಾವು ಪದೇ ಪದೇ ಹೇಳುತ್ತಿದ್ದೀರಿ, ಏಕೆ ಮಾಡುವುದಕ್ಕಾಗಲಿಲ್ಲ ವೆನ್ನುವುದನ್ನು ತಾವು ಸ್ವಲ್ಪ ಹೇಳಬೇಕು.

ಶ್ರೀ ಬಿ. ಸೋಮಶೇಖರ್: ಅದು ಯಾವುದಕ್ಕಾಗಲಿಲ್ಲವೆನ್ನುವುದು ಅವರಿಗೆ ಗೊತ್ತಿದೆ. ನಾವು ತಂದಿರುವ ಪ್ರತಿಯೊಂದು ಐತಿಹಾಸಿಕವಾದ ಯೋಜನೆಗಳಾಗಿವೆ. 45 ದಿವಸಗಳಲ್ಲಿ ಎನ್‌ಎ ಮಾಡಬೇಕೆನ್ನುವುದನ್ನು ನಾವು ತಂದಿದ್ದೆವು. 45 ದಿವಸಗಳೊಳಗಾಗಿ ಜಿಲ್ಲಾಧಿಕಾರಿಗಳು ಎನ್‌ಎ ಮಾಡದಿದ್ದರೆ it is deemed to be converted ಅದರಿಂದ ಎಷ್ಟು ಹೆರಾಸ್‌ಮೆಂಟ್ ಆಗುತ್ತಿತ್ತು, ಎಷ್ಟು ಆದರಿಂದ ಲಂಚ ನಡೆಯುತ್ತಿತ್ತು ತಮಗೆ ಗೊತ್ತಿದೆ. ಅವನು 45 ದಿವಸಗಳಲ್ಲಿ ಕೊಡಲಿ ಅಥವಾ ಕೊಡದೆ ಇರಲಿ, it is the responsibility of the Authority to issue conversion. ಎಷ್ಟು ಲಂಚ ನಡೆಯುತ್ತಿತ್ತು ಅದು ತಪ್ಪಿ ಹೋಯಿತು. ಬಡವರು ಮನೆಗಳನ್ನು ಹಳ್ಳಿಗಳಲ್ಲಿ ಸರ್ಕಾರಿಯ ಜಮೀನಿನಲ್ಲಿ ಕಟ್ಟಿಕೊಂಡಿದ್ದಾರೆ. 10-15 ವರ್ಷವಾದರೂ ಅವರ ಮನೆಗಳಿಗೆ ಲೈಟ್ ಕೊಡುವುದಕ್ಕಾಗುವುದಿಲ್ಲ. ನೀರು ಕೊಡುವುದಕ್ಕಾಗುವುದಿಲ್ಲ ಏಕೆಂದರೆ ಅವರಿಗೆ ಅಲಿನೇಷನ್ ಆಗಿಲ್ಲ. ಇದಕ್ಕೆ ಕಾರಣರಾರು ಎಂದು ಯೋಚನೆ ಮಾಡಿ. ನಾವು ಕಂದಾಯ ಅಧಿನಿಯಮಕ್ಕೆ ತಿದ್ದುಪಡಿಯನ್ನು ತಂದು 94 ಸಿ ಎಂದು ಇಂಟ್ರಡ್ಯೂಸ್ ಮಾಡಿ ಪ್ರತಿಯೊಬ್ಬರಿಗೂ ರೆಗ್ಯುಲರೈಸ್ ಮಾಡಬೇಕೆಂದು ಮಾಡಿದ್ದೆವು.

ನಮ್ಮ ಶ್ರೀ ಸಾಲಿಯಾನ ಹಾಗೂ ನಮ್ಮ ಮಾಗಡಿ ರೇವಣ್ಣನವರು ಹೇಳುತ್ತಿದ್ದರು. ನೀವು ಮಾಡಿರುವ ಯೋಜನೆಯಿಂದ ನಮಗೆ ಇವತ್ತು ಓಟು ಬರುತ್ತದೆಂದು ಹೇಳುತ್ತಿದ್ದಾರೆ. ಯಾರಿಗೆ ಈ ಯೋಜನೆ ಬಗ್ಗೆ ಗೊತ್ತಿದೆ ಅವರು ಚಾಲನೆಯನ್ನು ಮಾಡಿಕೊಳ್ಳುತ್ತಿದ್ದಾರೆ. ಪ್ರತಿಯೊಂದು ತಾಲ್ಲೂಕು ಹಾಗೂ ಜಿಲ್ಲೆಗಳಿಗೆ ನಿಗದಿ ಮಾಡಬೇಕು. ಎಷ್ಟೆಷ್ಟು ಮನೆಗಳನ್ನು ಇವತ್ತು ಅನಿಧಿಕೃತವಾಗಿ ಕಟ್ಟಿದ್ದಾರೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ: ಕನ್‌ವರ್ಷನ್ ಚಾರ್ಜ್ ಮನ್ನಾ ಮಾಡುತ್ತೇವೆಂದು ಹೇಳಿದ್ದೇವೆ.

ಶ್ರೀ ಬಿ. ಸೋಮಶೇಖರ್: ಅದನ್ನು ಎಲ್ಲಾ ಮಾಡಬೇಕೆಂದು ನಾವು ಆರ್ಡರ್ ಇಷ್ಯೂ ಮಾಡಿದ್ದೇವೆ. ಮತ್ತೊಂದು ಬಗರ್ ಹುಕುಂ ಸಾಗುವಳಿ, ಅದರಲ್ಲಿ 10 ಲಕ್ಷ 48 ಸಾವಿರ ಅರ್ಜಿಗಳಿಗೆ ನಾನು ಟೈಮ್ ಕೊಟ್ಟು ಬಂದಿದ್ದೆ. ಕಮಿಟಿಗಳು ಇವತ್ತು ಕೆಲಸವನ್ನು ಮಾಡುತ್ತಿಲ್ಲ. ಅದಕ್ಕೆ ಆದಷ್ಟು ಟಾರ್ಗೆಟ್ ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ: ನಾನು ಆಗ ನಿಮ್ಮ ಸ್ಥಾನದಲ್ಲಿ ಕುಳಿತುಕೊಂಡು ಹೇಳಿದ್ದೆ. ಆಮೇಲೆ ಒಂದು ಕಾಂಪ್ರೊಮೈಸ್ ಮಾಡಿದೆವು. ತಹಸೀಲ್ದಾರರು ಇನ್ಸ್‌ಪೆಕ್ಷನ್ ಮಾಡಿ ಅದರ ರಿಪೋರ್ಟ್ ಕಮಿಟಿಗೆ ಬರಬೇಕೆಂದು ಮೊನ್ನೆ ಮಾಡಿದೆ. ನಾನು ಆಗ ನಿಮ್ಮನ್ನು ಬಾರಿ ಬಾರಿ ಕೇಳಿಕೊಂಡೆ.

ಶ್ರೀ ಬಿ. ಸೋಮಶೇಖರ್: ಅದು ಈಗಲೂ ಇರಬೇಕು. ಏಕೆಂದರೆ ಅದನ್ನು ಮೆಂಬರ್‌ಗೆ ಕೊಟ್ಟುಬಿಟ್ಟರೆ ಅಲ್ಲಿ ರಾಜಕೀಯ ನಡೆಯುತ್ತದೆ. ಪ್ರತಿಯೊಂದು ತಾಲ್ಲೂಕಿಗೆ ಅಸಿಸ್ಟೆಂಟ್ ಕಮೀಷನರ್‌ರನ್ನು ಹಾಕಿಬಿಡಿ. ಸಬ್‌ಡಿವಿಜನ್ ಆಫೀಸ್ ಕೆಲಸವನ್ನು ಎಲ್ಲಾ ತಾಲ್ಲೂಕಿಗೆ ಕೊಟ್ಟುಬಿಡಿ. ಅವರು ಎಲ್ಲಾ ಕೆಲಸವನ್ನು ಮಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ: ಒಂದೊಂದು ತಾಲ್ಲೂಕಿನಲ್ಲಿ 15 ರಿಂದ 20 ಸಾವಿರ ಅರ್ಜಿಗಳು ಬಾಕಿ ಇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಕಂದಾಯ ಸಚಿವರಲ್ಲಿ ನನ್ನದೊಂದು ಆಗ್ರಹ ಏನೆಂದರೆ, ನಾವೆಲ್ಲಾ ಬಗರ್ ಹುಕುಂ ಸಾಗುವಳಿ ಸಮಿತಿಯ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದೇವೆ. ಇವತ್ತಿನದಿವಸ ಸರ್ವೆಯರ್‌ಗಳು ಕಡಿಮೆ ಇರುವುದರಿಂದ, ನಾವು ಮಂಜೂರು ಮಾಡಿರತಕ್ಕಂಥ ಜಮೀನಿಗೆ ಹದ್ದುಬಸ್ತ್ ಮಾಡಿ ಬಾಂದ ಮಾಡಿ ಗುರುತು ಮಾಡಿಕೊಡುವುದಕ್ಕೆ ಆಗುತ್ತಿಲ್ಲ. ಮತ್ತೆ ಹೊಸದಾಗಿ ರೆಕಾರ್ಡ್ಸ್‌ನ್ನು ತರುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಈಗ ಬಾಕಿ ಉಳಿದಿರತಕ್ಕಂಥ 14 ಲಕ್ಷ ಅರ್ಜಿಗಳನ್ನು ಬಗೆಹರಿಸುವುದಕ್ಕೋಸ್ಕರ ಒಂದು ತೀರ್ಮಾನವನ್ನು ತಾವು ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಮಾನ್ಯ ಕಂದಾಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ಇವತ್ತಿನ ದಿವಸ ಆಶ್ರಯ ಮನೆಗಳನ್ನು ಕಟ್ಟುವುದಕ್ಕೆ ತೆಗೆದುಕೊಳ್ಳತಕ್ಕಂಥ ಜಮೀನಿಗೆ ಸರ್ವೆ ಮಾಡುವುದಕ್ಕೆ ಸರ್ವೆಯರ್ಸ್ ಇಲ್ಲ.

ಶ್ರೀ ಬಿ. ಸೋಮಶೇಖರ್: ಮಾನ್ಯ ಛೇರ್ಮನ್‌ರವರೆ, ಸರ್ಕಾರಿ ಸರ್ವೆಯರ್ಸ್‌ನ್ನು ನಂಬಿಕೊಂಡಿದ್ದರಿಂದ ಕಳೆದ 10-15 ವರ್ಷಗಳಿಂದ ಸರಿಯಾಗಿ ಸರ್ವೆ ಕೆಲಸ ಆಗಿಲ್ಲ. ಈ ದೃಷ್ಟಿಯಿಂದ ಹೊಸದಾಗಿ ಸರ್ವೆಯರ್‌ಗಳನ್ನು ನೇಮಕ ಮಾಡುವುದಕ್ಕೂ ಕಷ್ಟವಾಗಿದೆ. ಆದ್ದರಿಂದ ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಖಾಸಗಿ ಸರ್ವೆಯರ್‌ಗೆ ಲೈಸೆನ್ಸ್ ಕೊಟ್ಟು ಈ ಕೆಲಸವನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೆವು. ಜಮೀನನ್ನು ತೆಗೆದುಕೊಂಡಂಥ ಸಂದರ್ಭದಲ್ಲಿ ಒಬ್ಬ ಲೈಸೆನ್ಸ್ ಪಡೆದಿರತಕ್ಕಂಥ ಖಾಸಗಿ ಸರ್ವೆಯರ್ ಒಬ್ಬರಿಂದ ಸರ್ವೆ ಮಾಡಿಸಿ ನಮ್ಮ ಇಲಾಖೆಯಲ್ಲಿ ಸೀಲ್ ಮಾಡಿಸಿಕೊಳ್ಳತಕ್ಕಂಥ ಒಂದು ಕಾರ್ಯ ಮಾಡಿದರೆ, ಆಗ ಪೋಡಿ ಕೇಸ್‌ಗಳೇ ಬರುವುದಿಲ್ಲ. ಹೋದ ವರ್ಷ ತೆಗೆದುಕೊಂಡಿರತಕ್ಕಂಥ ಅರ್ಜಿಗಳನ್ನು ಈ ರೀತಿಯಾದಂಥ ವ್ಯವಸ್ಥೆಯಿಂದ ಕೆಲಸ ಮಾಡಿಸಿದ್ದರೆ ಇವತ್ತಿನದಿವಸ ಕನಿಷ್ಟಪಕ್ಷ 2 ಲಕ್ಷ ಪೋಡಿ ಕೇಸ್‌ಗಳು ಮುಕ್ತಾಯವಾಗುತ್ತಿತ್ತು. ಹಾಗೆಯೇ ಸರ್ಕಾರಿ ಸರ್ವೆಯರ್ಸ್‌ನ್ನು ಬಗರ್ ಹುಕ್ಕುಂಗೆ ಉಪಯೋಗಿಸಿಕೊಂಡು ಖಾಸಗಿ ಪೋಡಿ ಕೇಸ್‌ಗಳಿಗೆ ಖಾಸಗಿ ಸರ್ವೆಯರ್‌ಗಳನ್ನು ಉಪಯೋಗ ಮಾಡಿಕೊಳ್ಳಬಹುದಾಗಿತ್ತು. ತಾವು ಅಧಿಕಾರಕ್ಕೆ ಬಂದು ಒಂದೂವರೆ ವರ್ಷವಾಗಿದೆ. ತಾವು ಅಧಿಕಾರಕ್ಕೆ ಬಂದ ದಿವಸದಿಂದ ಈ ಕೆಲಸವನ್ನು ಮಾಡಬಹುದಿತ್ತು. ಆದರೆ ಅನಾವಶ್ಯಕವಾಗಿ ಇದು ತಡವಾಗಿ ಬಹಳಷ್ಟು ಕೆಲಸಗಳು ನಿಂತುಹೋಗಿವೆ. ಇನ್ನು ರಸ್ತೆಗಳ ಬಗ್ಗೆ ಹೇಳುವುದಾದರೆ, ಎನ್.ಎಚ್. ರಸ್ತೆಗಳು ಮತ್ತು ಎಂ.ಡಿ.ಆರ್. ರಸ್ತೆಗಳ ಅಭಿವೃದ್ಧಿಗಾಗಿ ಸರ್ಕಾರ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡು ಈ ಒಂದು ಕಾರ್ಯಕ್ಕೆ ಸಾಲ ತೆಗೆದುಕೊಂಡು ಕೆಲಸ ಮಾಡುತ್ತಿರುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಇವತ್ತಿನ ದಿವಸ ಎಕನಾಮಿಕ್ ಸರ್ವೆ ಪ್ರಕಾರ ಇಡೀ ರಾಜ್ಯದಲ್ಲಿರತಕ್ಕಂಥ 103 ಹಳ್ಳಿಗಳಲ್ಲಿ ಕಾಲು ನಡಿಗೆಯಲ್ಲಿ ಮತ್ತು ಸೈಕಲ್ ಹಾಗೂ ಎತ್ತಿನ ಗಾಡಿ ಹೋಗುವುದಕ್ಕೆ ರಸ್ತೆ ಇಲ್ಲದಂಥ ಪರಿಸ್ಥಿತಿ ಇದೆ. ಈ 103 ಹಳ್ಳಿಗಳಲ್ಲಿ ಇವತ್ತಿನದಿವಸ ಯಾರು ವಾಸ ಮಾಡುತ್ತಿದ್ದಾರೆಂದು ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಚೆನ್ನಾಗಿ ಗೊತ್ತಿದೆ. ಇಲ್ಲಿ ಬಾಯಿ, ಕಿವಿ ಮತ್ತು ಕಣ್ಣು ಇಲ್ಲದೇ ಇರತಕ್ಕಂಥ ನಿರ್ಗತಿಕರು, ಪ್ರಾಣಿಗಳಿಗಿಂತ ಕಡೆ ಇರತಕ್ಕಂಥ ಜನರು ಅಲ್ಲಿ ವಾಸ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಬಸ್ ಮತ್ತು ಗಾಡಿಗಳು ಹೋಗುವುದಕ್ಕೆ ಆಗದೇ ಇರತಕ್ಕಂಥ ಸುಮಾರು 4255 ಕಿ.ಮೀ. ಕಚ್ಚಾ ರಸ್ತೆ ಇದೆ. ಈ ರಸ್ತೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಸರ್ಕಾರ ಯಾವುದೇ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ. ಇವತ್ತಿನದಿವಸ ಈ ಒಂದು ಕಾರ್ಯಕ್ಕೆ ಮೊದಲನೇ ಆದ್ಯತೆ ಸಿಗಬೇಕಾಗಿತ್ತು. ಇನ್ನು ವಿದ್ಯುಚ್ಛಕ್ತಿ ಬಗ್ಗೆ ಹೇಳುವುದಾದರೆ, ಈ ವರ್ಷ ವಿದ್ಯುಚ್ಛಕ್ತಿಯ ಎಲ್ಲಾ ಕೊರತೆಯನ್ನು ಕಡಿಮೆ ಮಾಡುತ್ತೇವೆಂದು ಇವರು ಹೇಳಿದ್ದಾರೆ. 2000-2001ನೇ ಸಾಲಿನಲ್ಲಿ ನೀವು ವಿದ್ಯುಚ್ಛಕ್ತಿಗೆ ಎಷ್ಟು ಕೊಟ್ಟಿದ್ದೀರಿ ಎಂದರೆ, 10.43 ಪರ್ಸೆಂಟ್‌ನಷ್ಟು ಇತ್ತು. ಅಂದರೆ ಸುಮಾರು 258 ಕೋಟಿ ರೂಪಾಯಿಗಳಷ್ಟು ಕೊಡಲಾಗಿತ್ತು. ಈ ವರ್ಷ ಕೇವಲ 11 ಪರ್ಸೆಂಟ್‌ನಷ್ಟು ಕೊಟ್ಟಿದ್ದೀರಿ. ಅಂದರೆ ಕೇವಲ 0.5 ಪರ್ಸೆಂಟ್‌ನಷ್ಟು ಮಾತ್ರ ಹೆಚ್ಚಿಗೆ ಕೊಟ್ಟಿದ್ದೀರಿ. 680 ಮೆ.ವ್ಯಾ. ವಿದ್ಯುತ್ 2003ನೇ ಇಸವಿಯಲ್ಲಿ ದೊರೆಯುತ್ತದೆ. ಹಾಗೆಯೇ ಆಲಮಟ್ಟಿ ಜಲ ವಿದ್ಯುತ್‌ನಿಂದ ಫೆಬ್ರವರಿ 2001ನೇ ಇಸವಿಗೆ 290 ಮೆ.ವ್ಯಾ. ಮತ್ತು ಗೇರುಸೊಪ್ಪ ವಿದ್ಯುತ್ ಘಟಕದಿಂದ ವಿದ್ಯುತ್‌ನ್ನು ಮಾರ್ಚ್ 2002ನೇ ಇಸವಿಯಲ್ಲಿ ಉತ್ಪಾದನೆ ಮಾಡತಕ್ಕಂಥ ಕಾರ್ಯ ಪ್ರಾರಂಭವಾಗುತ್ತದೆ.

ಈ ಒಂದು ಕಾರ್ಯಕ್ಕೆ ಈ ತಿಂಗಳಲ್ಲಿ 120 ಕೋಟಿ ರೂಪಾಯಿಗಳನ್ನು ಮಾತ್ರ ಕೊಡುತ್ತಿದ್ದೀರಿ. ಇನ್ನು 680 ಮೆ.ವ್ಯಾ. ವಿದ್ಯುತ್‌ನ್ನು ಐದಾರು ವರ್ಷಗಳಲ್ಲಿ ಕೊಡುತ್ತೇವೆಂದು ಹೇಳಿದ್ದೀರಿ. ಇವತ್ತಿನದಿವಸ ನಮಗೆ 17,750 ಮಿಲಿಯನ್ ಯೂನಿಟ್‌ನಷ್ಟು ವಿದ್ಯುತ್ ಬೇಕಾಗಿದೆ. ಆದರೆ 5679 ಮಿಲಿಯನ್ ಯೂನಿಟ್‌ನಷ್ಟು ಕೊರತೆ ಇದೆ. ಇಷ್ಟೊಂದು ಕೊರತೆ ಇಟ್ಟುಕೊಂಡು ರೈತರಿಗೆ ಎಂಟು ಗಂಟೆಗಳ ಕಾಲ ವಿದ್ಯುತ್ ಕೊಡುತ್ತೇವೆಂದು ಹೇಳುತ್ತೀರಿ. ಹಾಗೆಯೇ ಮತ್ತೊಂದು ಕಡೆ ಇನ್ನು ಐದು ವರ್ಷದಲ್ಲಿ 680 ಮೆ.ವ್ಯಾ. ನಷ್ಟು ವಿದ್ಯುತ್ ಉತ್ಪಾದನೆ ಮಾಡುತ್ತೇವೆಂದು ಹೇಳುತ್ತಿದ್ದು, ಮುಂದೆ ಬರತಕ್ಕಂಥ ಕೊರತೆಯನ್ನು ಯಾವ ರೀತಿ ನಿವಾರಣೆ ಮಾಡುತ್ತೀರಿ? ಹೋದ ವರ್ಷ ಎರಡು ಲಕ್ಷ ಮನೆಗಳಿಗೆ ಭಾಗ್ಯ ಜ್ಯೋತಿ ಕೊಡುತ್ತೇವೆಂದು ಹೇಳಿದವರು ಕೇವಲ 76 ಸಾವಿರ ಮನೆಗಳಿಗೆ ಮಾತ್ರ ಕೊಟ್ಟಿದ್ದೀರಿ. ತಾವು ಹಿಂದೆ ಹೇಳಿರತಕ್ಕಂಥ ಎರಡು ಲಕ್ಷ ಮನೆಗಳಲ್ಲಿ ಮತ್ತೆ ಮುಂದಿನ ವರ್ಷದಲ್ಲಿ 50 ಸಾವಿರ ಮನೆಗಳಿಗೆ ಕೊಡುತ್ತೀರಾ ಎಂಬುದನ್ನು ತಿಳಿಸಬೇಕು. ನಮ್ಮ ರಾಜ್ಯದಲ್ಲಿರತಕ್ಕಂಥ 18,000 ಹ್ಯಾಮ್ಲೆಟ್‌ಗಳಿಗೆ 5 ವರ್ಷದಲ್ಲಿ ವಿದ್ಯುತ್ ಕಲ್ಪಿಸಿಕೊಡುತ್ತೇವೆಂದು ತಾವು ಹೇಳಿದ್ದೀರಿ. ಕೊನೇಪಕ್ಷ ಇವರು ಒಂದು ವರ್ಷಕ್ಕೆ ಸುಮಾರು 3 ರಿಂದ 4 ಸಾವಿರ ಮನೆಗಳಿಗೆ ವಿದ್ಯುತ್ ಕೊಡತಕ್ಕಂಥ ಕೆಲಸವನ್ನು ಮಾಡಬೇಕಾಗಿತ್ತು. ಆದರೆ ಇವರು ಕೇವಲ 203 ಮನೆಗಳಿಗೆ ಇದುವರೆಗೂ ವಿದ್ಯುತ್ ಕಲ್ಪಿಸಿಕೊಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಐದು ವರ್ಷದವರೆಗೆ ತಾವು ಟಾರ್ಗೆಟ್ ಇಟ್ಟುಕೊಂಡು ಒಂದು ವರ್ಷಕ್ಕೆ ಕೇವಲ 203 ಮನೆಗಳಿಗೆ ವಿದ್ಯುತ್ ಕೊಟ್ಟರೆ ಉಳಿದಿರತಕ್ಕಂಥ ಮನೆಗಳಿಗೆ ಇನ್ನು 5 ವರ್ಷದಲ್ಲಿ ವಿದ್ಯುತ್ ಒದಗಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆಯೇ? ಇದೊಂದು ಬೋಗಸ್ ಆಶ್ವಾಸನೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಗ್ಲೋಬಲ್ ಇನ್‌ವೆಸ್ಟ್‌ಮೆಂಟ್ ಮೂಲಕ ನಮ್ಮ ರಾಜ್ಯಕ್ಕೆ ಸುಮಾರು 35 ರಿಂದ 40 ಸಾವಿರ ಕೋಟಿ ರೂಪಾಯಿಗಳಷ್ಟು ಬಂಡವಾಳವನ್ನು ತರುತ್ತೇವೆಂದು ಮತ್ತು ಇದರಿಂದ ಸುಮಾರು ಒಂದು ಲಕ್ಷ ಉದ್ಯೋಗಗಳನ್ನು ಸೃಷ್ಟಿ ಮಾಡುತ್ತೇವೆಂದು ಇವರು ಹೇಳುತ್ತಾ ಹೊರಗಡೆಯಿಂದ ಬಂಡವಾಳ ಹೂಡಿಕೆದಾರರನ್ನು ಕರೆದುಕೊಂಡು ಬಂದು ಅವರಿಗೆ ರತ್ನ ಕಂಬಳಿಯನ್ನು ಹಾಸಿ ಅವರಿಗೆ ಬೇಕಾಗಿರತಕ್ಕಂಥ ರಿಯಾಯಿತಿಗಳು, ಅಂದರೆ, ವಿದ್ಯುತ್ ಮತ್ತು ಲ್ಯಾಂಡ್ ರಿಜಿಸ್ಟ್ರೇಷನ್ ಫೀಯನ್ನು ವೇ ಆಫ್ ಮಾಡುವುದು ಮತ್ತು ಮಾರಾಟ ತೆರಿಗೆ ರಿಯಾಯಿತಿಯನ್ನು ಕೆಲವರಿಗೆ 5 ರಿಂದ 14 ವರ್ಷಗಳವರೆಗೆ ಕೊಡಲಾಗಿದೆ. ಇದು ನಿಮ್ಮ ಇಂಡಸ್ಟ್ರಿಯಲ್ ಪಾಲಿಸಿಯಲ್ಲಿ ಇದೆ. 1996ನೇ ಇಸವಿಯಲ್ಲಿ ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಈ ಪಾಲಿಸಿಯನ್ನು ತರಲಾಗಿತ್ತು. ಇಲ್ಲ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಯವರು ಹೊಸದಾಗಿ ಏನು ಹೇಳಿದ್ದಾರೆಂದರೆ, "The Chief Minister told the conference of Chief Ministers at Delhi on June 22nd last year, we want the first stage abolition of sales tax incentives" ಎಂದು ಹೇಳಿ ನೋಟಿಫಿಕೇಷನ್‌ನ್ನು ಇಷ್ಯೂ ಮಾಡಿದ್ದಾರೆ. ಈ ನೋಟಿಫಿಕೇಷನ್ ಇಷ್ಯೂ ಮಾಡಿದ ಮೇಲೆಯೂ ಕೂಡ ಇನ್ನು ನಾಲ್ಕೈದು ಬಂಡವಾಳ ಹೂಡಿಕೆದಾರರಿಗೆ ಪರವಾನಿಗೆಯನ್ನು ಮತ್ತು ರಿಯಾಯಿತಿಯನ್ನು ಕೊಟ್ಟಿದ್ದೀರಿ ಎಂಬ ಮಾಹಿತಿ ನನಗೆ ಬಂದಿದೆ. ಆದ್ದರಿಂದ ಏಷ್ಟು

ರಿಯಾಯಿತಿಯನ್ನು ಕೊಡಲಾಗಿದೆ ಎಂಬುದರ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕು. ಇವತ್ತಿನದಿವಸ ನಮ್ಮ ರಾಜ್ಯದಲ್ಲಿ ತೆರಿಗೆ ವಸೂಲು ಆಗುತ್ತಿರುವುದು ಬಹಳ ಕಡಿಮೆ. ಅಂದರೆ ಕೇವಲ 6.83 ಪರ್ಸೆಂಟ್‌ನಷ್ಟು ಮಾತ್ರ ವಸೂಲು ಆಗುತ್ತಿದೆ. ಆದರೆ ಹೊರ ರಾಜ್ಯಗಳಾದಂಥ ಕೇರಳದಲ್ಲಿ 7.83 ಪರ್ಸೆಂಟ್ ಮತ್ತು ತಮಿಳುನಾಡಿನಲ್ಲಿ 8.18 ಪರ್ಸೆಂಟ್‌ನಷ್ಟು ತೆರಿಗೆ ವಸೂಲಾಗುತ್ತಿದೆ. ಈ ಮೂರು ರಾಜ್ಯಗಳಿಗೆ ಹೋಲಿಕೆ ಮಾಡಿದರೆ ನಮ್ಮ ರಾಜ್ಯದಲ್ಲಿ ಕಡಿಮೆ ತೆರಿಗೆ ವಸೂಲಾಗುತ್ತಿದೆ. ಇದರಿಂದ ಸುಮಾರು 6.5 ಸಾವಿರ ಕೋಟಿ ರೂಪಾಯಿ ನಷ್ಟವಾಗುತ್ತಿದ್ದು, ಇದರ ಜೊತೆಗೆ ತಾವು ಮತ್ತೆ ರಿಯಾಯಿತಿಗಳನ್ನು ಸಹ ಕೊಡುತ್ತಿದ್ದೀರಿ. ಮೊದಲು ಕಂಪನಿಗಳನ್ನು ಪ್ರಾರಂಭ ಮಾಡುವುದಕ್ಕೆ ನಾವು ಇಷ್ಟೊಂದು ಅನುಕೂಲಗಳನ್ನು ಒದಗಿಸಿಕೊಡುವುದರಿಂದ ಅವರು ಉದ್ಯೋಗವನ್ನು ಒದಗಿಸಿಕೊಡುತ್ತೇವೆ ಎನ್ನತಕ್ಕಂಥ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದರೆ, ಎಷ್ಟು ಉದ್ಯೋಗಗಳನ್ನು ಸೃಷ್ಟಿ ಮಾಡಿದ್ದಾರೆ ಎಂಬುದರ ಬಗ್ಗೆ ನಾನು ಒಂದೆರಡು ಉದಾಹರಣೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಚಾಮರಾಜನಗರ, ಗದಗ್ ಮತ್ತು ಕೊಪ್ಪಳ ಹಾಗೂ ಶಿವಮೊಗ್ಗ ಮತ್ತು ಉಡುಪಿ, ಈ ಎಲ್ಲಾ ಜಿಲ್ಲೆಗಳು ಹಿಂದುಳಿದ ಜಿಲ್ಲೆಗಳೆಂದು ಗುರುತು ಮಾಡಿ ಇಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ತೀರ್ಮಾನ ಮಾಡಲಾಗಿತ್ತು. ಹಾಗೆಯೇ ಸದರಿ ಜಿಲ್ಲೆಗಳಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ಒಪ್ಪಿಗೆ ತೆಗೆದುಕೊಂಡು ಇವತ್ತಿನದಿವಸ ಸುಮಾರು 113 ಪ್ರಾಜೆಕ್ಟ್‌ಗಳು ಬೆಂಗಳೂರು ಅರ್ಬನ್ ಪ್ರದೇಶದಲ್ಲಿ ಸ್ಥಾಪನೆಯಾಗಿವೆ. ಹಾಗೆಯೇ, ಬೆಳಗಾಂ ಮತ್ತು ಬೆಂಗಳೂರು ಗ್ರಾಮಾಂತರ ಹಾಗೂ ಧಾರವಾಡ, ಮೈಸೂರು ಜಿಲ್ಲೆಗಳಲ್ಲಿ ಉಳಿದಿರತಕ್ಕಂಥ ಕೆಲವು ಕೈಗಾರಿಕೆಗಳು ಸ್ಥಾಪನೆಯಾಗಿವೆ. ಸುಮಾರು 10 ಸಾವಿರ ಕೋಟಿ ರೂಪಾಯಿಗಳಷ್ಟು ಬಂಡವಾಳವನ್ನು ಹೂಡಿಕೆ ಮಾಡಿ ಸುಮಾರು 66.5 ಸಾವಿರ ಜನರಿಗೆ ಉದ್ಯೋಗವನ್ನು ಸೃಷ್ಟಿ ಮಾಡುತ್ತೇವೆಂದು ಹೇಳಿದ್ದರು. ಆದರೆ, ಎಷ್ಟೆಷ್ಟು ಉದ್ಯೋಗಗಳನ್ನು ಇವತ್ತಿನದಿವಸ ಸೃಷ್ಟಿ ಮಾಡಿದ್ದಾರೆ ಎಂಬುದರ ಬಗ್ಗೆ ಒಂದೆರಡು ಉದಾಹರಣೆಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಪ್ರಮುಖವಾಗಿ ಮಾರ್ಕೆಟ್ ಇಂಡೊ ಪೆಟ್ರೋ ಗ್ಯಾಸ್ ಕಂಪನಿಯವರು ಸುಮಾರು 7.5 ಸಾವಿರ ಉದ್ಯೋಗವನ್ನು ಸೃಷ್ಟಿ ಮಾಡುತ್ತೇವೆಂದು ಕಂಪನಿ ಪ್ರಾರಂಭ ಮಾಡುವುದಕ್ಕೆ ಒಪ್ಪಿಗೆಯನ್ನು ತೆಗೆದುಕೊಂಡಿದ್ದರು. ಆದರೆ ಇವರು ಕೇವಲ 7 ಹುದ್ದೆಗಳನ್ನು ಮಾತ್ರ ಸೃಷ್ಟಿ ಮಾಡಿದ್ದಾರೆ. ಹಾಗೆಯೇ ಕೋಕೊ ಕೋಲಾ ಕಂಪನಿಯವರು ಸುಮಾರು 500 ಜನರಿಗೆ ಉದ್ಯೋಗ ಕೊಡುತ್ತೇವೆಂದು ಹೇಳಿ ಲ್ಯಾಂಡ್ ತೆಗೆದುಕೊಂಡರು ಮತ್ತು ಎರಡು ಸಾವಿರ ಕ್ಯೂಬಿಕ್ ಮೀಟರ್‌ನಷ್ಟು ನೀರನ್ನು ಮತ್ತು ಮಾರಾಟ ತೆರಿಗೆಯ ರಿಯಾಯಿತಿಯನ್ನು ತೆಗೆದುಕೊಂಡು ಇವತ್ತಿನದಿವಸ ಸುಮಾರು 100 ಜನರಿಗೂ ಸಹ ಉದ್ಯೋಗವನ್ನು ಕೊಟ್ಟಿಲ್ಲ. ಹಾಗೆಯೇ ಮದ್ದೂರು ತಾಲ್ಲೂಕಿನಲ್ಲಿ ಒಂದು ಕಂಪನಿ ಪ್ರಾರಂಭವಾಗಿದೆ. ಆದರೆ ಇಲ್ಲಿ ಇದುವರೆಗೆ ಯಾರಿಗೂ ಸಹ ಉದ್ಯೋಗವನ್ನು ಕೊಟ್ಟಿಲ್ಲ. ಸುಮಾರು 40 ಸಾವಿರ ಕೋಟಿ ರೂಪಾಯಿಗಳಷ್ಟು ಬಂಡವಾಳ ಹೂಡಿ ಸುಮಾರು 7.87 ಲಕ್ಷ ಉದ್ಯೋಗವನ್ನು ಸೃಷ್ಟಿ ಮಾಡುತ್ತೇವೆಂದು ಹೇಳಿ ಸರ್ಕಾರದಿಂದ ನೂರಾರು ಕೋಟಿ ರೂಪಾಯಿಗಳಷ್ಟು ರಿಯಾಯಿತಿ ತೆಗೆದುಕೊಂಡಿದ್ದಾರೆ. ಆದ್ದರಿಂದ ನಮ್ಮ ರಾಜ್ಯದಲ್ಲಿ ಪ್ರಾರಂಭವಾಗಿರುವ ಕಂಪನಿಗಳು ಮೊದಲು ಅಗ್ರಿಮೆಂಟ್

ಮಾಡಿಕೊಂಡಿರುವಷ್ಟು ಉದ್ಯೋಗಗಳನ್ನು ಸೃಷ್ಟಿ ಮಾಡಿದ್ದಾರೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ನೇರವಾಗಿ ಸುಮಾರು 100 ರಿಂದ 150 ಜನರಿಗೆ ಉದ್ಯೋಗಾವಕಾಶಗಳು ಸಿಕ್ಕಿರಬಹುದು. ಆದರೆ, ಇನ್‌ಡೈರೆಕ್ಟ್ ಆಗಿ ಸಾಕಷ್ಟು ಎಂಪ್ಲಾಯ್‌ಮೆಂಟ್ ಜನರೇಟ್ ಆಗಿರುತ್ತದೆ.

ಶ್ರೀ ಬಿ. ಸೋಮಶೇಖರ್: ಕಂಪನಿ ಮೊದಲು ಪ್ರಾರಂಭವಾದಾಗ ನಾನು ಈಗಾಗಲೇ ಹೇಳಿದ ಅಂಕಿ-ಅಂಶದ ಪ್ರಕಾರ ಉದ್ಯೋಗವನ್ನು ಸೃಷ್ಟಿ ಮಾಡಿಲ್ಲ. ಹಾಗೆಯೇ ಸರೋಜಿನಿ ಮಹಿಷಿ ವರದಿ ಪ್ರಕಾರ ಎ ಮತ್ತು ಬಿ ವರ್ಗದವರಿಗೆ ಶೇಕಡ 80 ರಷ್ಟು ಉದ್ಯೋಗ ಕೊಡಬೇಕೆಂದು ಇದೆ. ಹಾಗೆಯೇ ಕೆಳ ವರ್ಗದಲ್ಲಿ 100 ಕ್ಕೆ 100 ರಷ್ಟು ಉದ್ಯೋಗವನ್ನು ಕನ್ನಡಿಗರಿಗೆ ಕೊಡಬೇಕೆಂದು ಇದೆ. ಇದನ್ನೂ ಸಹ ಅವರು ಅನುಸರಿಸಿಲ್ಲ. ಕೆಳ ವರ್ಗದ ನೌಕರರಿಗೆ ಶೇಕಡ 100 ರಷ್ಟು ಕನ್ನಡಿಗರಿಗೆ ಕೊಡಬೇಕೆಂದಿದ್ದರೂ ಕೊಟ್ಟಿಲ್ಲ, ಇಷ್ಟೊಂದು ಸವಲತ್ತುಗಳನ್ನು ಅವರಿಗೆ ಕೊಡುವಾಗ ಏಕೆ ನೀವು ಅವರಿಗೆ ಒಂದು ಕಂಡೀಷನ್ ಹಾಕಬಾರದು? ಸಾಮಾಜಿಕ ನ್ಯಾಯ ಕೊಡಬೇಕು ಎನ್ನುವ ಹಿನ್ನೆಲೆಯಲ್ಲಿ ಈ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಶೇಕಡ 18 ರಷ್ಟು ಮೀಸಲಾತಿ ಕೊಡಬೇಕು ಇಲ್ಲದಿದ್ದರೆ ನಾವು ಒಪ್ಪಿಗೆ ಕೊಡುವುದಿಲ್ಲವೆಂದು ನೀವು ಏಕೆ ಹೇಳಬಾರದು? ದಲಿತರು ಇವತ್ತಿನ ದಿವಸ ಬಹಳ ಹತಾಷರಾಗಿಬಿಟ್ಟಿದ್ದಾರೆ, ಏಕೆಂದರೆ, ಇವತ್ತು ಎಲ್ಲಾ ರಾಷ್ಟ್ರೀಕರಣವಾಗಿ ಖಾಸಗೀಕರಣವಾಗುತ್ತಿರುವುದರಿಂದ ಅಲ್ಲಿ ಮೀಸಲಾತಿಯಿರುವುದಿಲ್ಲ. ಒಂದು ಕಡೆ ನೀವು ಅವರಿಗೆ ಸಾವಿರಾರು ಕೋಟಿ ರೂಪಾಯಿ ರಿಯಾಯಿತಿ ಕೊಡುತ್ತಿದ್ದೀರಿ. ಹೀಗಿರುವಾಗ ಅದನ್ನು ಪಡೆದುಕೊಂಡಂಥವರು ಈ ಸಮಾಜಕ್ಕೆ ಕೊಡಬೇಕಾದ ಅಬ್ಲಿಗೇಷನ್ ಏನು? ಆದ್ದರಿಂದ, ಇಂಥ ಸಂಸ್ಥೆಗಳಲ್ಲಿ ಈ ಮೀಸಲಾತಿಯನ್ನು ಪಾಲಿಸುವಂತೆ ಕಡ್ಡಾಯ ಮಾಡಬೇಕು ಇದರ ಕಡೆಗೆ ಮಾನ್ಯ ಕಾಗೋಡು ತಿಮ್ಮಪ್ಪನವರು ಆಸಕ್ತಿ ವಹಿಸಬೇಕೆಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಸಿಂಧ್ಯಾರವರು ಈ ವಿಷಯ ಹೇಳಲಿಲ್ಲ.

ಶ್ರೀ ಬಿ. ಸೋಮಶೇಖರ್: ಅವರು ಎಲ್ಲವನ್ನು ಹೇಳುವುದಕ್ಕಾಗುವುದಿಲ್ಲ. ಅವರು ಕೆಲವು ವಿಚಾರಗಳನ್ನು ಹೇಳಿದರೆ ನಾವು ಕೆಲವು ವಿಚಾರಗಳನ್ನು ಹೇಳಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾನು ಏಕೆ ಹೇಳಲಿಲ್ಲವೆಂದರೆ, ಕರ್ನಾಟಕದ ದೌರ್ಭಾಗ್ಯವಶಾತ್ ಏನೆಂದರೆ, ನಮ್ಮ ಕಾಲದಲ್ಲಿ ಮತ್ತು ನಿಮ್ಮ ಕಾಲದಲ್ಲಿ ಇಂಡಸ್ಟ್ರೀಸ್ ಮಂತ್ರಿಗಳು ಅವರೇ ಇರುವುದರಿಂದ ನಾನು ಹೇಳಲಿಲ್ಲ.

ಶ್ರೀ ಬಿ. ಸೋಮಶೇಖರ್: ಅದಕ್ಕೆ ನೀವು ಈ ಕೆಲಸ ಮಾಡಿ ಕ್ರೆಡಿಟ್ ತೆಗೆದುಕೊಳ್ಳಿ. ಮಾನ್ಯ ಕಾಗೋಡು ತಿಮ್ಮಪ್ಪನವರು ಬಹಳ ಒಳ್ಳೆಯ ಪ್ರೋಗ್ರೆಸ್ಸೀವ್ ಮಂತ್ರಿಗಳು, ಅವರೀಗ ಆಯೋಗ ರಚನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ: ಇದೊಂದು ಹೊಸ ವಿಚಾರ ಇವರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ನಾನೂ ಕೂಡ ವಿಚಾರ ಮಾಡಿದ್ದೇವೆ. ಇದಕ್ಕೆ ಸಾರ್ವಜನಿಕವಾದ ಒಂದು ಸಾಮಾಜಿಕ ಒತ್ತಡ ರೂಪುಗೊಳ್ಳಬೇಕು. ಏಕೆಂದರೆ, ರಾಜ್ಯಾಂಗ ನಮಗೆ ಅಡಚಣೆ ತರಬಹುದು. ಇಂಥ ವಿಚಾರಗಳಲ್ಲಿ ಸಾರ್ವಜನಿಕರ ಅಭಿಪ್ರಾಯವನ್ನು ಇನ್ನೂ ಒಟ್ಟಾಗಿ ಬೆಳೆಸುವ ರೀತಿಯಲ್ಲಿ ಮಾಡಿದರೆ ಪ್ರಯತ್ನಿಸಬಹುದು.

ಶ್ರೀ ಬಿ. ಸೋಮಶೇಖರ್: ಮಾನ್ಯ ಅಧ್ಯಕ್ಷರೇ, The State can impose conditions. The State has every right to introduce condtions. ನೀವು ಅವರಿಗೆ ರಿಯಾಯಿತಿ ಕೊಟ್ಟಾಗ ಅವರು ಇಷ್ಟು ಪ್ರಮಾಣದಲ್ಲಿ ಮೀಸಲಾತಿ ಕೊಡಿ ಎಂದು ಕಂಡೀಷನ್ ಹಾಕಿ, ಒಂದು ಪಕ್ಷ ಅವರು ಕೊಡದೇ ಇದ್ದರೆ ರಿಯಾಯಿತಿಯನ್ನು ವಜಾ ಮಾಡಿ. ಅವರು ಆಗ ಏಕೆ ಮಾಡುವುದಿಲ್ಲ ನೋಡೋಣ. ನೀವು ಈಗ ಆಯೋಗ ಮಾಡುತ್ತೇನೆಂದು ಹೇಳಿದಿರಿ. ನಾನು ಇದನ್ನು ಸ್ವಾಗತಿಸುತ್ತೇನೆ, ನಮ್ಮ ಸರ್ಕಾರ ಇದ್ದಾಗ ಇದು ಆಗಿರಲಿಲ್ಲ. ತಾವು ಇದನ್ನು ಮಾಡಿರುವುದರಿಂದ ನಾವು ನಿಮ್ಮನ್ನು ಅಭಿನಂದಿಸುತ್ತೇವೆ. ಸಾಮಾಜಿಕ ನ್ಯಾಯ ಕೊಡುವುದಕ್ಕೆ, ಸಾರ್ವಜನಿಕ ಹಿತಾಸಕ್ತಿ ಕಾಪಾಡುವುದಕ್ಕೆ, ಯಾವ ಸರ್ಕಾರ ಈ ಕೆಲಸ ಮಾಡಿದರೂ ಕೂಡ ನಾವು ಅದನ್ನು ಮೆಚ್ಚುತ್ತೇವೆ. ಪಕ್ಷರಹಿತವಾಗಿ ನಾವು ಆ ಕೆಲಸ ಮಾಡಬೇಕಾಗುತ್ತದೆ. ಇದೊಂದು ನಿರಾಶದಾಯಕವಾದ ಆಯವ್ಯಯವೆಂದು ಈ ಸಂದರ್ಭದಲ್ಲಿ ಹೇಳುತ್ತಾ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರಮನ್: ಮಾನ್ಯ ಬನ್ನಿಕೋಡ್‌ರವರೇ, ತಾವು ಬೇಗ ಮುಗಿಸಬೇಕು ಏಕೆಂದರೆ, ಇನ್ನು ಸುಮಾರು 8-10 ಜನ ಸದಸ್ಯರು ಇದ್ದಾರೆ, ಇವತ್ತು 8-30ಕ್ಕೆ ಈ ಚರ್ಚೆ ಮುಗಿಯಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾಳೆ ಬೆಳಿಗ್ಗೆ 9-00 ಗಂಟೆಗೆ ಬರಬೇಕು ಎಂದರೆ ಎಲ್ಲರಿಗೂ ಕಷ್ಟವಾಗುತ್ತದೆ. ಆದ್ದರಿಂದ ನಾಳೆ 10 ಗಂಟೆಗೆ ಪ್ರಾರಂಭಿಸಿ, ಹೊಸ ಸದಸ್ಯರು ನಾಲ್ಕಾರು ಜನ ಮಾತನಾಡುತ್ತಾರೆ, 12 ಗಂಟೆಗೆ ನಾಳೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಕ್ಕೆ ವ್ಯವಸ್ಥೆ ಮಾಡಿ. ಎರಡು ಗಂಟೆ ಉತ್ತರ ತಡವಾದರೆ ಆಕಾಶ ಏನೂ ಕಳಚಿ ಬೀಳುವುದಿಲ್ಲ. ನಾವೆಲ್ಲಾ ಪಾಸ್ ಮಾಡಿಕೊಡುತ್ತೇವೆ, ನೀವು ಬೆಳಿಗ್ಗೆ 9 ಗಂಟೆಗೆ ಸಭೆ ಕರೆದು ಖಾಲಿ ಕುರ್ಚಿಗಳಿಗೆ ಉತ್ತರ ಕೊಡಿಸುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ: ಇದು ಮುಗಿದ ಅಧ್ಯಾಯ. ಪುನಃ ಇದನ್ನು ತೆರೆಯುವುದಕ್ಕೆ ಅವಕಾಶವಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಈ ಕಡೆ ಇದ್ದಾಗ ಒಂದು ತುತ್ತೂರಿ ಆ ಕಡೆ ಇದ್ದಾಗ ಒಂದು ತುತ್ತೂರಿ, ನನಗೆ ಅರ್ಥವಾಗುವುದಿಲ್ಲ.

ಛೇರಮನ್: ಇವತ್ತು 10 ಗಂಟೆಗೆ ಸಭೆ ಆರಂಭವಾಗಬೇಕಾಗಿತ್ತು ಆದರೆ 10-30ಕ್ಕೆ ಪ್ರಾರಂಭವಾಯಿತು, ಅದಕ್ಕೆ 9-00 ಗಂಟೆಗೆ ಎಂದು ಹೇಳಿದರೆ ಕನಿಷ್ಠ 9-30ಕ್ಕೆ ಸಭೆ ಪ್ರಾರಂಭಿಸಬಹುದು.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಕಾಗೋಡು ತಿಮ್ಮಪ್ಪನವರು, ಸರ್ಕಾರದವರು, ಇವತ್ತು ಏಕೆ ಇದನ್ನು ಮುಗಿಸಬೇಕು ಎಂದು ಹೇಳುತ್ತಾರೆಂದರೆ ನಾಳೆ ಎಪಿಎಂಸಿ ಬಿಲ್ ತರಬೇಕಾಗಿದೆ ಅದಕ್ಕೆ ಇವತ್ತು ಅವಸರ ಮಾಡುತ್ತಿದ್ದಾರೆ. ಇವತ್ತು ತೆಗೆದುಕೊಂಡು ಬನ್ನಿ ನೋಡೋಣ.

ಛೇರ್ಮನ್: ಮಾನ್ಯ ಬನ್ನಿಕೋಡ್‌ರವರೇ, ತಾವು ಮಾತನಾಡಿ 7-30 ರೊಳಗೆ ತಾವು ಮುಕ್ತಾಯ ಮಾಡಬೇಕು.

+ ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು): ಮಾನ್ಯ ಛೇರ್ಮನ್‌ರವರೆ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ 2001-2002ರ ಆಯವ್ಯಯವನ್ನು ಸ್ವಾಗತಿಸುತ್ತೇನೆ. ಇದರ ಮೇಲೆ ಅನೇಕ ಸದಸ್ಯರು ಮಾತನಾಡಿ ರಾಜಕೀಯವಾಗಿ ವಿಮರ್ಶೆ ಮಾಡುತ್ತಾ ಬಂದಿದ್ದಾರೆ. ಈ ರಾಜಕೀಯ ವಿಮರ್ಶೆ ಅದರಲ್ಲೂ ರೈತರು, ಗ್ರಾಮೀಣ ಭಾಗದಲ್ಲಿರುವ ಜನತೆಯ ವಿಚಾರದಲ್ಲಿ ಯಾವ ಕಾರ್ಯಕ್ರಮ ಈ ರಾಜ್ಯದಲ್ಲಿ ಇಲ್ಲಿಯವರೆವಿಗೂ ಇದ್ದಿಲ್ಲ ಅಂಥ ಕಾರ್ಯಕ್ರಮಗಳನ್ನು ಮೊಟ್ಟ ಮೊದಲ ಬಾರಿಗೆ ಪ್ರಾರಂಭಿಸಿದರೂ ಕೂಡ ಇದಕ್ಕೂ ಸಹಿತ ಟೀಕೆಗಳು ಬರುತ್ತಿವೆ. ಇಲ್ಲಿಯವರೆಗೆ ಆಡಳಿತ ನಡೆಸಿದಂಥವರಿಗೆ, ಹಳ್ಳಿಗಳಲ್ಲಿ ಹೊಲ ಗದ್ದೆಗಳಿಗೆ ಹೋಗುವ ರಸ್ತೆಗಳನ್ನು ಮಾಡುವುದಕ್ಕೆ ಹೇಳಿದರೆ, ಸರ್ಕಾರ ಏನಾದರೂ ಹೊಲಗದ್ದೆಗಳಿಗೆ ಹೋಗುವ ರಸ್ತೆಯನ್ನು ಮಾಡುತ್ತಾರೆಯೇ? ಬಸ್ ಓಡಾಡುವ ರಸ್ತೆಯನ್ನು ಮಾತ್ರ ಕೊಡುತ್ತೇವೆಂದು ಹೇಳುತ್ತಿದ್ದರು. ಹೊಲ ಗದ್ದೆಗಳಿಗೆ ಹೋಗುವ ರಸ್ತೆಗಳಿಗೆ ದುಡ್ಡು ಕೊಡುವುದಿಲ್ಲ ಎಂದು ಹೇಳಿದಂಥ ಜನರು, ಇವತ್ತು ರೈತರಿಗಾಗಿ ಹೊಲಗದ್ದೆಗಳಿಗೆ ಹೋಗುವ ರಸ್ತೆಗಳನ್ನು ಮಾಡುತ್ತೇವೆಂದು ಹೇಳಿದಾಗ ಟೀಕೆ ಮಾಡಿದರೆ ಹೇಗೆ? ಅವರು ಎಂದೂ ಈ ಬಗ್ಗೆ ಯೋಚಿಸಿರಲಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಟೀಕೆ ಮಾಡಲಿಲ್ಲ ಈಗ ನೀವು ಕೊಡುವ ಶೇಕಡ 60 ರಷ್ಟು ಹಣದ ಬದಲಿಗೆ ಪೂರ್ಣ ಹಣವನ್ನು ಕೊಡಿ ಎಂದು ಹೇಳಿದವು. 60 ಪರ್ಸೆಂಟ್ ಬೇಡ 100 ಪರ್ಸೆಂಟ್ ಕೊಡಿ ಎಂದು ಹೇಳಿದೆವು.

Sri P.G.R. Sindhia: More loyal than the king. ಮೊದಲ ಬಾರಿಗೆ ನಾವು ವಿರೋಧ ಪಕ್ಷದಲ್ಲಿದ್ದುಕೊಂಡು ಬಹಳ ಜವಾಬ್ದಾರಿಯಿಂದ ಮಾತನಾಡಿ, ಸರ್ಕಾರ ಅಲ್ಪಸ್ವಲ್ಪ ಮಾಡಿರುವ ಒಳ್ಳೆಯ ಕೆಲಸವನ್ನು ನಾವು ಸರಿಯಿದೆ ಇದನ್ನು ಮಾಡಿಕೊಂಡು ಹೋಗಿ ಎಂದು ಹೇಳಿದ್ದೇವೆ. ಇವರೇನು ಬಹಳ ದೊಡ್ಡದಾಗಿ ಹೇಳುತ್ತಿದ್ದಾರೆ? ಹಳ್ಳಿಗಳಲ್ಲಿ 40 ಪರ್ಸೆಂಟ್ ದುಡ್ಡು ಯಾರ ಕೊಡುತ್ತಾರೆ? ಪ್ರಾಮಾಣಿಕವಾಗಿ ಮಾತನಾಡೋಣ, ಸ್ವಚ್ಛ ಗ್ರಾಮಕ್ಕೆ ಗುತ್ತಿಗೆದಾರರು ದುಡ್ಡು ಕೊಟ್ಟಿದ್ದಾರೆ, ಈಗಾಗಲೇ ಚರ್ಚೆಯಾಗಿರುವಂತೆ ದುಡ್ಡು ಇರುವವರು ಮಾತ್ರ ಕೊಟ್ಟಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್: ಮಾನ್ಯ ಛೇರ್ಮನ್‌ರವರೆ, ನಾನು ಏನು ಹೇಳಿದೆನೆಂದರೆ, ಇಲ್ಲಿಯವರೆಗೆ ಇದರ ಬಗ್ಗೆ ಯೋಚಿಸಿರಲಿಲ್ಲ ಆದರೆ ಈ ಸರ್ಕಾರ ಇದರ ಬಗ್ಗೆ ಯೋಚಿಸಿ ಈ ಯೋಜನೆಗೆ ಚಾಲನೆ ನೀಡಿದೆ ಎಂದು ಹೇಳಿದೆ. ನಾನು ಇನ್ನು ಸರ್ಕಾರ 60 ಪರ್ಸೆಂಟ್

ಕೊಡುವ ಬಗ್ಗೆಯಾಗಲಿ, ರೈತರು 40 ಪರ್ಸೆಂಟ್ ಕೊಡುವ ಬಗ್ಗೆಯಾಗಲಿ, ಅಲ್ಲಿಗೆ ನಾನು ಬಂದಿರಲಿಲ್ಲ. ರೈತರ ಪರವಾಗಿರುವ ಈ ಕಾರ್ಯಕ್ರಮವನ್ನು ಸ್ವಾಗತಿಸಿ, ಪೂರ್ಣ ಹಣವನ್ನು ಸರ್ಕಾರವೇ ಕೊಡಬೇಕು ಎಂದು ನಾನು ಹೇಳುವಷ್ಟರಲ್ಲಿ ಇಷ್ಟೆಲ್ಲಾ ಆಯಿತು. ಎಲ್ಲಾ ರೈತರಿಗೂ ಅಷ್ಟು ಕೊಡುವಷ್ಟು ಶಕ್ತಿಯಿಲ್ಲ ಇನ್ನು ಪೂರ್ಣ ಹಣವನ್ನು ಸರ್ಕಾರ ಕೊಡಬೇಕು ಎನ್ನುವ ಸೂಚನೆ ಕೊಟ್ಟಿದ್ದಾರೆ. ಈ ದಿಶೆಯಲ್ಲಿ ಸರ್ಕಾರ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಇನ್ನು ಮುಂದೆ ಪೂರ್ಣ ಹಣವನ್ನು ರೈತರ ಹೊಲಗಳಿಗೆ ಹೋಗುವ ರಸ್ತೆಯನ್ನು ಮಾಡುವುದಕ್ಕೆ ಸರ್ಕಾರ ಕೊಡಲಿಕ್ಕೆ ನಾವೆಲ್ಲರೂ ಒತ್ತಾಯ ಮಾಡುತ್ತಿದ್ದೇವೆ ಸರ್ಕಾರ ಕೂಡ ಆ ದಿಶೆಯಲ್ಲಿ ಕಾರ್ಯಾಚರಣೆ ತರುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಬಯಸುತ್ತೇನೆ.

ಇನ್ನು ರೈತರ ಬೆಳೆದ ಬೆಳೆಗಳಿಗೆ ಲಾಭದಾಯಕವಾದ ಬೆಲೆಯನ್ನು ಕೊಡುವ ವಿಚಾರದಲ್ಲಿ ಇದುವರೆವಿಗೂ "ರೈತರ ಕಲ್ಯಾಣ ನಿಧಿ" ಯ ಬಗ್ಗೆ, ಈ ವಿಚಾರ ರಾಜ್ಯದಲ್ಲಿ ಇರಲಿಲ್ಲ. ಮೊಟ್ಟ ಮೊದಲಿಗೆ ಈ ಸರ್ಕಾರ ಈ ಕಾರ್ಯಕ್ರಮವನ್ನು ಹಾಕಿಕೊಂಡು 100 ಕೋಟಿ ರೂಪಾಯಿಗಳನ್ನು ಇದೇ ಉದ್ದೇಶಕ್ಕಾಗಿ ಬಳಸಲು "ಅವರ್ತ ನಿಧಿ" ಯನ್ನು ಸ್ಥಾಪಿಸಿತ್ತು. ಇದರಲ್ಲಿ ಎಷ್ಟು ಉಪಯೋಗವಾಗಿದೆ ಎಂಬುದರ ಬಗ್ಗೆ ಅನೇಕರು ಟೀಕೆ ಮಾಡಿದರು. ಆದರೆ, ಇಂಥ ರೈತರ ಪರವಾಗಿರುವ ಕಾರ್ಯಕ್ರಮ ಈ ವರ್ಷದಿಂದ ಪ್ರಾರಂಭವಾಗಿದ್ದು ಮುಂದಿನ ವರ್ಷಕ್ಕೆ 200 ಕೋಟಿ ಮತ್ತು 400 ಕೋಟಿ ರೂಪಾಯಿಗವರೆಗೆ ಗುರಿಯನ್ನು ಹೊಂದಿರತಕ್ಕಂಥದ್ದನ್ನು ನೋಡಿದರೆ, ಈ ಸರ್ಕಾರ ರೈತರ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ಆ ದಿಶೆಯಲ್ಲಿ ಮೊದಲ ಹೆಜ್ಜೆಯನ್ನು ಇಟ್ಟಿದೆ ಎಂದು ನಾನು ಹೇಳಲಿಚ್ಛಿಸುತ್ತೇನೆ. ಅದರ ಜೊತೆಗೆ ಇವತ್ತು ರಾಜ್ಯ ಸರ್ಕಾರ 200 ಕೋಟಿ ಅಥವಾ 400 ಕೋಟಿ ಏನು ಕೊಡುತ್ತದೆ, ಕೇಂದ್ರ ಸರ್ಕಾರವೂ ಕೂಡ ಅಷ್ಟೇ ಸಮಾನವಾದ ಹಣವನ್ನು ಇದಕ್ಕೆ ಸೇರಿಸಬೇಕೆನ್ನುವ ಸಲಹೆ ಬಜೆಟ್‌ನಲ್ಲಿದೆ. ಆದರೆ ನಾನು ಏನು ಹೇಳುತ್ತೇನೆಂದರೆ, ರಾಜ್ಯ ರೈತರಿಗೆ ಬೆಂಬಲ ಬೆಲೆಯಾಗಿ ಏನು 200 ಕೋಟಿ ರೂಪಾಯಿಗಳನ್ನು ಕೊಟ್ಟರೆ ಕೇಂದ್ರ ಸರ್ಕಾರ ಕನಿಷ್ಠ ಎರಡು ಪಟ್ಟು, 400 ಕೋಟಿ ರೂಪಾಯಿಗಳಾದರೂ ಕೊಡುವುದಕ್ಕೆ ಮುಂದೆ ಬರಬೇಕೆಂದು ಹಾಗೂ ಈ ಬೇಡಿಕೆಯನ್ನು ಸರ್ಕಾರ ಕೇಂದ್ರ ಸರ್ಕಾರದ ಮುಂದೆ ಇಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಪಡಿಸುತ್ತೇನೆ.

7.20 ಪಿ.ಎಂ.

ಇನ್ನು ಡಬ್ಲ್ಯೂಟಿಒ ಬಗ್ಗೆ ಹೇಳುವುದಾದರೆ ಈ ಒಂದು ವಾಣಿಜ್ಯ ಉದಾರೀಕರಣದಿಂದ ರೈತರುಗಳು ತಾವು ಬೆಳೆದಂತಹ ಬೆಳೆಗಳನ್ನು 3-3 ತಿಂಗಳುಗಳು ಏನಾಯಿತೆಂದರೆ ಎಪಿಎಂಸಿಯಲ್ಲಿ ತಂದು ಹಗಲು ರಾತ್ರಿ ಅದನ್ನು ಕಾಯಬೇಕಾದಂತಹ ಪರಿಸ್ಥಿತಿ ಬಂತು. ಈಗ ಆ ರೈತರುಗಳು ಬೆಳೆದಂತಹ ಗೋವಿನಜೋಳವನ್ನು ಎಕ್ಸ್‌ಪೋರ್ಟ್ ಮಾಡುವುದಕ್ಕೆ ಕೇಂದ್ರ ಸರ್ಕಾರವು ಅವಕಾಶವನ್ನು ಮಾಡಿಕೊಟ್ಟಿದೆ. ಬಹುತೇಕವಾಗಿ ಇದನ್ನು ಮೊದಲೇ ಮಾಡಿದ್ದರೆ ಈ ಸಮಸ್ಯೆಯು ಉದ್ಭವಿಸುತ್ತಿರಲಿಲ್ಲ. ಬೆಲೆಗಳು ಸಹ ಕಡಿಮೆಯಾಗುತ್ತಿರಲಿಲ್ಲವೆಂದು ನಾನು ಭಾವಿಸಿದ್ದೇನೆ. ಈ ಒಂದು ದಿಸೆಯಲ್ಲಿ ಕೇಂದ್ರದ ಆಮದು ಮತ್ತು ರಫ್ತು ನೀತಿ ರೈತರ ವಿರೋದಿ ಇದ್ದುದ್ದರಿಂದ

ಈ ಒಂದು ಸಮಸ್ಯೆಗೆ ಕಾರಣವಾಗಿದೆ. ಈ ಬಗ್ಗೆ ಮತ್ತು ರೈತರುಗಳು ಬೆಳೆದಂತಹ ಬೆಳೆಗಳಿಗೆ ಬೆಂಬಲ ಬೆಲೆಗೆ ಮತ್ತು ಲಾಭದಾಯಕವಾದ ಬೆಲೆಗೆ ಕೊಳ್ಳಬೇಕೆನ್ನುವ ವಿಚಾರವು ಸ್ವಾಗತಾರ್ಹವಾಗಿದೆ. ಈ ಅಗ್ಗ ಬೆಲೆ ಮತ್ತು ಮುಕ್ತ ಆಮದು ನೀತಿಯಿಂದ ರೈತರಿಗಾಗಿರುವ ಅನ್ಯಾಯದ ವಿಚಾರವನ್ನು ಕೃಷಿ ಉತ್ಪನ್ನಗಳ ಬೆಲೆಗಳು ಕುಸಿದಾಗ ಇದರ ಬಗ್ಗೆ ದೇಶದಲ್ಲಿ ವಿಚಾರವನ್ನು ಮಾಡಲಿಕ್ಕೆ ಸರ್ಕಾರವು ಬೆಲೆಗಳನ್ನು ನಿರ್ಧರಿಸುವ ಬಗ್ಗೆ ಒಂದು ವೈಜ್ಞಾನಿಕವಾಗಿ ಒಂದು ಆಯೋಗವನ್ನು ನೇಮಿಸುವಂತಹ ವಿಚಾರ ಬಹಳ ಸೂಕ್ತವಾಗಿರುತ್ತದೆ. ಇದು ವೈಜ್ಞಾನಿಕವಾಗಿ ರೈತರ ತನ್ನ ಬೆಳೆಗಳಿಗೆ ಖರ್ಚು ಮಾಡತಕ್ಕಂತಹ ಮತ್ತು ಉತ್ಪಾದನೆಗೆ ತೊಡಗಿಸತಕ್ಕಂತಹ ಹಣ ಮತ್ತು ಅವನಿಗೆ ಮಾರಾಟದಿಂದ ಬರಬೇಕಾದ ಹಣದ ಲೆಕ್ಕಾಚಾರವನ್ನು ವೈಜ್ಞಾನಿಕವಾಗಿ ಇವತ್ತು ಮಾಡಿಲ್ಲ. ವೈಜ್ಞಾನಿಕವಾಗಿ ಆ ಬೆಳೆಗಳಿಗೆ ಬೆಂಬಲ ಬೆಲೆ ಮತ್ತು ಲಾಭದಾಯಕವಾದ ಬೆಲೆಗಳ ಬಗ್ಗೆ ಈ ಒಂದು ಸಮಿತಿಯನ್ನು ನೇಮಿಸಿ, ಆಯೋಗವನ್ನು ನೇಮಿಸಿ ಬೆಂಬಲ ಬೆಲೆಯನ್ನು ಲಾಭದಾಯಕವಾದ ಬೆಲೆಯನ್ನು ನಿರ್ಧಾರ ಮಾಡುವುದಕ್ಕೆ ಒಂದು ವೈಜ್ಞಾನಿಕವಾದ ಸಲಹೆ ಮತ್ತು ಸೂಚನೆಗಳನ್ನು ವರದಿಯನ್ನು ತರಿಸಿ ರೈತ ಸಮುದಾಯಕ್ಕೆ ಮತ್ತು ಸದಸ್ಯರಿಗೆ ಕೊಟ್ಟರೆ ಪಕ್ಷಬೇಧವನ್ನು ಮರೆತು ಕೇಂದ್ರ ಸರ್ಕಾರವೇ ಇರಲಿ ಅಥವಾ ರಾಜ್ಯ ಸರ್ಕಾರವೇ ಇರಲಿ ಈ ಒಂದು ರೈತನ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಏನಾದರೊಂದು ಯೋಜನೆಯನ್ನು ಸಿದ್ದಮಾಡಲಿಕ್ಕೆ ಸಾಧ್ಯವೆನ್ನುವ ಮಾತನ್ನು ಹೇಳುತ್ತಿದ್ದೇನೆ. ಇನ್ನು ಉಗ್ರಾಣದ ಸಮಸ್ಯೆಯೂ ಈಗ ಗೊತ್ತಾಯಿತು, ಹಿಂದೆಂದೂ ಯಾವುದೇ ಒಂದು ಸರ್ಕಾರ ರೈತರ ಬೆಳೆದಂತಹ ಉತ್ಪಾದನೆಗಳನ್ನು ಇಷ್ಟೊಂದು ಹೆಚ್ಚಿನ ಪ್ರಮಾಣದಲ್ಲಿ ಖರೀದಿ ಮಾಡಿರತಕ್ಕಂಥದ್ದನ್ನು ನಾವು ಕಂಡಿಲ್ಲ. ಈ ವರ್ಷ ಆ ಸಮಸ್ಯೆಯು ಉದ್ಭವಿಸಿ, ಸರ್ಕಾರವು ಸಾಧ್ಯವಿದ್ದಷ್ಟು ಹೆಚ್ಚು ರೈತರಿಗೆ ಸಹಾಯವನ್ನು ಮಾಡಲಿಕ್ಕೆ, ಬೆಂಬಲ ಬೆಲೆಗೆ ಅದನ್ನು ಖರೀದಿ ಮಾಡಲಿಕ್ಕೆ ಪ್ರಯತ್ನವನ್ನು ಮೊಟ್ಟಮೊದಲ ಬಾರಿಗೆ ರಾಜ್ಯಸರ್ಕಾರವು ಮಾಡಿದೆ. ಇದರಲ್ಲಿ ಸಾಕಷ್ಟು ನ್ಯೂನ್ಯತೆಗಳು ಇವೆ, ಆಗ ಉಗ್ರಾಣಗಳು ಇರಲಿಲ್ಲ, ಅಧಿಕಾರಿಗಳಲ್ಲಿ ಒಬ್ಬರಿಗೊಬ್ಬರಿಗೆ ಸರಿಯಾದಂತಹ ಹೊಂದಾಣಿಕೆ ಇಲಾಖೆಗಳಲ್ಲಿ ಇರದೆ ಇದ್ದುದ್ದರಿಂದ ವಿಳಂಬವಾಗಿರಬಹುದು. ಆದರೆ ಅತೀ ಹೆಚ್ಚು ಖರೀದಿಯನ್ನು ಮಾಡಿ ತೊಂದರೆಯಲ್ಲಿದ್ದಂತಹ ರೈತರುಗಳಿಗೆ ಈ ಸರ್ಕಾರವು ಸಹಾಯವನ್ನು ಮಾಡಿದೆ. ಈ ಒಂದು ಉಗ್ರಾಣಗಳ ಅವಶ್ಯಕತೆಯನ್ನು ಕಂಡು 3.5 ಲಕ್ಷ ಟನ್ ಹೆಚ್ಚುವರಿ ಉಗ್ರಾಣಗಳನ್ನು ಕಟ್ಟಿಸಲಿಕ್ಕೆ ಸರ್ಕಾರವು ಮುಂದೆ ಬಂದಿದೆ. ಇದು ಇನ್ನೂ ಹೆಚ್ಚು ಆಗಬೇಕಾಗಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ. ಇವತ್ತು ಇಡೀ ದೇಶದಲ್ಲಿ ರೈತನು ಬೆಳೆಯತಕ್ಕಂತಹ ಬೆಳೆಗಳನ್ನು ಮಾತ್ರ ಬಜಾರ್‌ನಲ್ಲಿ ಹೋಗಿ ಕೊಳ್ಳತಕ್ಕಂತಹ ಮನುಷ್ಯ ಹರಾಜಿನಲ್ಲಿ ಕೇಳಿದಂತಹ ರೇಟಿಗೆ ಮಾರತಕ್ಕಂತಹ ವ್ಯವಸ್ಥೆಯಾಗಿದೆ. ಬೇರೆ ಎಲ್ಲಾ ಉತ್ಪಾದನೆಗಳು ಎಂದರೆ ಯಾವುದೇ ಇಂಡಸ್ಟ್ರೀಗಳು ಇರಲಿ, ಬೇರೆ ಯಾವುದೇ ವ್ಯಕ್ತಿ ಉತ್ಪಾದನೆ ಮಾಡಿದಂತಹ ವಸ್ತುಗಳು ಅವನು ತಾನು ಖರ್ಚು ಮಾಡಿದಂತಹ ಹಣವನ್ನು ತೆಗೆದು ಲಾಭವನ್ನು ಲೆಕ್ಕಾಚಾರ ಮಾಡಿ ಉತ್ಪಾದಕ ಲಾಭದಾಯಕವಾಗಿ ಮಾರಾಟ ಮಾಡತಕ್ಕಂತಹ ಹಕ್ಕು ಆದರ ಬೆಲೆಯನ್ನು ಕಟ್ಟತಕ್ಕಂತಹ ಹಕ್ಕು ಬೇರೆಯವರಿಗೆ ಇದೆ. ಆದರೆ ರೈತನಿಗೆ ಮಾತ್ರ ತಾನು ಉತ್ಪಾದನೆ ಮಾಡಿದಂತಹ ಬೆಳೆಗಳಿಗೆ ಬೆಲೆಯನ್ನು ಕಟ್ಟತಕ್ಕಂತಹ ಹಕ್ಕು ಈ ದೇಶದಲ್ಲಿ ಇನ್ನೂ

ಇಲ್ಲ. ಇವತ್ತು ಕೊಳ್ಳತಕ್ಕಂಥವನು ಕೇಳತಕ್ಕಂತಹ ಬೆಲೆಗೆ ಹರಾಜಿನಲ್ಲಿ ಕೊಡತಕ್ಕಂತಹ ದುರ್‌ವ್ಯವಸ್ಥೆ ಈ ದೇಶದಲ್ಲಿದೆ. ಇದು ಎಲ್ಲಿಯವರೆಗೆ ಹೋಗುವುದಿಲ್ಲವೋ ಅಲ್ಲಿಯವರೆವಿಗೂ ರೈತನ ಶೋಷಣೆಯೂ ನಿಲ್ಲುವುದಿಲ್ಲ. ಈ ದಿಸೆಯಲ್ಲಿ ನಾವುಗಳು ಪಕ್ಷಬೇಧವನ್ನು ಮರೆತು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬೇರೆ ಬೇರೆ ಸರ್ಕಾರಗಳು ಬೇರೆ ಬೇರೆಯ ಹಂತದಲ್ಲಿರಬಹುದು. ರೈತನನ್ನು ಇಲ್ಲಿಯವರೆಗೆ ರಾಜಕೀಯವಾಗಿ ನಂಬಿಸಿದ್ದರಿಂದ ಅವರುಗಳು ತಮ್ಮಲ್ಲಿ ವಿಶ್ವಾಸವನ್ನಿಟ್ಟುಕೊಂಡು ರಾಜಕೀಯ ಪಕ್ಷಗಳಿಗೆ ಬೆಂಬಲವನ್ನು ಕೊಟ್ಟರು. ಇವತ್ತು ರೈತನ ಬಗ್ಗೆ ಸಮಗ್ರವಾದಂತಹ ಚಿಂತನೆಯು ನಡೆಯಬೇಕಾಗಿದೆ, ಇಲ್ಲದೆಹೋದರೆ ರೈತ ತನ್ನ ಸಮಸ್ಯೆಗಳಿಗೆ ತಾನೇ ಉತ್ತರವನ್ನು ಕಂಡು ಹಿಡಿಯತಕ್ಕಂತಹ ಒಂದು ಪರ್ವಕಾಲ ಇನ್ನು ಬಹಳ ದೂರವಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಅಷ್ಟರೊಳಗಾಗಿ ಈ ಒಂದು ಸಮಸ್ಯೆಗೆ ಸ್ಪಂದಿಸಿ ಸರ್ಕಾರ ಕೈಗೊಂಡಂತಹ ಕಾರ್ಯಕ್ರಮಗಳು ಕೇಂದ್ರ ಸರ್ಕಾರವೂ ಸಹಿತ ಸ್ಪಂದಿಸಬೇಕು, ರೈತನು ಬೆಳೆದಂತಹ ಬೆಳೆಗಳಿಗೆ ಯೋಗ್ಯವಾದಂತಹ ಬೆಲೆಯು ಸಿಗುವಂತಹ ವ್ಯವಸ್ಥೆ ಆಗಬೇಕು, ಆ ದಿಸೆಯಲ್ಲಿ ಸರ್ಕಾರ ಹಾಕಿಕೊಂಡಂತಹ ಕಾರ್ಯಕ್ರಮ ಸ್ವಾಗತಾರ್ಹವೆನ್ನುವ ಮಾತನ್ನು ಸಹ ಹೇಳುತ್ತಿದ್ದೇನೆ. ಈ ಬಜೆಟ್‌ನಲ್ಲಿ ಕೃಷಿ ಉತ್ಪನ್ನಗಳ ಬೆಲೆ ಆಯೋಗವನ್ನು ರಚಿಸಬೇಕೆನ್ನುವ ವಿಚಾರ ಮಾನ್ಯ ಮುಖ್ಯಮಂತ್ರಿಗಳು ಏನು ಮುಂದಿಟ್ಟಿದ್ದಾರೆ ಅದು ಸೂಕ್ತವಾಗಿರುತ್ತದೆ. ಆ ಒಂದು ವರದಿಯು ವೈಜ್ಞಾನಿಕವಾಗಿ ಹೊರಬಂದಲ್ಲಿ ಅದರಲ್ಲಿ ರೈತ ಪ್ರತಿನಿಧಿಗಳನ್ನು ಸಹ ಸೇರಿಸಬೇಕು, ಕೇವಲ ಅಧಿಕಾರಿಗಳು ಮತ್ತು ತಜ್ಞರುಗಳು ಅಷ್ಟೇ ಅಲ್ಲ, ರೈತ ಪ್ರತಿನಿಧಿಗಳು ಆ ಆಯೋಗದಲ್ಲಿ ಇದ್ದರೆ ರೈತನಿಗೆ ಕನಿಷ್ಠಪಕ್ಷ ಮುಂದಿನ ವಿಚಾರಗಳಿಗೆ ಈ ಒಂದು ಯೋಗ್ಯವಾದಂತಹ ಬೆಲೆಯನ್ನು ಪಡೆಯಲಿಕ್ಕೆ ಅನುಕೂಲವಾಗುತ್ತದೆನ್ನುವ ಮಾತನ್ನು ಹೇಳುತ್ತಿದ್ದೇನೆ. ಇನ್ನು ರೈತನ ಮೇಲೆ ಬಡ್ಡಿಯನ್ನು ಎರಡು ಪರ್ಸೆಂಟ್ ಕಡಿಮೆ ಮಾಡುತ್ತೇವೆನ್ನುವ ಬಗ್ಗೆ ಬಹಳಷ್ಟು ಟೀಕಾಸ್ತ್ರಗಳು ಈ ಸದನದಲ್ಲಿ ಮೂಡಿಬಂತು. ಸರ್ಕಾರವು ಋಣವನ್ನು ಕೊಡುವಹಾಗಿಲ್ಲ, ಬಡ್ಡಿಯನ್ನು ಕಡಿಮೆ ಮಾಡುವುದಿಲ್ಲ, ಸಹಕಾರಿ ಸಂಘ ಸಂಸ್ಥೆಗಳ ಮೂಲಕ ಬ್ಯಾಂಕಿನ ಮೂಲಕ 100ಕ್ಕೆ ಎರಡರಷ್ಟು ಬಡ್ಡಿಯನ್ನು ಕಡಿಮೆ ಮಾಡುತ್ತೇವೆ ಎಂದು ಹೇಳಿರುವುದು ಸರಿಯೇ ಎನ್ನುವ ಪ್ರಶ್ನೆ ಇಲ್ಲಿ ಚರ್ಚೆಯಾಗುತ್ತಿದೆ. ನಾನು ಕರ್ನಾಟಕ ರಾಜ್ಯದ ಸಹಕಾರಿ ಅಪೆಕ್ಸ್ ಬ್ಯಾಂಕಿನ ಉಪಾಧ್ಯಕ್ಷನಾಗಿ ತನ್ಮೂಲಕ ಈ ಸದನಕ್ಕೆ ವಿಚಾರವನ್ನು ಸ್ಪಷ್ಟೀಕರಿಸಲಿಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇನೆ. ಇಲ್ಲಿ ಹೇಳಿರತಕ್ಕದ್ದು ಎರಡು ಪರ್ಸೆಂಟ್ ಬಡ್ಡಿ ಕಡಿಮೆ ಆಗಿಬಿಟ್ಟಿದೆ. ಈಗಾಗಲೇ ರೈತರು ಮಾಡಿರತಕ್ಕಂತಹ ಸಾಲದ ಮೇಲೆ ಎರಡು ಪರ್ಸೆಂಟ್ ಕಡಿಮೆ ಬಡ್ಡಿ ನಿರ್ಣಯ ಮಾಡಿದೆ ಎನ್ನುವ ವಿಚಾರವನ್ನು ಇಲ್ಲಿ ಚರ್ಚೆ ಮಾಡಿದೆವು, ಅದು ಆಗಿಲ್ಲ, ಇಲ್ಲಿ ಇರತಕ್ಕಂಥದ್ದು ಏನೆಂದರೆ 2001-2002ನೇ ಸಾಲಿನಲ್ಲಿ ಶೇಕಡ ಎರಡರಷ್ಟು ಬಡ್ಡಿಯನ್ನು ಕಡಿತಗೊಳಿಸಬೇಕೆಂದು ನಾನು ಸಹಕಾರಿ ಸಾಲ ಸಂಸ್ಥೆಗಳಿಗೆ ಸಲಹೆ ನೀಡುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು ಸಹಕಾರಿ ಸಂಘಸಂಸ್ಥೆಗಳಿಗೆ ಅಷ್ಟೇ ಅಲ್ಲ ಇದನ್ನು ಬೆಳೆ ಸಾಲ ಮತ್ತು ಅವಧಿ ಸಾಲದ ಬಡ್ಡಿ ದರವನ್ನು ಕಡಿಮೆ ಮಾಡಬೇಕೆಂದು ನಬಾರ್ಡ್ ಮತ್ತು ವಾಣಿಜ್ಯ ಬ್ಯಾಂಕುಗಳಿಗೆ ನಾನು ಮನವಿಯನ್ನು ಮಾಡಿಕೊಳ್ಳುತ್ತಲೇ ಬಂದಿದ್ದೇನೆ ಎನ್ನುವ ಮಾತನ್ನು ಬಜೆಟ್ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇವತ್ತು ವಾಣಿಜ್ಯ ಬ್ಯಾಂಕುಗಳೇ ಇರಲಿ, ಸಹಕಾರಿ

ಬ್ಯಾಂಕುಗಳೇ ಇರಲಿ, ಸಂಸ್ಥೆಯೇ ಇರಲಿ, ಅವರು ರೈತರಿಗೆ ಸಾಧ್ಯವಾದಷ್ಟು ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಕೊಡಬೇಕೆನ್ನುವಂತಹ ಯೋಜನೆಯನ್ನು ಪ್ರಾರಂಭ ಮಾಡಲಿ ಎಂದು ಹೇಳಿದ್ದಾರೆ. ವಾಣಿಜ್ಯ ಬ್ಯಾಂಕು, ಸಹಕಾರಿ ಬ್ಯಾಂಕುಗಳು ರೈತನಿಂದ ಹೆಚ್ಚಿನ ಬಡ್ಡಿಯನ್ನು ಪಡೆದು, ಲಾಭಾಂಶಗಳಿಗೆ ಹೆಚ್ಚು ರಿಯಿಯನ್ನು ಕೊಡದೆ, ಅದರ ಬಗ್ಗೆ ವಿಚಾರ ಮಾಡದೆ ಅವರ ಲಾಭಾಂಶವನ್ನು ಕಡಿಮೆ ಮಾಡಿಕೊಂಡು ಅವನಿಗೆ ಕಡಿಮೆ ಬಡ್ಡಿ ದರದಲ್ಲಿ ಮುಂದಿನ ವರ್ಷದಲ್ಲಿ ಕೊಡಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ಸಲಹೆಯನ್ನು ಕೊಟ್ಟಿದ್ದಾರೆಯೇ ವಿನಃ ಸರ್ಕಾರವೇನೂ ಘೋಷಣೆಯನ್ನು ಮಾಡಿರುವುದಿಲ್ಲ, ಆದೇಶವನ್ನೂ ಮಾಡಿರುವುದಿಲ್ಲ. ಈ ದಿಸೆಯಲ್ಲಿ ಅಪೆಕ್ಸ್ ಬ್ಯಾಂಕ್‌ನವರು ಈ ರಾಜ್ಯದ ಎಲ್ಲಾ ಜಿಲ್ಲಾ ಸಹಕಾರ ಬ್ಯಾಂಕುಗಳ ಅಧ್ಯಕ್ಷರನ್ನು ಮತ್ತು ಅಧಿಕಾರಿಗಳನ್ನು, ಸಹಕಾರಿ ಸಂಘಸಂಸ್ಥೆಗಳ ಧುರೀಣರನ್ನು ಕರೆದು ದಿಸೆಯಲ್ಲಿ ಎಷ್ಟರಮಟ್ಟಿಗೆ ಇದನ್ನು ಕಾರ್ಯಾಚರಣೆಗೆ ತರುವುದಕ್ಕೆ, ಸಾಧ್ಯವಾಗುತ್ತದೆ. ಯಾವ ಯಾವ ಸಂಸ್ಥೆಗಳು ಲಾಭಾಂಶದಲ್ಲಿದೆ, ಏನು ಮಾಡುವುದಕ್ಕೆ ಸಾಧ್ಯವಿದೆ ಮತ್ತು ನಾಬಾರ್ಡ್‌ನವರೂ ಸಹಿತ ರಿಸರ್ವ್ ಬ್ಯಾಂಕ್‌ನವರ ಸಹಿತ ಇದಕ್ಕೆ ಅನುಮತಿಯನ್ನು ಕೊಡಬೇಕೆನ್ನುವ ದಿಸೆಯಲ್ಲಿ ಚರ್ಚೆಯನ್ನು ಪ್ರಾರಂಭಿಸಿರುತ್ತೇವೆ. ಈ ಸಲಹೆಯ ಬಗ್ಗೆ ನಾವು ಒಂದು ತೀರ್ಮಾನಕ್ಕೆ ಬರಬೇಕು. ಇವತ್ತು ರಾಜ್ಯದ ಅಪೆಕ್ಸ್ ಬ್ಯಾಂಕ್‌ಗೆ ನಬಾರ್ಡ್‌ನಿಂದ 4-5 ರೂಪಾಯಿ ಬಡ್ಡಿಯಲ್ಲಿ ಬರುತ್ತದೆ. ಇವರು 10 ರಿಂದ 12 ರೂಪಾಯಿ ಬಡ್ಡಿಗೆ ಕೊಡುತ್ತಾರೆನ್ನುವ ಭಾವನೆ ಏನಿದೆ ಅದು ಸರಿಯಲ್ಲ. ನಾಲ್ಕೂವರೆ ರೂಪಾಯಿಗಳಿಂದ ಹಿಡಿದು ಒಂಭತ್ತೂವರೆ ರೂಪಾಯಿಗಳವರೆಗೆ ಬೇರೆ ಬೇರೆ ಸಾಲದ ಮೇಲೆ ಬೇರೆ ಬೇರೆ ರೀತಿಯಲ್ಲಿ ನಬಾರ್ಡ್‌ನವರು ಬಡ್ಡಿಯನ್ನು ತೆಗೆದುಕೊಳ್ಳುತ್ತಾರೆ. ಅಪೆಕ್ಸ್ ಬ್ಯಾಂಕಿನವರು ಕೇವಲ 0.40 ಪರ್ಸೆಂಟ್ ಅಂದರೆ ಕೇವಲ 40 ಪೈಸೆಯನ್ನು ಮಾತ್ರ ಬಡ್ಡಿಯನ್ನು ತನ್ನ ಪಾಲಿಗೆ ಉಳಿಸಿಕೊಳ್ಳುತ್ತದೆ. ಉಳಿದದ್ದು ಎಲ್ಲಾ ಜಿಲ್ಲಾ ಕೇಂದ್ರ ಬ್ಯಾಂಕಿಗೆ ಹಳ್ಳಿಗಳ ವ್ಯವಸಾಯ ಸಹಕಾರ ಸಂಘಗಳಿಗೆ ರೈತರಿಗೆ ಹೆಚ್ಚಿನ ಲಾಭಾಂಶವನ್ನು ಕೊಡುತ್ತೇವೆನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಂತರ ಶಾಸಕರ ಪ್ರದೇಶಾಭಿವೃದ್ಧಿ ನಿಧಿ ಬಗ್ಗೆ ಬಹುತೇಕ ಅನೇಕ ಸದಸ್ಯರುಗಳ ವಿಚಾರಗಳು ಬಂದಿದೆ. ಮಲನಾಡು ಅಭಿವೃದ್ಧಿ ಮಂಡಳಿ, ಬಯಲುಸೀಮೆ ಅಭಿವೃದ್ಧಿ ಮಂಡಳಿ, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಇಂತಹ ಅನೇಕ ಮಂಡಳಿಗಳನ್ನು ಮಾಡಿದ್ದಾರೆ. ಇವತ್ತು ಹಣವನ್ನು ಯಾವ ರೀತಿ ಕ್ರೋಢೀಕರಿಸಬೇಕು ವೆಚ್ಚವನ್ನು ಹೇಗೆ ಕಡಿಮೆ ಮಾಡಬೇಕೆನ್ನುವ ಬಗ್ಗೆ ಚಿಂತನೆ ನಡೆದಿದೆ. ಈ ಮಂಡಳಿಗಳನ್ನು ರದ್ದುಪಡಿಸಿ ಮುಖ್ಯ ಮಂತ್ರಿಗಳು ಒಬ್ಬ ಶಾಸಕರಿಗೆ ಏನು 25 ಲಕ್ಷ ರೂಪಾಯಿ ಅಭಿವೃದ್ಧಿ ನಿಧಿ ಕೊಟ್ಟಿದ್ದಾರೆ ಅದನ್ನು ಕನಿಷ್ಟ 50 ಲಕ್ಷಕ್ಕೆ ರೂ.ಗಳಿಗೆ ಏರಿಸಿ. ಮಂಡಳಿಗಳನ್ನು ತೆಗೆದರೆ ಸರ್ಕಾರದ ವೆಚ್ಚ ಕಡಿಮೆಯಾಗುತ್ತದೆನ್ನುವ ಸಲಹೆಯನ್ನು ಸರ್ಕಾರಕ್ಕೆ ಕೊಟ್ಟು ನಾನು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎ.ಎಸ್. **ಗುರುಸ್ವಾಮಿ** (ಚಾಮುಂಡೇಶ್ವರಿ): ಮಾನ್ಯ ಸಭಾಧ್ಯಕ್ಷರೆ, ಅಂತೂ ಇಂತೂ ಕೊನೆಗೆ ನಮ್ಮಗಳ ಬಗ್ಗೆ ಸ್ವಲ್ಪ ಕನಿಕರ ಬಂತು.

ಛೇರ್ಮನ್: ಮಾನ್ಯ ಗುರುಸ್ವಾಮಿಯವರು ನೇರವಾಗಿ ವಿಷಯಕ್ಕೆ ಬನ್ನಿ 15 ನಿಮಿಷದಲ್ಲಿ ಮುಗಿಸಿ.

ಶ್ರೀ ಎ.ಎಸ್. ಗುರಸ್ವಾಮಿ: ಮಾನ್ಯ ಅಧ್ಯಕ್ಷರು ಪೀಠದಲ್ಲಿದ್ದಂತಹ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. ಏನು ಹೇಳಿದರು ಅಂದರೆ, ಏನ್ರಿ ಎಲ್ಲಾ ಸೀನಿಯರ್ಸ್ ಮಾತನಾಡಿದರೆ ಹೊಸದಾಗಿ ಆಯ್ಕೆಯಾಗಿ ಬಂದಿರುವವರು ಕಲಿಯಬೇಡವೇ, ಅವರು ಮಾತನಾಡಬಾರದೇ ಎಂದು ಹೇಳಿದರು.

ಛೇರ್ಮನ್: ತಾವು ನೇರವಾಗಿ ವಿಷಯಕ್ಕೆ ಬಂದರೆ ತಮಗೆ ಸಮಯ ಉಳಿಯುತ್ತದೆ.

ಶ್ರೀ ಎ.ಎಸ್. ಗುರುಸ್ವಾಮಿ: ತಾವು ನಾನು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ಏನು ನಮ್ಮ ನಾಯಕರಾದ ಶ್ರೀಮಾನ್ ಎಸ್.ಎಂ. ಕೃಷ್ಣಾ ರವರು ಅವರ ನೇತೃತ್ವದಲ್ಲಿರತಕ್ಕ ನಮ್ಮ ಪಕ್ಷದ ಸರ್ಕಾರ ಈಗಿರತಕ್ಕ ಪರಿಸ್ಥಿತಿಯಲ್ಲಿ ಇವತ್ತಿನ ಸಂದರ್ಭಕ್ಕನುಗುಣವಾಗಿ ಹಲವಾರು ಪ್ರಗತಿಪರ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಬಹಳ ವರ್ಷಗಳಿಂದ ಬೇಕಾದಷ್ಟು ಪರಿಸ್ಥಿತಿಗಳು ನಮ್ಮ ಜೊತೆಯಲ್ಲಿ ಬಂದಿವೆ. ನಮ್ಮ ನಾಯಕರು ಬಹಳ ಎಕ್ಸರ್ಸೈಜ್ ಮಾಡಿ ಆದಷ್ಟು ಒಳ್ಳೆಯ ಚೊಕ್ಕದಾದ ಬಜೆಟನ್ನು ಇಟ್ಟಿದ್ದಾರೆ. ಇಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದು ನಾನು ಒಬ್ಬನೇ ಹೇಳುವ ಮಾತಲ್ಲ. ಈ ಮಾತನ್ನು ಬಜೆಟ್ ಪ್ರಸೆಂಟ್ ಮಾಡಿದ ನೆಕ್ಸ್ಟ್ ಡೇ ಪತ್ರಿಕೆಗಳನ್ನು ನನ್ನ ಮಿತ್ರರು ಯಾರಾದರೂ ಓದಿದ್ದರೆ ಬಹುಶಃ ತಮಗೆ ಗೊತ್ತಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ: ಈ ಬಜೆಟ್‌ನಲ್ಲಿ ಏನಿದೆಯೆಂದು ಮುಂದಿನ ವರ್ಷ ಗೊತ್ತಾಗುತ್ತದೆ. ಓದುವುದಕ್ಕೆ ಬಹಳ ಚೆನ್ನಾಗಿದೆ. ಮುಂದಿನ ವರ್ಷ ಗೊತ್ತಾಗುತ್ತದೆ ಇದರಲ್ಲಿ ಏನಿದೆಯೆಂದು.

ಶ್ರೀ ಎ.ಎಸ್. ಗುರುಸ್ವಾಮಿ: ಮಾನ್ಯ ಅಧ್ಯಕ್ಷರೆ, ಇದು ನಾನು ಹೇಳವಂತಹ ಮಾತಲ್ಲ. ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಪ್ರಸೆಂಟ್ ಮಾಡಿದ ನೆಕ್ಸ್ಟ್ ಡೇ ಪತ್ರಿಕೆಗಳಲ್ಲಿ ಎಡಿಟೋರಿಯಲ್ ಕವರೇಜ್ ಬಂತು, ಕಾಮೆಂಟ್ಸ್ ಬಂತು. ಎಡಿಟೋರಿಯಲ್ ಕವರೇಟ್ ಕಾಮೆಂಟ್ಸ್ ಬಂತಲ್ಲಾ ಅದರ ಬಗ್ಗೆ ನನ್ನ ಮಿತ್ರರು ಗ್ಲಾನ್ಸ್ ಮಾಡಿದ್ದರೆ ಬಹುಶಃ ಪತ್ರಿಕೆಯವರು ಏತಕ್ಕೆ ಬರೆದರು ಎನ್ನತಕ್ಕದ್ದನ್ನು ಅರ್ಥಮಾಡಿಕೊಳ್ಳಬಹುದುದೆಂದು ನನ್ನದೊಂದು ಸಲಹೆ. ಒಂದು ಪತ್ರಿಕೆಯ ಎಡಿಟೋರಿಯಲ್‌ನಲ್ಲಿ ಹೇಳುವಂತಹದ್ದು ಆಶಾದಾಯಕ ಮತ್ತು ಭರವಸೆಯನ್ನು ಮೂಡಿಸತಕ್ಕ ಬಜೆಟ್ ಎಂದು. ಇನ್ನೊಂದರಲ್ಲಿ ಜನ ಕಲ್ಯಾಣ ಅಭಿವೃದ್ಧಿಗೆ ಪೂರಕವಾದ ಬಜೆಟ್ ಎಂದು. ಇನ್ನೊಂದು ಪತ್ರಿಕೆಯಲ್ಲಿ ಹೇಳುತ್ತಾರೆ ರಾಜಕೀಯ ಪೂರಕ ಸಿದ್ಧಾಂತವಾಗಿರತಕ್ಕ ಬಜೆಟ್ ಎನ್ನತಕ್ಕ ಮಾತನ್ನು ಹೇಳುತ್ತಾರೆ. ಮತ್ತೊಂದು ಪತ್ರಿಕೆಯಲ್ಲಿ ಬಡತನ ಮತ್ತು ದುರ್ಬಲ ವರ್ಗದ ಮಹಿಳೆಯರಿಗೆ ಒತ್ತನ್ನು ಕೊಟ್ಟಿರತಕ್ಕ ಪ್ರಥಮ ಬಜೆಟ್ ಎನ್ನುವ ಮಾತು ಪತ್ರಿಕೆಯಲ್ಲಿ ಬಂದಿದೆ. ಈ ಬಜೆಟ್‌ನ್ನು ನಾನು ಸ್ವಾಗತ ಮಾಡುತ್ತಾ, ಏನು ಸರ್ಕಾರ ಈ ಬಜೆಟ್‌ನ್ನು ಮಂಡಿಸಿದೆ ಅದನ್ನು ವೈಯಕ್ತಿಕವಾಗಿ ಇವತ್ತಿನ ಪರಿಸ್ಥಿತಿಯಲ್ಲಿ ಸ್ವಾಗತಿಸುತ್ತೇನೆ. ನಮ್ಮ ದೇಶದಲ್ಲಿ ಬಜೆಟ್ ತಯಾರು ಮಾಡತಕ್ಕದ್ದು ದೊಡ್ಡ ಕಸರತ್ತು. ಬೇರೆ ಕಮ್ಯುನಿಸ್ಟ್ ದೇಶದಲ್ಲಿ ಬಜೆಟ್ ತಯಾರು ಮಾಡಬೇಕಾದರೆ ಅಲ್ಲಿರತಕ್ಕದ್ದು ಎರಡೇ ವರ್ಗ. ಒಂದು ದುಡಿಯತಕ್ಕ ವರ್ಗ, ಇನ್ನೊಂದು ದುಡಿಸಿಕೊಳ್ಳತಕ್ಕ ವರ್ಗ. ನಮ್ಮ

ದೇಶದಲ್ಲಿರತಕ್ಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ವರ್ಗಗಳು ಬೇಕಾದಷ್ಟು, ಹಿತಾಸಕ್ತಿಗಳ ವರ್ಗಗಳಿವೆ. ಬಿನ್ನಾಭಿಪ್ರಾಯಗಳಿವೆ. ಇವೆಲ್ಲರೂ ನಾವು ಮೆಚ್ಚುವಂತಹ ಆದಷ್ಟು ಸತ್ಯಕ್ಕೆ ಹತ್ತಿರವಾಗಿರತಕ್ಕ ಬಜೆಟನ್ನು ಪ್ರಸೆಂಟ್ ಮಾಡಿರತಕ್ಕದ್ದು ಬಹಳ ಮಹತ್ತರವಾದ ಕಸರತ್ತು. ಈ ಕಸರತ್ತನ್ನು ಮಾನ್ಯ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ನಡೆಸಿದ್ದಾರೆಂದು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಒಂದು ಪ್ರಶ್ನೆ ಏನು ನಮ್ಮ ಮುಂದೆ ನಿಲ್ಲುತ್ತದೆಂದರೆ ಯಾವುದೇ ಬಜೆಟ್ ಆಗಲಿ, a budget is nothing but an economic thought. ಬರೀ ರಾಜಕಾರಣಕ್ಕೋಸ್ಕರ ಬಜೆಟನ್ನು ಮಾಡುವುದಕ್ಕೆ ಹೊರಟಾಗ ಅದು ಯದ್ವಾತದ್ವ ಎಡಕ್ಕೆ ಬಲಕ್ಕೆ ಆಡಿಕೊಂಡು ಯಾವ ಗುರಿಯನ್ನು ತಲುಪುವುದಿಲ್ಲ. ನಮ್ಮ ಬಜೆಟ್ ಏನಿದೆ ಅದಕ್ಕೊಂದು ಗುರಿಯಿದೆ. ಒಂದು ಪೊಲಿಟಿಕಲ್ ಕಮಿಟ್‌ಮೆಂಟ್ ಇದೆ. ನನ್ನ ಅನೇಕ ಜನ ಸ್ನೇಹಿತರು ಬಹಳಷ್ಟು ಜನ ನಿನ್ನೆ ಮೊನ್ನೆ ಮಾಡಿದಂತಹ ಸಲಹೆಗಳನ್ನು ನಾನು ಕೇಳಿದ್ದೇನೆ. ಕೆಲವರು ಬಹಳ ಸ್ವಾಗತ ಮಾಡಿದ್ದಾರೆ. ಎಲ್ಲವನ್ನೂ ಹೋಲ್‌ಸೇಲ್ ಒಪ್ಪುವುದಿಲ್ಲ ಸರ್ಕಾರ ಮಾಡಿರುವುದು ತಪ್ಪು ಇದು ಒಳ್ಳೆಯ ಬಜೆಟ್ ಅಲ್ಲವೆನ್ನುವ ಮಾತನ್ನು ಯಾರೂ ಹೇಳಲಿಲ್ಲ. ಸರಿ ಇರುವುದನ್ನು ಸರಿಯೆಂದು ಹೇಳಿದ್ದಾರೆ. ಸರಿಯಿಲ್ಲದ ಕಡೆ ಅವರ ಭಿನ್ನಾಭಿಪ್ರಾಯ ಹೇಳಿದ್ದಾರೆ. ಅದರಲ್ಲಿ ವಿಶೇಷವಾಗಿ ಮಾನ್ಯ ಸಿಂಧ್ಯಾರವರು ಮತ್ತು ಅನೇಕ ಮಿತ್ರರು ಬಹಳ ಮೆಚ್ಯೂರ್ಡ್, ಅವರುಗಳು ಕೆಲವು ವಿಚಾರಗಳನ್ನು ಹೇಳಿದ್ದು ನನಗೆ ಸ್ವಲ್ಪ ಹಿಡಿದಿದೆ. ಬಜೆಟ್ ಡಿಸ್‌ಕಷನ್ ಆಗಬೇಕು. ಅವರು ಸರ್ಕಾರದಲ್ಲಿದ್ದಂತಹ ಸಂದರ್ಭದಲ್ಲಿ ಅವರೂ ಕೂಡ ಬಜೆಟ್ ಪ್ರೆಸೆಂಟ್ ಮಾಡಿದ್ದಾರೆ. ಬಜೆಟ್ ಪರವಾಗಿ ಮಾತನಾಡಿದ್ದಾರೆ. ಅವರಿಗೆ ಸರ್ಕಾರ ಹೇಗೆ ನಡೆಯುತ್ತದೆ ಎನ್ನುವುದು ಗೊತ್ತು. Sector of Government ಅದೆಲ್ಲ ಗೊತ್ತಿದ್ದರೂ ಸಹ ನಮ್ಮ ಸರ್ಕಾರದ ಮೇಲೆ ಇಷ್ಟೊಂದು ಟೀಕಾಸ್ತ್ರ ಬಿಟ್ಟರು. ಏಕೆ ಅವರ ಅನುಭವ ಎಲ್ಲಿ ಹೋಯಿತು? ಹಿರಿಯರು ಒಂದು ಮಾತು ಹೇಳುತ್ತಾರೆ, ಅದೇನೆಂದರೆ, ವಯಸ್ಸಾದ ಮೇಲೆ ಗಂಡ ಹೆಂಡತಿ ಬೆತ್ತಲೆಯಾಗುತ್ತಾರೆ, ಏಕೆಂದರೆ ಅವರು ಎಲ್ಲಾ ನೋಡಿರುತ್ತಾರೆ. ಅವರಿಗೆ ಎಲ್ಲಾ ನೋವು ಗೊತ್ತಿರುತ್ತದೆ. ಗೊತ್ತಿದ್ದು ಅವರು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಮದುವೆ ಮನೆಗೆ ಹೋದರೆ ವಯಸ್ಸಾದ ಗಂಡಸರು ಹೆಂಗಸರು ಸುಮ್ಮನೆ ಕುಳಿತಿರುತ್ತಾರೆ. ಹೊಸ ಮದುವೆಯಾದವರದ್ದು ಚುರುಕು ಓಡಾಟ. ನನ್ನ ಬಲಗಡೆ ಇರತಕ್ಕ ಸ್ನೇಹಿತರು ಐದಾರು ವರ್ಷ ಮಂತ್ರಿಗಳಾಗಿ ಸರ್ಕಾರದ ಗುಟ್ಟು ಗೊತ್ತು ಅವರಿಗೆ. ಸರ್ಕಾರ ನಡೆಸುವ ಟೆಕ್ನಿಕ್ ಮನಸ್ಸು ನೋಯುತ್ತದೆ. ನಮ್ಮ ಮುಖ್ಯಮಂತ್ರಿಗಳು ನಮ್ಮ ಹಾಗೆ ಬಹಳ ಓದಿದವರು, ವಿಚಾರವಂತರು ಚಿಂತನಾ ಪೂರಕವಾಗಿರತಕ್ಕ ವಿಚಾರಗಳನ್ನು ಬಜೆಟ್‌ನಲ್ಲಿ ಸೇರಿಸುವುದಕ್ಕೆ ಸರ್ವ ಪ್ರಯತ್ನ ಮಾಡಿದ್ದಾರೆ. ಇದರಲ್ಲಿ ಎರಡು ಮಾತಿಲ್ಲ. ಕೆಲವು ಕಡೆ ಕೆಲವು ತಪ್ಪುಗಳಾಗಿವೆ. ಇಲ್ಲವೆಂದು ಇಲ್ಲ. ಅದನ್ನು ಸರಿಪಡಿಸಿಕೊಳ್ಳಬೇಕು. ನಮ್ಮ ಬೆನ್ನು ನಮಗೆ ಕಾಣುವುದಿಲ್ಲ, ಅವರು ನಮಗೆ ಹೇಳಲಿ ಸರಿಪಡಿಸಿಕೊಳ್ಳುತ್ತೇವೆ. ನನ್ನ ಮಿತ್ರರೊಬ್ಬರು ಈ ಬಜೆಟ್‌ನಲ್ಲಿ 286 ಕೋಟಿ ರೂಪಾಯಿ ಖೋತಾ ಇದೆಯೆನ್ನುವ ಮಾತನ್ನು ಹೇಳಿದರು. ಇದನ್ನು ಹೇಗೆ ಮುಚ್ಚುತ್ತೀರಿ ನಿಮ್ಮ ಹತ್ತಿರ ದುಡ್ಡು ಎಲ್ಲಿದೆ ಎನ್ನತಕ್ಕ ಪ್ರಶ್ನೆಯನ್ನು ಹಾಕಿದರು. ಈ ಕೊರತೆಯನ್ನು ನೀವು ಸರಿದೂಗಿಸದಿದ್ದರೆ ಮುಂದಿನ ಸಲ ಬಹಳ ಕೊರತೆ ಬರುತ್ತದೆನ್ನುವ ಮಾತನ್ನು ಹೇಳಿದರು. ಬೆಲೆಗಳು ಜಾಸ್ತಿಯಾಗುತ್ತದೆನ್ನುವ ಮಾತನ್ನು ಹೇಳಿದರು. ಅದು ಸತ್ಯ. ಆ ಮಾತನ್ನು ನಾವಾದರೂ ಒಪ್ಪಬೇಕು ನೀವಾದರೂ ಒಪ್ಪಬೇಕು. ಯಾರೂ

ವ್ಯತ್ಯಾಸ ಮಾಡುವುದಕ್ಕೆ ಬರುವುದಿಲ್ಲ. ಎಕಾನಮಿಕ್ ಈಸ್ ಎಕಾನಮಿಕ್. ಒನ್ ಪ್ಲಸ್ ಒನ್ ಟು. ಟು ಮೈನಸ್ ಒನ್ ಒನ್. ನಾವಾಗಲೀ ನೀವಾಗಲೀ ಬದಲಾವಣೆ ಮಾಡುವುದಕ್ಕೆ ಬರುವುದಿಲ್ಲ. ಇದು ಪಗಡೆಯಾಟ. ನಮ್ಮ ರಾಜಕೀಯ ಆಟ. ನಾವು ನೋಡಿದ ಹಾಗೆ ನನಗಿಂತ ಬಹಳ ಹಿರಿಯರು ಇಲ್ಲಿದ್ದಾರೆ. ತಿಳಿದವರು ಇದ್ದಾರೆ. ನಿಮಗೂ ಗೊತ್ತು ಇದು ಪಗಡೆಯಾಟವೆಂದು. ಫಿಗರ್ಸ್ ಅಲ್ಲಿಡುತ್ತೇವೆ ಇಲ್ಲಿಡುತ್ತೇವೆ. ಕಳೆದ ಸರ್ಕಾರ ಕೆಲವು ಯೋಜನೆಗಳನ್ನು ಜಾರಿಗೆ ತಂದಿದ್ದರು. ನಾವೂ ಕೂಡ ಏಳು ಹೊಸ ಯೋಜನೆಗಳನ್ನು ತಂದಿದ್ದೇವೆ. ಅದಕ್ಕೆ ಬೇರೆ ಬೇರೆ ಹೆಸರುಗಳಿವೆ. ಅದೇ ಸಬ್ಜೆಕ್ಟ್ ಹೆಸರು ಬೇರೆ ಬೇರೆ ಇರುತ್ತದೆ. ಆದರೆ ಏನೂ ಮಾಡುವುದಕ್ಕೆ ಬರುವುದಿಲ್ಲ ಇಂಡಿಯನ್ ಕಂಡೀಷನ್‌ನಲ್ಲಿ. ನಮ್ಮ ದೇಶದ ಪರಿಸ್ಥಿತಿಯಲ್ಲಿ, ನನ್ನ ಅನುಭವದಲ್ಲಿ ಯಾವುದೇ ಬಜೆಟ್ ರಾಷ್ಟ್ರಾದ್ಯಂತ, ಇವತ್ತು ಸ್ಟ್ಯಾಟಿಕ್ ಆಗಿ ಯಾರೂ ಕೂಡ, ಇಂಥಾದ್ದೇ ಫಿಗರ್ಸ್ ಕೊಟ್ಟು ರನ್ ಮಾಡುತ್ತೇವೆ ಎನ್ನತಕ್ಕದ್ದು ಮಾಡುವುದಕ್ಕೆ ಸಾಧ್ಯವೇ ಇಲ್ಲ. ಇದಕ್ಕೆ ಕಾರಣ ಏನೆಂದರೆ we are subjected to external forces. ನಮಗೆ ಕಂಟ್ರೋಲ್ ಇರತಕ್ಕಂಥ ಕೆಲವು ಶಕ್ತಿಗಳು ನಮ್ಮ ಸರ್ಕಾರದ ಮೇಲೆಯಾಗಲೀ ಅಥವಾ ನಮ್ಮ ಮೇಲಾಗಲೀ ಅವು ಆಪರೇಟ್ ಮಾಡುತ್ತಲೇ ಇರುತ್ತವೆ. ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಏಕೆ ನಮ್ಮ ಬಜೆಟ್ ಹಿಂದೆ-ಮುಂದೆ ಆಗುತ್ತದೆ ಎಂದರೆ, ಈಗ ಡಬ್ಲ್ಯೂ.ಟಿ.ಓ. ಪರಿಣಾಮ ಎಲ್ಲಿಗೆ ಹೋಯಿತು ಎಂದರೆ ಇದು ನಾವೇನೂ ಸ್ವಾಗತ ಮಾಡಿಲ್ಲ. ಇದು ಯಾರೋ ಮಾಡಿದ ಅಗ್ರಿಮೆಂಟ್. ಇದರ ಪರಿಣಾಮ ಇಡೀ ದೇಶದ ಮೇಲೆ ಬರುತ್ತದೆ. ಬ್ಯಾಲೆನ್ಸ್ ಅಮೌಂಟ್ ಇಡಬೇಕಾದಂಥ, ಆವರ್ತ ಹಣವನ್ನು ಇಡಬೇಕಾದ ಪರಿಸ್ಥಿತಿ ಬಂತು. ಸೆಂಟ್ರಲ್ ಮತ್ತು ಸ್ಟೇಟ್ ರಿಲೇಶನ್‌ಶಿಫ್ ನಮ್ಮ ದೇಶದಲ್ಲಿ ಇನ್ನೂ ಕ್ಲಿಯರ್‌ಕಟ್ ಆಗಿ ಡಿಫೈನ್ ಆಗಿಲ್ಲ. ಪ್ರತಿ ರಾಜ್ಯಕ್ಕೆ ಇಷ್ಟು ಅಧಿಕಾರ ಇರಬೇಕು, ಅದರ ಜವಾಬ್ದಾರಿ ಇಷ್ಟು ಇರಬೇಕು ಎಂದು ಇನ್ನೂ ಕೂಡ ತೀರ್ಮಾನವಾಗಿಲ್ಲ. Principles of Federalism ಇದರ ಬಗ್ಗೆ ಯಾರು ಯೋಚನೆ ಮಾಡುತ್ತಾರೆ? ಇನ್ನೂ ಕೂಡ ಇದನ್ನು ತೀರ್ಮಾನ ಮಾಡಿಲ್ಲ. ಇವತ್ತು ದೊಡ್ಡಣ್ಣ ಆಳುತ್ತಾ ಇದ್ದಾನೆ ಮತ್ತು ಈ ಕೊನೆಯ ಅಣ್ಣ ತೊಂದರೆ ಪಡುತ್ತಲೇ ಇದ್ದಾನೆ ಎಂದರೆ ನಮ್ಮ ರಾಜ್ಯ ಸರ್ಕಾರ ತೊಂದರೆ ಪಡುತ್ತಿದೆ. ದೊಡ್ಡಣ್ಣ ಆಳುತ್ತಾ ಇದ್ದಾನೆ. ದೊಡ್ಡಣ್ಣನ ಮಾತಿಗೆ ವಿರುದ್ಧವಾಗಿ ನಾವು ನಡೆಯುವುದಕ್ಕೆ ಆಗುವುದಿಲ್ಲ. ಇವತ್ತು ಆಲ್‌ಇಂಡಿಯಾ ಲೆವಲ್‌ನಲ್ಲಿ ಒಂದು Agricultural Prices Fixation Commission, ಎಂದು ಮಾಡಿದ್ದಾರೆ. ಇವರು ಅಲ್ಲಿ ಏನೋ ಫಿಕ್ಸ್ ಮಾಡಿದ್ದು ಅದು ಎಲ್ಲೆಲ್ಲೋ ಪರಿಣಾಮ ಬೀರಿಬಿಡುತ್ತದೆ. ನಮ್ಮ ಕರ್ನಾಟಕದಲ್ಲಿ ಇರುವಂಥ ಪರಿಸ್ಥಿತಿ ಬೇರೆ. ಇದರ ಬಗ್ಗೆ ಯಾರು ಚಿಂತನೆ ಮಾಡುತ್ತಾರೆ? ದೊಡ್ಡಣ್ಣ ಹೇಳುತ್ತಾನೆ, ಅದರಂತೆ ಮಾಡುತ್ತಾನೆ. ಈ ಚಿಕ್ಕಣ್ಣ ಅಳುತ್ತಾ ಕುಳಿತುಕೊಂಡಿರುತ್ತಾನೆ. ಈ ಪರಿಸ್ಥಿತಿಯಲ್ಲಿ ನಮ್ಮ ಬಜೆಟ್‌ಗಳು ಅನೇಕ ಸಲ ಸ್ವಲ್ಪ ಅಲ್ಲಾಡುತ್ತವೆ, ಇಲ್ಲ ಎಂದು ಅಲ್ಲ. ಸ್ವಲ್ಪ ಹಿಂದುಮುಂದೆ ಆಗುವಂಥಾದ್ದು, ಯಾವುದಕ್ಕೆ ಪ್ರಿಯಾರಿಟಿ ಕೊಡಬೇಕು, ಯಾವುದಕ್ಕೆ ಕೊಡುವುದಕ್ಕೆ ಆಗುವುದಿಲ್ಲ ಎಂಬುದನ್ನು ನಾವು ಕಾಣುತ್ತಿದ್ದೇವೆ. ಈಗ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಸುಮಾರು ಏಳೆಂಟು ಸವಾಲುಗಳು ನಮಗೆ ಎದುರಾದವು. ಆಲಮಟ್ಟಿ ತಾಪತ್ರಯ

ಬಂದು ಬಿಟ್ಟಿತು. ಅದಾದಮೇಲೆ ಕಾವೇರಿ ವಿವಾದ ಬಂದಿತು. ವೀರಪ್ಪನ್ ಘಟನೆ ಎದುರಾಯಿತು. ಅದು ನಮಗೆ ಸುತ್ತಿಕೊಂಡುಬಂದು ಅದಕ್ಕಾಗಿ ಹತ್ತು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆವು. ಅವನು ಅಷ್ಟು ಸ್ಕ್ಯಾಂಡಲ್‌ಫಂಡ್‌ನ್ನು ಕದ್ದಿದ್ದಾನೋ ಇಲ್ಲವೋ ಗೊತ್ತಿಲ್ಲ. ಆದರೆ ನಮಗೆ ಇದರಿಂದ ಎಷ್ಟು ಖರ್ಚಾಯಿತು? ಇದು ಟೀಕೆ ಎಂದು ಅಲ್ಲ. ಇದೊಂದು ವಾಸ್ತವಿಕ ಅಂಶ. ಈಗ ನಮ್ಮ ಹೈಕೋರ್ಟ್ ಪೀಠವನ್ನು ಧಾರವಾಡದಲ್ಲಿ ಮಾಡಬೇಕೆಂದು ಸಲಹೆ ಬಂದಿತು. ಅದಕ್ಕಾಗಿ ಎರಡು ತಿಂಗಳು ಸಮಸ್ಯೆಯನ್ನು ಎದುರಿಸಬೇಕಾಗಿ ಬಂದಿತು. ಚರ್ಚ್‌ನಲ್ಲಿ ಬಾಂಬ್ ಹಾಕಿದರು ಎಂದು ಬಂದಿತು, ನಂತರ ಹಂದರಹಳ್ಳಿಯಲ್ಲಿ ಜೀತದ ಹಗರಣ ಬಂದಿತು. ಇದನ್ನೆಲ್ಲಾ ನಾವು ಎದುರಿಸಿದ್ದೂ ಆಯಿತು. ಮುಂದೆ ಗ್ರಾಮೀಣ ಕೃಪಾಂಕ ಸಮಸ್ಯೆ ಬಂದಿತು. ಇಂತಹ ಸಮಸ್ಯೆಗಳು ಹೊರದೇಶಗಳಲ್ಲಿ ಬರುವುದಿಲ್ಲ. ತಾವು ಯಾರಾದರೂ ಹೊರದೇಶದಲ್ಲಿ ಓದಿದ್ದರೆ ಗೊತ್ತಾಗುತ್ತದೆ. ಇಂತಹ ಪ್ರಶ್ನೆಗಳು ಯಾವತ್ತೂ ಸಹ ಅಲ್ಲಿ ಡಿಬೇಟ್ ಆಗುವುದಿಲ್ಲ. ಅಲ್ಲಿ ಚರ್ಚೆಯಾಗತಕ್ಕದ್ದು ಏನೆಂದರೆ ಅದು ಅಮೇರಿಕಾ ಬಜೆಟ್ ಆಗಿರಬಹುದು, ಬ್ರಿಟಿಷ್ ಸರ್ಕಾರದ ಬಜೆಟ್ ಆಗಿರಬಹುದು. ಆ ಬಜೆಟ್‌ನಲ್ಲಿ ಪ್ರಮುಖವಾಗಿ ಯೋಚನೆ ಮಾಡುವಂಥಾದ್ದು ಏನೆಂದರೆ, ಜನರೇಷನ್ ಆಫ್ ವೆಲ್ತ್ ಸಂಪತ್ತನ್ನು ಯಾವ ರೀತಿ ಬಲಪಡಿಸಬೇಕು, ಕ್ರೋಢೀಕರಿಸಬೇಕು ಮತ್ತು ಅಸೆಟ್ಸ್‌ನ್ನು ಹೇಗೆ ಮಾಡಬೇಕು, ಸೇವಿಂಗ್ಸ್ ಹೇಗೆ ಮಾಡಬೇಕು, ಸೆಕ್ಯುರಿಟಿ ಹೇಗೆ ಕೊಡಬೇಕು ಎನ್ನತಕ್ಕದ್ದರ ಬಗ್ಗೆ ಮತ್ತು ಟ್ಯಾಕ್ಸೇಷನ್‌ನ್ನು ಯಾವ ಲೆವಲ್‌ನಲ್ಲಿ ಇಟ್ಟರೆ ಪ್ರಾಮಾಣಿಕವಾಗಿ ಜನರು ಟ್ಯಾಕ್ಸ್ ಕೊಡುತ್ತಾರೆ ಎನ್ನುವುದರ ಬಗ್ಗೆ ಆ ಸರ್ಕಾರಗಳು ಯೋಚನೆ ಮಾಡುತ್ತವೆ. ಆದರೆ ಈ ದೇಶದಲ್ಲಿ ನಮ್ಮ ಸರ್ಕಾರಗಳು ನಮಗೆ ಇರತಕ್ಕಂಥ ವಿಚಿತ್ರ ಪರಿಸ್ಥಿತಿಯಲ್ಲಿ ನಾವು ಯೋಚನೆ ಮಾಡತಕ್ಕಂಥ ರೀತಿ ನೀತಿಗಳು ಬೇರೆಯಾಗುತ್ತವೆ. ಇದರ ಮಧ್ಯೆ ನಾವು ಕಷ್ಟಪಟ್ಟು, ಒಂದು ಪ್ರಯಾಸ ಮಾಡಿ ಈ ಬಜೆಟ್‌ನ್ನು ಸಮತೋಲನ ಆಗಿ ಇಡುವುದಕ್ಕೆ ಪ್ರಯತ್ನ ಮಾಡಿದ್ದೇವೆ ಎಂದು ನಾನು ಹೇಳುತ್ತೇನೆ. ನಮ್ಮ ಈ ಟ್ಯಾಕ್ಸೇಷನ್ ಬಗ್ಗೆ ಮತ್ತು ಬಜೆಟ್ ಬಗ್ಗೆ ಬಹಳಷ್ಟು ವಿಚಾರ ತಿಳಿದಂಥ ವ್ಯಕ್ತಿ ಎಂದರೆ ಶ್ರೀಮಾನ್ ಎನ್.ಎ. ಪಾಲ್ಕೀವಾಲಾ ಅವರು. ಅವರು ಪ್ರತಿವರ್ಷ ಕೂಡ ಸೆಂಟ್ರಲ್ ಬಜೆಟ್ ಮೇಲೆ ಸ್ಪೀಚಸ್ ಕೊಡುತ್ತಿದ್ದರು. ಬಹುಶಃ ನನ್ನ ಅನೇಕ ಜನ ಸ್ನೇಹಿತರು ಅದನ್ನು ಓದಿರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ಬಹಳ ಚೆನ್ನಾಗಿ ಇದರ ಬಗ್ಗೆ ಕ್ಲಿಯರ್‌ಕಟ್ ಆಗಿ ಹೇಳುತ್ತಿದ್ದರು. ಎ ಎಂದರೆ ಎ, ಬಿ ಎಂದರೆ ಬಿ ಎಂದು ಹೇಳಿ ಬಹಳ ಅದ್ಭುತವಾಗಿ ಡಿಸೆಕ್ಟ್ ಮಾಡುತ್ತಿದ್ದರೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅಧ್ಯಕ್ಷರೇ, ನಾನೂ ಕೂಡ ಝೂಆಲಜಿ ವಿದ್ಯಾರ್ಥಿಯಾಗಿದ್ದೆ. ನಾನು ವಿದ್ಯಾರ್ಥಿಯಾಗಿದ್ದಾಗ ಡಿಸೆಕ್ಷನ್‌ಬಾಕ್ಸ್ ಈ ಸಂದರ್ಭದಲ್ಲಿ ನನಗೆ ಜ್ಞಾಪಕಕ್ಕೆ ಬರುತ್ತದೆ. ಏನು ಡಿಸೆಕ್ಷನ್ ಬಾಕ್ಸ್ ಎಂದರೆ ಝೂಆಲಜಿಯಲ್ಲಿ ಯಾವುದೇ ಪ್ರಾಣಿಯನ್ನು ಕೈಗೆ ಕೊಟ್ಟರೆ ಅದನ್ನು ಟೇಬಲ್ ಮೇಲೆ ಇಟ್ಟು 'ಚೆನ್ನಾಗಿ ಡಿಸೆಕ್ಷನ್ ಮಾಡಿರಿ, ನಿಮಗೆ ನಾನು ಮಾರ್ಕ್ಸ್ ಕೊಡುತ್ತೇನೆ' ಎಂದು ಉಪಾಧ್ಯಾಯರು ಹೇಳುತ್ತಿದ್ದರು. ನನಗೆ ಏಕೆ ಈ ಮೇಷ್ಟು 'ಚೆನ್ನಾಗಿ ಡಿಸೆಕ್ಷನ್ ಮಾಡಿ, ಡಿಸೆಕ್ಷನ್ ಮಾಡಿ' ಎಂದು ಏಕೆ ಹೇಳುತ್ತಿದ್ದಾರೆ ಎಂದು ಪ್ರಶ್ನೆ ಕಾಡುತ್ತಿತ್ತು. ಡಿಸೆಕ್ಷನ್ ಎಂದರೆ ಕಪ್ಪೆ ಅಥವಾ ಬೇರೆ ಪ್ರಾಣಿ ಇರಬಹುದು, ಅದರ ಭಾಗಗಳು ಎಲ್ಲೆಲ್ಲಿ ಇದ್ದು ಅವುಗಳು ಏನು ಕೆಲಸ ಮಾಡುತ್ತವೆ

ಎಂದು ತಿಳಿದುಕೊಳ್ಳತಕ್ಕಂಥಾದ್ದು. ಈ ಬಜೆಟ್ ಹಣೆಬರಹವೂ ಅಷ್ಟೇನೇ. ಯಾವ ಬಜೆಟ್‌ನ್ನು ನಾವು ತಯಾರು ಮಾಡುತ್ತೇವೆ. Everywhere throughout the World, principles of budgetting is the same. ಅದರಲ್ಲಿ ಏನೂ ಎರಡು ಮಾತಿಲ್ಲ. ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನಾವೇನೂ ಲೆಕ್ಚರ್ ಕೊಡುವುದಕ್ಕೆ ಬಂದಿಲ್ಲ. ನನ್ನ ಸರ್ಕಾರ ಕೈಗೊಂಡಿರತಕ್ಕಂಥ ಅನೇಕ ಯೋಜನೆಗಳು ಏನು ಜಾರಿಗೆ ಬರುತ್ತಿವೆ ಅವುಗಳನ್ನು ಯಶಸ್ವಿಯಾಗಿ ಜಾರಿಗೆ ತರಲು ನಾವು ಪ್ರಯತ್ನ ಮಾಡುತ್ತಿದ್ದೇವೆ. ಹೀಗೆ ಪ್ರಯತ್ನ ಮಾಡುವುದರಲ್ಲಿ ತಪ್ಪೇನೂ ಇಲ್ಲ. After all, we belong to different political parties. We are committed to different ideoligies. We have got our own agenda, we have got our own programmes. ಅದರ ಪ್ರಕಾರ ನಾವು ಬಜೆಟ್ ಮಾಡಿದರೆ ನನ್ನ ಸ್ನೇಹಿತರು ಅದು ಮಾಡಿಲ್ಲ, ಇದು ಮಾಡಿಲ್ಲ ಎಂದು ಏನು ಹೇಳುತ್ತಾರೆ, ಅದನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ. ನನಗೆ ಒಂದು ಜೋಕ್ ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ಬರುತ್ತದೆ. ಏನ್ರಿ ಆ ಕೆಲಸ ಮಾಡಲಿಲ್ಲ, ಈ ಕೆಲಸ ಮಾಡಲಿಲ್ಲ, ಅದು ಆಗಿಲ್ಲ, ಇದು ಆಗಿಲ್ಲವೆಂದು ಮೇಷ್ಟ್ರು ಹೇಳುತ್ತಲೇ ಇರುತ್ತಾರೆ. ನಾವೇನು ಮಾಡುವುದರೀ, ಸಾಕಷ್ಟು ಮಾಡಿದ್ದೀವಲ್ಲಾ ಎಂದು ನಾವು ಹೇಳುತ್ತಲೇ ಇರುತ್ತವೆ. ಹೆಣ್ಣುಮಕ್ಕಳು ಇದ್ದಾರೆ, ಈಗ ಅದರ ಬಗ್ಗೆ ಹೇಳುವುದು ಬೇಡ. ಈ ಕಾರ್ಯಕ್ರಮಗಳನ್ನು ಜಾರಿಗೆ ತರುವುದರಲ್ಲಿ ನಾವೇನೂ ಹಿಂದೆ ಬಿದ್ದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಸರ್ಕಾರದಲ್ಲಿ ಮೂರು-ನಾಲ್ಕು ಕಮೀಷನ್‌ಗಳನ್ನು ಮಾಡಿದ್ದರ ಬಗ್ಗೆ ಅದನ್ನು ಎಷ್ಟು ಪರ್ಸೆಂಟೇಜ್ ಒಪ್ಪುವಂಥಾದ್ದು, ಬಿಡುವಂಥಾದ್ದು ಒಂದು ಕಡೆ ಇರಲಿ. ಆದರೆ ಇದರ ಬಗ್ಗೆ ನಮ್ಮ ಕಾಳಜಿ ನಮಗೆ ಇದೆ. ಈ ಆಡಳಿತ ಏನಿದೆ ಇದಕ್ಕೆ ತುಕ್ಕು ಹಿಡಿದಿದ್ದು ಅದನ್ನು ಸರಿಪಡಿಸಬೇಕು ಎನ್ನುತಕ್ಕಂಥ ಕಾಳಜಿ ನಮಗೆ ಇದೆ. That is why, he has appointed Administrative Reforms Commission. ಟ್ಯಾಕ್ಸ್‌ನಲ್ಲೂ ಕೂಡ ಬಹಳಷ್ಟು ಸೋರಿಕೆಯಾಗುತ್ತಿದೆ, ಇದರ ಬಗ್ಗೆ ಏನಾದರೂ ಮಾಡಬೇಕು ಎನ್ನತಕ್ಕಂಥ ಯೋಚನೆಯಿಂದ ಮೊಯಿಲಿಯವರ ಅಧ್ಯಕ್ಷತೆಯಲ್ಲಿ ಕಾಮೀಷನ್ನನ್ನು ಮಾಡಿದ್ದಾರೆ. ಹಾಗೆಯೇ ಎಸ್‌ಸಿ:ಎಸ್‌ಟಿ ಮುಂತಾದ ಕಮೀಷನ್‌ಗಳನ್ನು, ಏನಾದರೂ ಮಾಡಬೇಕೆಂಬ ಕಾಳಜಿ ಇರುವುದರಿಂದಲೇ ಇವುಗಳನ್ನು ಮಾಡಿರುವಂಥಾದ್ದು. ಇದೆಲ್ಲಾ ಸ್ವಾಗತ ಮಾಡತಕ್ಕಂಥ ವಿಚಾರ. ಕೊನೆಯದಾಗಿ ಮಾನ್ಯ ಸ್ನೇಹಿತರುಗಳಿಗೆ ಒಂದು ಪ್ರಶ್ನೆಯನ್ನು ಹಾಕಿ ನನ್ನ ಮಾತನ್ನು ಮುಗಿಸುತ್ತೇನೆ. ಇದು ಏನಾಗಿದೆ ಎಂದರೆ ಸರ್ಕಾರವನ್ನು ನಾವು ನಡೆಸಿದ್ದೇವೆ ಮತ್ತು ಬಲಗಡೆಯವರೂ ನಡೆಸಿದ್ದಾರೆ. ಸರ್ವಜ್ಞನ ವಚನವನ್ನು ಅಲ್ಲಿದ್ದಾಗ ಆಡುತ್ತೇವೆ, ಇಲ್ಲಿ ಬಂದಾಗ ನವ್ಯಕಾವ್ಯ ಹಾಡಬೇಕಾಗುತ್ತದೆ. ನನ್ನ ಮಿತ್ರರಾದ ಮಾನ್ಯ ಸಿಂಧ್ಯಾರವರು ಹೇಳುತ್ತಲೇ ಇರುತ್ತಾರೆ ಏನೆಂದರೆ ನೀವು ಇಲ್ಲಿದ್ದಾಗ ಒಂದು ತರಹ ಹೇಳುತ್ತೀರಿ, ಅಲ್ಲಿ ಹೋದಾಗ ಇನ್ನೊಂದು ಆಡುತ್ತೀರಿ ಎಂದು. ಇದು ಏನಪ್ಪ ಕುರ್ಚಿಗಳ ಮಹತ್ವ ಎಂದು ನನಗೆ ಗೊತ್ತಿಲ್ಲ. ನನಗಂತೂ ಇದರ ಅನುಭವ ಇಲ್ಲ. ಅಲ್ಲಿದ್ದಾಗ ಒಂದು ಹೇಳುತ್ತೀರಿ, ಇಲ್ಲಿದ್ದಾಗ ಒಂದು ಹೇಳುತ್ತೀರಿ ಎನ್ನತಕ್ಕಂಥ ಮಾತನ್ನು ಚುಚ್ಚಿಚುಚ್ಚಿ

ಅವರು ಹೇಳುತ್ತಲೇ ಇರುತ್ತಾರೆ. ನಾವು ಅಲ್ಲಿಯೂ ಕುಳಿತಿಲ್ಲ, ಇಲ್ಲಿಯೂ ಕುಳಿತಿಲ್ಲ. ಲಾಸ್ಟ್‌ಬೆಂಚ್‌ನಲ್ಲಿ ಕುಳಿತ ನಮಗೆ ಇದರ ಅನುಭವ ಇಲ್ಲ. ನನಗೆ ಈ ಕುರ್ಚಿಯ ಮಹತ್ವವೇ ಗೊತ್ತಾಗುತ್ತಿಲ್ಲ.

ಶ್ರೀ ಬಿ.ಎಸ್. ಬಚ್ಚೇಗೌಡ: ಮುಂದೆ ಇಲ್ಲಿ ಬಂದಾಗ ಕುರ್ಚಿಯ ಮಹತ್ವ ನಿಮಗೆ ಗೊತ್ತಾಗುತ್ತದೆ.

ಛೇರ್ಮನ್: ಗುರುಸ್ವಾಮಿಯವರೆ, ತಾವು ಬೇಗ ತಮ್ಮ ಮಾತುಗಳನ್ನು ಮುಗಿಸಿ.

ಶ್ರೀ ಎ.ಎಸ್. ಗುರುಸ್ವಾಮಿ: ನಾನು ಮುಗಿಸುತ್ತೇನೆ. ಕೊನೆಯದಾಗಿ ಒಂದು ಪಾಯಿಂಟ್. ನಾನು ಬಜೆಟ್‌ನ್ನು ಓದಿದಾಗ, ಈ ಪ್ರಾವಿಜನ್ ಮತ್ತು ಕೆಲವು ಯೋಜನೆಗಳನ್ನು ನೋಡಿದಾಗ ಸರ್ಕಾರದ ಆದಾಯದಲ್ಲಿ 60 ಪರ್ಸೆಂಟ್ ಸರ್ಕಾರಿ ಸಂಬಳಕ್ಕೆ, ಅನುಪಯುಕ್ತವಾಗಿರತಕ್ಕಂಥ ಹೆಡ್‌ನಲ್ಲಿ, ಅನ್‌ಪ್ರೊಡಕ್ಟೀವ್ ಆಗಿರತಕ್ಕಂಥ ಸೆಕ್ಟಾರ್‌ನಲ್ಲಿ ಖರ್ಚು ಮಾಡುತ್ತಿದ್ದೇವೆ. ಇದನ್ನು ಅವರೂ ಮಾಡುತ್ತಿದ್ದರು, ನಾವು ಮಾಡುತ್ತಿದ್ದೇವೆ. ಇದನ್ನು ಅವರೂ ತಪ್ಪಿಸುವುದಕ್ಕೆ ಆಗಿಲ್ಲ ಮತ್ತು ನಮಗೂ ತಪ್ಪಿಸುವುದಕ್ಕೆ ಆಗಿಲ್ಲ. ಇದು ಒಂದು ರೀತಿ ಆನೆಯನ್ನು ಸಾಕಿದಹಾಗೆ. ಈ ಆನೆಯನ್ನು ಬಿಟ್ಟುಬಿಡುವ ಹಾಗಿಲ್ಲ. ಆದರೂ ಕೂಡ ಟೀಕೆ ಮಾಡುತ್ತಲೇ ಇದ್ದೇವೆ, ಹೇಳುತ್ತಲೇ ಇದ್ದೇವೆ. ನಾನು ಹೇಳುವುದು ಏನೆಂದರೆ ಈ 60 ಪರ್ಸೆಂಟ್‌ನ್ನು ರಿವರ್ಸ್ ಮಾಡಬೇಕು. 40 ಪರ್ಸೆಂಟ್ ಅನ್‌ಪ್ರೊಡಕ್ಟೀವ್‌ಗೆ ಹೋಗಬೇಕು ಮತ್ತು 60 ಪರ್ಸೆಂಟ್ ಡೆವಲಪ್‌ಮೆಂಟ್ ಕೆಲಸಗಳಿಗೆ ಹೋಗಬೇಕು ಎಂದು ನಾವೆಲ್ಲರೂ ತೀರ್ಮಾನಕ್ಕೆ ಬಂದರೆ ಬಹುಶಃ - we have to search our hearts. ಇವತ್ತು 40 ಪರ್ಸೆಂಟ್ ಹಣ ಇಟ್ಟುಕೊಂಡು ಎಲ್ಲಾ ಸರ್ಕಸ್ ಮಾಡಿ ಅದು ಕೊಡುತ್ತೇವೆ, ಇದು ಕೊಡುತ್ತೇವೆ, ಈ ಕಾರ್ಯಕ್ರಮ ಮಾಡುತ್ತೇವೆ ಎಂದು ಹೇಳುತ್ತಾ ಇರತಕ್ಕಂಥ ಪರಿಸ್ಥಿತಿಯಲ್ಲಿ ನಾವು ಸಿಕ್ಕಿಹಾಕಿಕೊಂಡು ನರಳುತ್ತಿದ್ದೇವೆ. ಇದು ನಾವೆಲ್ಲರೂ ಸೇರಿ ಒಂದು ತೀರ್ಮಾನಕ್ಕೆ ಬರೋಣ. ದಯವಿಟ್ಟು ತಾವು ಒಂದು ನಿರ್ಧಾರಕ್ಕೆ ಬನ್ನಿ. Have a political will and have a decision that we will reverse the trend of 40% for development and 60% for unproductive work. May I appeal to the hon. members to consider my suggestion? I welcome the budget of our Government. We will laud the efforts which the Hon'ble Chief Ministers has made for the overall development of our state.

ಶ್ರೀಮತಿ ರಾಣಿ ಸತೀಶ್: ಇವರು ಕನ್ನಡದಲ್ಲಿ ಕಂಕ್ಲೂಡ್ ಮಾಡಲಿ.

ಛೇರ್ಮನ್: ತಾವು ತಮ್ಮ ಜಾಗಕ್ಕೆ ಹೋಗಿ ಮಾತನಾಡಿ.

ಶ್ರೀಮತಿ ರಾಣಿ ಸತೀಶ್: ಸಭಾಧ್ಯಕ್ಷರೇ, ಅವರು ಭಾಷಣವನ್ನು ಮುಗಿಸುತ್ತಿದ್ದಾರೆ. ಅದರೆ ಇಷ್ಟು ಹೊತ್ತು ಕನ್ನಡದಲ್ಲಿ ಮಾತನಾಡಿ ಕೊನೆಯಲ್ಲಿ ಆಂಗ್ಲಭಾಷೆಯಲ್ಲಿ ಮುಗಿಸುತ್ತಿದ್ದಾರೆ. ಅವರ ಆಂಗ್ಲಭಾಷಾ ವ್ಯಾಮೋಹ ಬಹಳಷ್ಟು ಹೆಚ್ಚು ಇದ್ದ ಹಾಗೆ ಇದೆ. ಅವರು ಮುಗಿಸುವಾಗಲಾದರೂ ಕನ್ನಡದಲ್ಲಿ ಮುಗಿಸಲಿ ಎಂದು ನಾನು ಹೇಳುತ್ತೇನೆ.

7.50 ಪಿ.ಎಂ.

ಶ್ರೀ ಎಸ್.ಎಸ್. ಪಾಟೀಲ್: ಕನ್ನಡ ಸಂಸ್ಕೃತಿ ಇಲಾಖಾ ಸಚಿವರು ಎಲ್ಲಿ ಕನ್ನಡ ಇದೆಯೆಂದು ನೋಡುವುದಕ್ಕೆ ಅಡ್ಡಾಡುತ್ತೀರಿ. ಈ ರಾಜ್ಯದಲ್ಲಿ ಕನ್ನಡ ಇದೆಯೇ? ಇವತ್ತು ಮಾನ್ಯ ಮೊಯ್ಲಿಯವರ ವರದಿಯನ್ನು ಇಂಗ್ಲೀಷಿನಲ್ಲಿ ಕಳುಹಿಸಿದ್ದಾರೆ. ಇದನ್ನು ನಾವು ನೋಡಿದ್ದೀರಾ? ನಿಮ್ಮ ಕಾಯಿದೆ ಪುಸ್ತಕಗಳೆಲ್ಲಾ ಇಂಗ್ಲೀಷಿನಲ್ಲಿ ಬಂದಿವೆ. ಅದಕ್ಕಾಗಿ ನಾನು ಹೇಳಿದ್ದು, ನೀವು ಸ್ವಲ್ಪ ಅಡ್ಡಾಡಿ ನೋಡಿ. ಕನ್ನಡ ಕಾವಲು ಸಮಿತಿ ಮಾಡಿದ್ದೇವೆಂದು ಸುಮ್ಮನೆ ಕೊಡಬೇಡಿ.

ಶ್ರೀಮತಿ ರಾಣಿ ಸತೀಶ್: ಮಾನ್ಯ ಪಾಟೀಲರು ಹೇಳಿದ ಹಾಗೆ, ಎಲ್ಲಾ ಶಾಸಕರಿಗೂ ಕನ್ನಡ ಬರುವುದಿಲ್ಲ. ಆದ್ದರಿಂದ, ಇಂಗ್ಲೀಷ್ ಮತ್ತು ಕನ್ನಡ ಎರಡರಲ್ಲೂ ಒದಗಿಸುವುದನ್ನು ಮಾಡಿದ್ದೇವೆ.

(ಗೊಂದಲ)

ಶ್ರೀ ಎ.ಎಸ್. ಗುರುಸ್ವಾಮಿ: ನಾನು ಕೊನೆಯಲ್ಲಿ ಇಂಗ್ಲೀಷ್‌ನಲ್ಲಿ ಓದಿದರೆ ಆಗುತ್ತದೆ. ಅದು ದುರಾಭಿಪ್ರಾಯವೇನಲ್ಲ. ನನ್ನ ವೇಳೆಯನ್ನು ಕಳೆದುಕೊಳ್ಳುವುದಕ್ಕೆ ನಾನು ಸಿದ್ಧ ಇಲ್ಲ. ಒಂದು ವಿಚಾರದ ಬಗ್ಗೆ ಇಲ್ಲಿ ಬಹಳಷ್ಟು ಜನ ಗಮನವನ್ನೇ ಕೊಟ್ಟಿಲ್ಲ. ಕೇಂದ್ರದಲ್ಲಿ ವಿತ್ತೀಯಕ್ಕೆ ಸಂಬಂಧಪಟ್ಟಂತೆ ಒಂದು ಕಾನೂನು ಮಾಡಿಕೊಂಡಿದ್ದಾರೆ. ಆ ಕಾನೂನು ಕರ್ನಾಟಕ ಸರ್ಕಾರದ ಅಡಿಯಲ್ಲಿ ತರಬೇಕೆಂಬ ಇಚ್ಛೆಯನ್ನು ಮಾನ್ಯ ಮುಖ್ಯಮಂತ್ರಿಗಳು, ತಮ್ಮ ಬಜೆಟ್ ಭಾಷಣದಲ್ಲಿ ಹೇಳಿರುವಂಥಾದ್ದು ನಿಜಕ್ಕೂ ಕೂಡ ಒಂದು ರೀತಿ ಕಡಿವಾಣ ಬರುತ್ತದೆ. ಖರ್ಚನ್ನು ಯದ್ವಾತದ್ವಾ ಮಾಡಲಿಕ್ಕೆ ಬರುವುದಿಲ್ಲ. ಇದು ಕೇಂದ್ರ ಸರ್ಕಾರದೊಳಗೆ ಇದೆ. ಆ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದನ್ನು ನಾನು ಸ್ವಾಗತ ಮಾಡುತ್ತಾ, ಮತ್ತೆ ಕೆಲವು ಅನ್ ಪ್ರೊಡಕ್ಟೀವ್ ಪೋಸ್ಟ್‌ಗಳು ಬೇಕಾದಷ್ಟು ಇವೆ. ಅದರಲ್ಲೂ ಪಿ.ಡಬ್ಲ್ಯು.ಡಿ. ಯಲ್ಲಿ ಕೆಲಸವಿಲ್ಲದೆ ಸಂಬಳ ತೆಗೆದುಕೊಳ್ಳುವ ಹುದ್ದೆಗಳು ಬೇಕಾದಷ್ಟು ಇವೆ. ಇವುಗಳ ಬಗ್ಗೆ ಸರ್ಕಾರ ಮನಗಂಡು ದುಡ್ಡು ಉಳಿಸಿ, ನಮಗೆ 25 ಲಕ್ಷ ರೂ ಕೊಡಬೇಕೆಂಬ ಕ್ಲಾಸ್ ಹಾಕಿದ್ದಾರೆ. ದಯವಿಟ್ಟು ಆ ಕ್ಲಾಸನ್ನು ಉಪಯೋಗಿಸಿಕೊಳ್ಳಿರಿ. ನಮಗೆ 50 ಲಕ್ಷಕ್ಕೆ ಕೊಟ್ಟು ನಮ್ಮ ಎಲ್ಲಾ ಸ್ನೇಹಿತರಿಗೂ ಅವಕಾಶ ಮಾಡಿಕೊಡಿ ಎಂದು ಹೇಳಿ, ಮತ್ತೊಮ್ಮೆ ಸರ್ಕಾರದ ಬಜೆಟ್‌ನ್ನು ಸ್ವಾಗತ ಮಾಡುತ್ತಾ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು): ಸನ್ಮಾನ್ಯ ಅಧ್ಯಕ್ಷರೇ, ಸೋಮದೇವ ಸೂರಿ ಎಂಬ ತತ್ವಜ್ಞಾನಿ ಹೇಳಿದಂತೆ ಸರ್ವಜೀವ ಸಮತ. ಬಹುಶಃ ಧಾರ್ಮಿಕ ನೆಲೆಯಲ್ಲಿ ಮಾತ್ರವಲ್ಲ, ಜೀವನದ ಎಲ್ಲಾ ರಂಗಗಳಲ್ಲೂ ಕೂಡ ಸಾಮಾಜಿಕ ನ್ಯಾಯವನ್ನು ತರಬೇಕೆಂಬ ಚಿಂತನೆ ಏನು ಮೂಡಿತ್ತೋ, ಅದಕ್ಕೆ ಅವರು ಆಧಾರ ಪಡುತ್ತಾರೆ, ಅದು ಹೇಗೆ ಸಾಧ್ಯವೆಂದರೆ, ಆಡಳಿತದಿಂದ ಸಾಧ್ಯ. ಆಡಳಿತದಲ್ಲಿ ಕ್ರಮ ಹಾಗೂ ವಿಕ್ರಮ ಈ ಎರಡೂ ಇದ್ದರೆ ಮಾತ್ರ ಒಳ್ಳೆಯ ಆಡಳಿತ ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು

ಸ್ಮರಣೆ ಮಾಡುತ್ತಿದ್ದೇನೆ. ನಮ್ಮ ರಾಜ್ಯದ ಮತ್ತು ರಾಷ್ಟ್ರದ ಆಡಳಿತದ ಬಗ್ಗೆ ಆತ್ಮಾವಲೋಕನ ಮಾಡುವಂಥ ಚಿಂತನೆಯನ್ನು ಕೂಡ ನಾವು ಮಾಡಬೇಕಾಗಿದೆ. ಎರಡನೆಯದಾಗಿ ದುಂಬಿ ಮಧುವನ್ನು ಹೂವಿನಿಂದ ಹೇಗೆ ನೋವಾಗದ ರೀತಿಯಲ್ಲಿ ಸಂಗ್ರಹ ಮಾಡುತ್ತದೋ ಅದೇ ರೀತಿ ಜನರಿಗೆ ತೊಂದರೆಯಾಗದ ರೀತಿಯಲ್ಲಿ ತೆರಿಗೆಯನ್ನು ಸಂಗ್ರಹ ಮಾಡಬೇಕೆಂದು ಹೇಳುವಂಥ ಚಾಣಕ್ಯ ಮಾತನ್ನು ಮತ್ತು ಅದೇ ರೀತಿ ಅಧಿಕಾರಿ ಈ ರಾಜ್ಯದ ಭಂಡಾರಕ್ಕೆ ಸೇರಬೇಕಾದ ಹಣದಲ್ಲಿ ಎಷ್ಟು ನುಂಗುತ್ತಾನೆಂದು ಹೇಳುವುದು, ನೀರಿನಲ್ಲಿರುವಂಥ ಮೀನು ಎಷ್ಟು ನೀರನ್ನು ನುಂಗುತ್ತದೆ ಎಂದು ಹೇಳುವುದು ಎಷ್ಟು ಕಷ್ಟ. ಅದಕ್ಕಾಗಿ ಗೂಢಾಚಾರರು ಕಣ್ಣಿಟ್ಟು ನೋಡಲು ದರ್ಶಕ ತರಬೇಕೆಂದು ಹೇಳುವಂಥ ಚಾಣಕ್ಯ ಮಾತನ್ನು ಸ್ಮರಣೆ ಮಾಡಿ ಕೊಂಡು 2001-02ನೇ ಸಾಲಿನ ಈ ಆಯವ್ಯಯದ ಬಗ್ಗೆ ನನ್ನ ಅನಿಸಿಕೆಯನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮೊನ್ನೆ ತಾನೆ ನಡೆದಂಥ ಚರ್ಚೆಯಲ್ಲಿ ಇ.ಎ.ಎಸ್. ಬಗ್ಗೆ ಕೇಂದ್ರ ಸರ್ಕಾರದಲ್ಲಿ ಕಡಿತ ಆಗುತ್ತಾ ಇದೆಯೆಂದು ಹೇಳಿದರು. ಕಾರಣ ಏನೆಂಬ ಬಗ್ಗೆ ಸಿ.ಎ.ಜಿ. ವರದಿಯನ್ನು ಕೂಡ ಗಮನಿಸಿದೆ. ನನಗೆ ಆಶ್ಚರ್ಯವಾಯಿತು. ಸಿ.ಎ.ಜಿ. ವರದಿಯಲ್ಲಿ 11.32 ಕೋಟಿ ರೂಪಾಯಿ ಟ್ರಾನ್ಸ್‌ಫರ್ ಟು ಸಿವಿಲ್ ಸಪ್ಲೈ ಎಂದಿದ್ದೆ. ಉದ್ಯೋಗ ಭರವಸೆ ಯೋಜನೆಗೆ ಕೊಡಬೇಕಾದ ಹಣ ಯಾವ ರೀತಿಯಲ್ಲಿ ಬೇರೆ ಕಡೆ ಹೋಗಿದೆ ಎಂಬುದು. ಎರಡನೆಯದು 21.48 ಕೋಟಿ ರೂಪಾಯಿ ಬೇರೆ ಉದ್ದೇಶಗಳಿಗೆ ಉಪಯೋಗವಾಗಿದೆ, 25.91 ಕೋಟಿ ಅವ್ಯವಹಾರವಾಗಿದೆ ಅಷ್ಟು ಮಾತ್ರವಲ್ಲ, ಸ್ಟೇಟ್ ಲೆವಲ್ ಕೋ ಆರ್ಡಿನೇಷನ್ ಕಮಿಟಿ, ವಿಜಿಲೆನ್ಸ್ ಅಂಡ್ ಮಾನಿಟರಿಂಗ್ ಮಾಡಬೇಕಾಗಿತ್ತು, ಅದನ್ನು ಮಾಡಿಲ್ಲ. ಯಾವುದೇ ರೀತಿಯಲ್ಲಿ ಕಾಮಗಾರಿಗಳ ಉಸ್ತುವಾರಿ ಜಿಲ್ಲಾ ಪಂಚಾಯ್ತಿ ಮಟ್ಟದಲ್ಲಿ ಆಗಿಲ್ಲವೆಂದು ಹೇಳುವ ವರದಿಯ ಜೊತೆಯಲ್ಲಿ ಯುಟಿಲೈಸೇಷನ್ ಸರ್ಟಿಫಿಕೇಟ್ ಕೊಟ್ಟಿಲ್ಲ. ಅದಕ್ಕೋಸ್ಕರ ಸ್ವಯಂಕೃತ ಅಪರಾಧದಿಂದ ರಾಜ್ಯಸರ್ಕಾರದಿಂದ ಇಷ್ಟೆಲ್ಲಾ ವರದಿಗಳು ಅಲ್ಲಿ ಹೋಗದೇ ಇರುವುದರಿಂದ ಕಡಿತವಾಗಿದೆ ಎಂದು ಹೇಳುವ ಮಾಹಿತಿ ಸಿ.ಎ.ಜಿ. ವರದಿಯಲ್ಲಿ ಇರುವಂಥಾದ್ದನ್ನು ತಮ್ಮ ಗಮನಕ್ಕೆ ತರಲು ಇಚ್ಚಿಸುತ್ತಿದ್ದೇನೆ. ಅದೇ ರೀತಿ ಬಂಗಾರು ದತ್ತಾತ್ರೇಯ ಮಾನ್ಯ ಕೇಂದ್ರ ಸಚಿವರು, ನಗರಾಭಿವೃದ್ಧಿ ಮತ್ತು ಬಡತನ ಇದಕ್ಕೆ ಸಂಬಂಧಪಟ್ಟ ಸಚಿವರು ಒಂದು ಉತ್ತರವನ್ನು ಲೋಕಸಭೆಯಲ್ಲಿ ಕೊಡುತ್ತಾರೆ. ಸ್ವರ್ಣ ಜಯಂತಿ ರೋಜ್‌ಗಾರ್ ಯೋಜನೆಯ ಸುಮಾರು 46 ಕೋಟಿ ರೂಪಾಯಿಗಳನ್ನು ಕರ್ನಾಟಕ ಸರ್ಕಾರ ಖರ್ಚು ಮಾಡದೇ ಇರುವುದರಿಂದ ನಾವು ಮುಂದಿನ ಕಂತನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ. ಬಹುಶಃ ನಮಗೆ ಬಂದಂಥ ಹಣವನ್ನೂ ಕೂಡ ಉಪಯೋಗ ಮಾಡಲು ವಿಫಲರಾಗಿದ್ದೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದನ್ನು ಹೇಗೆ ಸದ್ವಿನಿಯೋಗ ಮಾಡಬೇಕೆಂಬ ನಿಟ್ಟಿನಲ್ಲಿ ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಾ ಇಲ್ಲ. ಆದ್ದರಿಂದ, ವಿಶ್ವಾಸಕ್ಕೆ ತೆಗೆದುಕೊಳ್ಳತಕ್ಕ ಕಾರ್ಯವನ್ನು ಮಾಡಬೇಕೆಂಬ ವಿನಂತಿಯನ್ನು ಮಾಡುತ್ತೇನೆ. ವಿಶೇಷವಾಗಿ ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಮೀನುಗಾರಿಕೆಗೆ ಸಂಬಂಧಪಟ್ಟ ವಿಚಾರ. ಇವತ್ತು ಮೀನುಗಾರಿಕೆಯಿಂದ ಇಡೀ ಜಿಲ್ಲೆಯ ಆರ್ಥಿಕ ಶಕ್ತಿ ಯಾವುದಿದೆ, ಅದಕ್ಕೆ ಹೊಡೆತ ಕೊಡುವಂಥ ಕ್ರಮ ರಾಜ್ಯ ಸರ್ಕಾರದ ಬಜೆಟ್‌ನಿಂದ ಆಗುತ್ತಾ ಇದೆ. ವಿಶೇಷವಾಗಿ ಡೀಸೆಲ್ ಸಬ್ಸಿಡಿ ಬಗ್ಗೆ ಮೀನುಗಾರರ ಪ್ರಮುಖರು ಮತ್ತು

ಅಲ್ಲಿಯ ಜನಪ್ರತಿನಿಧಿಗಳೆಲ್ಲಾ ಮುಖ್ಯಮಂತ್ರಿಗಳ ಹತ್ತಿರ, ಮಂತ್ರಿಗಳ ಹತ್ತಿರ ಬೇಡಿಕೊಂಡಿದ್ದೇವೆ. ನ್ಯಾಯಯುತವಾಗಿರುವಂತಹ ಈ ಬೇಡಿಕೆಯನ್ನು ಮಂಜೂರು ಮಾಡಲಿಕ್ಕೆ ನಿಮಗೆ ಬಂದಿರುವಂಥ ತೊಂದರೆ ಏನು? ಏಕೆ ಇದನ್ನು ಮಾಡಿಲ್ಲ? ಮೀನುಗಾರಿಕೆಯನ್ನು ಏಕೆ ಹೀನಾಯವಾಗಿ ನೋಡುತ್ತಿದ್ದೀರಿ ಎಂಬ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಅಷ್ಟು ಮಾತ್ರವಲ್ಲ, ಆಯಿಲ್ ಫ್ಯಾಕ್ಟರಿಗೆ ಸಂಬಂಧಪಟ್ಟಂತೆ 1.75ಕ್ಕೆ ದರವನ್ನು ನಿಗದಿಪಡಿಸಬೇಕು, ಅದನ್ನೂ ಕೂಡ ಮಾಡಿಲ್ಲ. ಬಹುಶಃ ಈ ಬಗ್ಗೆ ವಿನಂತಿ ಮಾಡಿದರೂ ಕೂಡ, ಅದಕ್ಕೆ ವ್ಯತಿರಿಕ್ತವಾಗಿ ಎರಡು ಪರ್ಸೆಂಟ್ ತೆರಿಗೆಯನ್ನು ಕೂಡ ಜಾಸ್ತಿ ಮಾಡಿದ್ದೀರಿ. ಅದನ್ನು ರದ್ದುಪಡಿಸಬೇಕು ಹಾಗೂ ಮೀನುಗಾರಿಕೆ ಇಲಾಖೆ ಮತ್ತು ಮೀನುಗಾರಿಕೆ ಉದ್ಯಮಕ್ಕೆ ನ್ಯಾಯಕೊಡಬೇಕೆಂಬ ವಿನಂತಿಯನ್ನು ಮಾಡುತ್ತಿದ್ದೇನೆ. ಈ ವಿನಂತಿಯನ್ನು ಕ್ಷೇತ್ರದ ಹಾಗೂ ಕರಾವಳಿ ಜಿಲ್ಲೆಗಳ ಮೀನುಗಾರರ ಪರವಾಗಿ ಮಾಡುತ್ತೇನೆ. ಅದರ ಜೊತೆಯಲ್ಲಿ ಮಾನ್ಯ ವೀರಪ್ಪ ಮೊಯ್ಲಿಯವರು, ತೆರಿಗೆ ಸುಧಾರಣಾ ಆಯೋಗದಲ್ಲಿ ಅಬಕಾರಿ ಇಲಾಖೆಯಲ್ಲಿ, 1,400 ಕೋಟಿ ರೂಪಾಯಿಗಳ ಬಗ್ಗೆ ಸಾಕಷ್ಟು ಉಲ್ಲೇಖಗಳು ಇಲ್ಲಿ ಬಂತು. ಇದರ ಬಗ್ಗೆ ಬಜೆಟ್‌ನಲ್ಲಿ ಏನಾದರೂ ಪರಿಹಾರ ಕಾಣಬಹುದೆಂದು ನಾನು ಯೋಚನೆ ಮಾಡುತ್ತಾ ಇದ್ದೆ. ಆದರೆ, ಕೇವಲ 10 ಕೋಟಿ ರೂಪಾಯಿ ಮಾತ್ರ ಏರಿಕೆಯಾಗಿರುವಂತಾದ್ದು ಉಳಿದ ಸೋರಿಕೆ ಬಗ್ಗೆ ಏನೊಂದು ಮಾತಿಲ್ಲ. ಕಳೆದ ವರ್ಷಕ್ಕಿಂತ, ಆದಾಯದಲ್ಲಿ 10 ಕೋಟಿ ಮಾತ್ರ ಉಲ್ಲೇಖವಿದೆ. ಅದೇರೀತಿ ಮೋಟಾರು ವೆಹಿಕಲ್ ಟ್ಯಾಕ್ಸಿನ ಬಗ್ಗೆ ಕೇಂದ್ರ ಸರ್ಕಾರ ಕಡತ ಕೊಟ್ಟು ಸಾಕಷ್ಟು ಪ್ರೋತ್ಸಾಹ ಮಾಡಿದರೂ ಕೂಡ, ನಮ್ಮ ರಾಜ್ಯ ಸರ್ಕಾರ ಹೆಚ್ಚು ತೆರಿಗೆ ಹಾಕಿರುವುದು ಸೂಕ್ತವಲ್ಲ. ಇದನ್ನು ಸರಿಪಡಿಸಬೇಕೆಂಬ ವಿನಂತಿ ಮಾಡುತ್ತಿದ್ದೇನೆ. ಬೀಡಿ ಕೈಗಾರಿಕೆಗೆ ಸಂಬಂಧಪಟ್ಟಂತೆ ಇವತ್ತು ನಾಲ್ಕು ಲಕ್ಷಕ್ಕೂ ಹೆಚ್ಚಿನ ಕುಟುಂಬಗಳು ತುಂಬಾ ದುಸ್ಥಿತಿಯಲ್ಲಿದ್ದಾರೆ. ಬೀಡಿ ಉದ್ಯಮ ಅಪಾಯಕರ ಅಂಚಿನಲ್ಲಿದೆ. ಇಂತಹ ಸಂದರ್ಭದಲ್ಲಿ ಕೂಡ ಎರಡು ಪರ್ಸೆಂಟ್ ತೆರಿಗೆಯನ್ನು ಏರಿಸಿಕೊಂಡು, ಅವರಿಗೂ ಹೊಡೆತ ಕೊಟ್ಟಿದೆ ಎಂದು ಹೇಳುತ್ತೇನೆ. ನಾನು ಆ ಬೀಡಿ ಕಾರ್ಮಿಕರ ಪರವಾಗಿ ನಿಮಗೆ ವಿನಂತಿ ಮಾಡುತ್ತಿದ್ದೇನೆ. ಏರಿಸಿರತಕ್ಕ ತೆರಿಗೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಕೃಷಿಗೆ ಸಂಬಂಧಪಟ್ಟ ಪಂಪ್‌ಸೆಟ್ಟುಗಳ ಮೇಲೆ ಕೇಂದ್ರ ಸರ್ಕಾರ, ಪ್ರಧಾನ ಮಂತ್ರಿಗಳು ಸೂಚಿಸಿದಂತೆ ಒಂದು ಯೂನಿಟ್‌ಗೆ 50 ಪೈಸೆ ಮಾತ್ರ ಹಾಕಬೇಕೆಂಬ ವಿನಂತಿಯನ್ನು ಮಾಡಿ, ಬಟ್ಟೆಗಳು ಮತ್ತು ಪುಸ್ತಕಗಳ ಮೇಲೆ ಹಾಕಿರುವಂಥ ತೆರಿಗೆಯನ್ನೂ ಕೂಡ ರದ್ದುಗೊಳಿಸಬೇಕೆಂಬ ವಿನಂತಿಯನ್ನು ಮಾಡುತ್ತಿದ್ದೇನೆ. ಮನೆಮುಟ್ಟುಗಳಿಗೆ ಸಂಬಂಧಪಟ್ಟ ಎಲ್ಲಾ ಸಾಮಗ್ರಿಗಳಿಗೆ ಹೆಚ್ಚುವರಿ ತೆರಿಗೆ ಹಾಕಿರುವುದನ್ನು ರದ್ದುಪಡಿಸಬೇಕೆಂಬ ವಿನಂತಿಯನ್ನೂ ಮಾಡುತ್ತಿದ್ದೇನೆ. ಮತ್ತು ವಿಶೇಷವಾಗಿ ಸಾಫ್ಟ್‌ವೇರ್ ಪಾರ್ಕಿಗೆ ಸಂಬಂಧಪಟ್ಟ, ಸಾಫ್ಟ್‌ವೇರ್ ಇಂಡಸ್ಟ್ರೀಗೆ ಸಂಬಂಧಪಟ್ಟಂತೆ ನಾಲ್ಕು ಪರ್ಸೆಂಟ್ ತೆರಿಗೆಯನ್ನು ಏನು ಹಾಕಿದ್ದೀರಿ, ಅದರಿಂದ ಇಡೀ ಸಾಫ್ಟ್‌ವೇರ್ ಉದ್ಯಮ, ಇಲ್ಲಿಂದ ಷಿಫ್ಟ್ ಆಗುವ ಸಾಧ್ಯತೆ ಇದೆ. ಅಥವಾ ಹೊಸ ಉದ್ದಿಮೆಗಳು ಇಲ್ಲಿ ಬರುವ ಸಾಧ್ಯತೆಗಳು ಇಲ್ಲದೇ ಇರುವುದರಿಂದ, ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಿ ಈ ನಾಲ್ಕು ಪರ್ಸೆಂಟ್ ತೆರಿಗೆಯನ್ನು ಹಿಂತೆಗೆದುಕೊಳ್ಳಬೇಕೆಂಬ ವಿನಂತಿಯನ್ನು ಮಾಡುತ್ತಿದ್ದೇನೆ. ವಿದ್ಯುತ್ ಕ್ಷಾಮದ ಪರಿಸ್ಥಿತಿಯಲ್ಲಿ ವಿದ್ಯುತ್ ಯೋಜನೆಗಳಿಗೆ

25 ಪರ್ಸೆಂಟಾದರೂ ಕೊಡಬೇಕಾಗಿತ್ತು. ಆದರೆ 11 ಪರ್ಸೆಂಟ್ ಮಾತ್ರ ಕೊಟ್ಟಿದೆ. ಈ ಬಗ್ಗೆ ನನ್ನ ಅತೃಪ್ತಿಯನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ. ಅದೇ ರೀತಿಯಲ್ಲಿ ಕನ್ನಡ, ತುಳು, ಕೊಂಕಣಿ ಮತ್ತು ಕೊಡವ ಭಾಷೆಗಳು. ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರಿಗೆ ನಾನು ಹೇಳುವಂತಾದ್ದು ಎಲ್ಲಾ ರೀತಿಯಲ್ಲಿ, ಈ ಇಲಾಖೆಯನ್ನು ರಾಜ್ಯ ಸರ್ಕಾರ ನೆಗ್ಲೆಟ್ ಮಾಡಿದೆ ಮತ್ತು ಒಂದು ರೀತಿಯಲ್ಲಿ ನಿರ್ಲಕ್ಷ್ಯ ಮಾಡಿದೆ ಎಂದು ಹೇಳುವಂಥ ನೋವನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ. ಕೊಂಕಣಿ ಸಿನಿಮಾಕ್ಕೆ ಸಂಬಂಧಪಟ್ಟ ಮನರಂಜನಾ ತೆರಿಗೆ ವಿನಾಯಿತಿ ಕೊಡದೇ ಇರುವಂತಾದ್ದನ್ನು ಕೂಡ ಈ ಸಂದರ್ಭದಲ್ಲಿ ಖಂಡಿಸುತ್ತಿದ್ದೇನೆ ಮತ್ತು ಬೇರೆ ಬೇರೆ ಸಿನಿಮಾಗಳಿಗೆ ಕೊಟ್ಟ ಹಾಗೆ ಇದಕ್ಕೂ ಕೊಡಬೇಕೆಂಬ ವಿನಂತಿಯನ್ನು ಮಾಡುತ್ತಿದ್ದೇನೆ. ಕರ್ನಾಟಕ ರಾಜ್ಯ ಭಾರತೀಯ ರೈಲ್ವೆ ಇಲಾಖೆಯೊಂದಿಗೆ ಒಡಂಬಡಿಕೆಯಾಗಿ, ರೈಲ್ವೆ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್, ಕರ್ನಾಟಕ ಇದರ ಮೂಲಕ 60 ಕೋಟಿ ರೂಪಾಯಿಗಳನ್ನು ಷೇರು ಬಂಡವಾಳವನ್ನು ಹಾಕುತ್ತೇವೆಂದು ಕಳೆದ ಬಜೆಟ್‌ನಲ್ಲಿ ಹೇಳಿದ್ದರೂ ಕೂಡ, ಕೇವಲ 15 ಕೋಟಿಯನ್ನು ಕೊಟ್ಟಿರುವುದು ಸರಿಯಲ್ಲ. ಇದನ್ನು ಪುನರ್ ವಿಮರ್ಶೆ ಮಾಡಬೇಕೆಂಬ ವಿನಂತಿಯನ್ನು ಮಾಡುತ್ತಿದ್ದೇನೆ. ಮೂರು ಕರಾವಳಿ ಜಿಲ್ಲೆಗಳ ಶಾಸಕರು ಸೇರಿಕೊಂಡು, ಸನ್ಮಾನ್ಯ ಕುಮಾರ್ ಬಂಗಾರಪ್ಪನವರ ನೇತೃತ್ವದಲ್ಲಿ ಪಶ್ಚಿಮ ವಾಹಿನಿ ಎಂಬ ಯೋಜನೆಯನ್ನು ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಿಗೂ ಕುಡಿಯುವ ನೀರು, ನೀರಾವರಿ ಹಾಗೂ ವಿದ್ಯುತ್ ಯೋಜನೆಗಳಿಗೆ ಕಾಯಕಲ್ಪ ಕೊಡುವಂತಹ ಪಶ್ಚಿಮ ವಾಹಿನಿ ಯೋಜನೆಯಾಗಿದೆ. ಅದು ಬಜೆಟ್‌ನಲ್ಲಿ ಯಾವುದೇ ಉಲ್ಲೇಖವಾಗಿಲ್ಲ. ಇದಕ್ಕೆ ಹೆಚ್ಚಿನ ಅನುದಾನವನ್ನು ಕೊಡಬೇಕೆಂಬ ವಿನಂತಿಯನ್ನು ಮಾಡುತ್ತಿದ್ದೇನೆ. ಪೊಲೀಸ್ ಇಲಾಖೆ ಆಧುನೀಕರಣಕ್ಕೆ 75 ಕೋಟಿ ಅಂದರೆ 325 ಕೋಟಿ ರೂಪಾಯಿಗಳನ್ನು ಮೂರು ವರ್ಷಗಳಿಗೆ ಕೊಟ್ಟಿದ್ದೀರಿ. ಲ್ಯಾಬರೇಟರಿಗೆ ಸಂಬಂಧಪಟ್ಟಂತೆ ವಿಶೇಷ ಉಲ್ಲೇಖವನ್ನು ಇದರಲ್ಲಿ ಮಾಡಿದ್ದೀರಿ. ನನಗೆ ಒಂದು ರೀತಿಯಲ್ಲಿ ಸಂತೋಷವಾಗುತ್ತಿದೆ, ಇನ್ನೊಂದು ರೀತಿಯಲ್ಲಿ ಬೇಸರವಾಗುತ್ತಿದೆ. ನಮ್ಮಲ್ಲಿ ಎರಡು ಕೋಟಿ ಹೆರೋಯಿನ್ ಹಿಡಿಯಲಾಯಿತು. ನಾನು, ನಮ್ಮ ಪೊಲೀಸರ ಸಾಹಸವನ್ನು ಮೆಚ್ಚಿದ್ದೆ. ಆದರೆ, ಆ ಹೆರೋಯಿನ್ ಇಲ್ಲಿರುವಂಥ ಲ್ಯಾಬರೇಟರಿಗೆ ತಪಾಸಣೆಗೆ ಬಂದಾಗ, ಕಾಫರ್ ಸಲ್ಫೇಟ್ ಎಂಬ ವರದಿ ಬಂದಿದೆ. ಇಲ್ಲಿ ತಪ್ಪು ಮಾಡಿದವರು ಯಾರು? ಇಡೀ ಪೊಲೀಸ್ ಇಲಾಖೆಯ ನೈತಿಕತೆಯನ್ನು ಪ್ರಶ್ನೆ ಮಾಡುವಂಥಾದ್ದು, ಜನರು ಮಾಡುತ್ತಿದ್ದಾರೆ. ಬಹುಶಃ ಈ ಲ್ಯಾಬರೇಟರಿಯಲ್ಲೂ ಕೂಡ ಇಂತಹ ವ್ಯವಹಾರಗಳು ಆಗುವಂತಾದ್ದು. ಯಾರಿಗೋಸ್ಕರ ಆ ಹೆರೋಯಿನ್ ತಂದಂತಾದ್ದು, ಯಾರನ್ನು ಹಿಡಿದಿದ್ದು, ಅದರ ನಂತರ ಯಾವುದೇ ಸುದ್ದಿಗಳು ಇಲ್ಲ. ಅದರ ನಂತರ 4 ಕೋಟಿ ಹಿಡಿಯಲಾಯಿತು ಎಂದು ಬಂತು. ಈಗ ನಾಲ್ಕು ಕೋಟಿಯಲ್ಲ, ಕೋಟಿಗಟ್ಟಲೆ ಹೆರೋಯಿನ್ ಹಿಡಿದರೂ ಸಹ, ಪೊಲೀಸ್ ಇಲಾಖೆ ಬಗ್ಗೆ ಇರುವಂಥ ಗೌರವ ಹೋಗಿದೆ. ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸನ್ಮಾನ್ಯ ಖರ್ಗೆ ಸಾಹೇಬರ ಹತ್ತಿರ ವಿನಂತಿ ಮಾಡುತ್ತಿದ್ದೇನೆ. ಕ್ರೀಡಾ ನೀತಿಯ ಬಗ್ಗೆ ಗ್ರೇಸ್ ಮಾರ್ಕ್ಸ್ ಕೊಡುವಂಥಾದ್ದು. ಅಥವಾ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆಗೆ ಹೋಗುವವರಿಗೆ ಕೊಡಬೇಕಾದ ವಿಶೇಷ ಪ್ರೋತ್ಸಾಹದ ಬಗ್ಗೆ ಯಾವುದನ್ನೂ ಇದರಲ್ಲಿ ಉಲ್ಲೇಖ ಮಾಡಿಲ್ಲ.

ಇದರ ಬಗ್ಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ನಮ್ಮಲ್ಲಿರುವ ಕ್ರೀಡಾ ಹಾಸ್ಟೆಲ್‌ಗೆ ಅನುದಾನವನ್ನು ಕೊಡದೆ ನಿಂತಿದೆ. ಹಾಸ್ಟೆಲ್‌ಗಳಿಗೆ ಕೊಡುವಂಥ ಅನುದಾನವನ್ನು ಸರಿಯಾದ ಸಮಯದಲ್ಲಿ ಕೊಡಬೇಕೆಂದು ವಿನಂತಿಸುತ್ತೇನೆ. ಅಸಂಘಟಿತ ಕಾರ್ಮಿಕರ ಬಗ್ಗೆ ಬಜೆಟ್‌ನಲ್ಲಿ ಉಲ್ಲೇಖವಿಲ್ಲ. ಕೇರಳದಲ್ಲಿ ಟೈಲರಿಂಗ್ ವರ್ಕ್ಸ್ ವೆಲ್‌ಫೇರ್ ಫಂಡ್ ಬೋರ್ಡ್‌ನ ಮೂಲಕ ರೈತರುಗಳಿಂದ ತಿಂಗಳಿಗೆ ಹತ್ತು ರೂಪಾಯಿಗಳನ್ನು ಸಂಗ್ರಹ ಮಾಡಿ ಅವರ ನಿವೃತ್ತಿಯ ಸಂದರ್ಭದಲ್ಲಿ 60 ಸಾವಿರ ರೂ ಕೊಡತಕ್ಕದ್ದು, ವಿದ್ಯಾರ್ಥಿವೇತನ, ಹೆರಿಗೆ ಭತ್ಯೆ ಕೊಡುವ ಕೆಲಸ ಮಾಡುತ್ತಿದ್ದಾರೆ. ನಮ್ಮಲ್ಲೂ ಅದನ್ನು ಅವಳವಡಿಸುವಲ್ಲಿ ಕ್ರಮ ತೆಗೆದುಕೊಳ್ಳಬೇಕು. ಅದಕ್ಕೆ ಬೇಕಾದ ಎಲ್ಲಾ ಮಾಹಿತಿಯನ್ನು ತಮಗೆ ಒದಗಿಸುತ್ತೇನೆ. ಹೆಚ್ಚಿನ ಹೊರೆ ಇಲ್ಲದೆ ಅದನ್ನು ನಮ್ಮಲ್ಲೂ ಅನುಷ್ಠಾನಕ್ಕೆ ತರಬಹುದು. ನಮ್ಮ ಜಿಲ್ಲೆಯಲ್ಲಿ ಪ್ರತಿಭಾವಂತರಾದ ಶ್ರೀ ಎನ್.ಹೆಚ್. ಭಟ್‌ರವರು ಸ್ಯಾಲರೀಸ್ ಸೇವಿಂಗ್ಸ್ ಪೆನ್‌ಷನ್ ಸ್ಕೀಮ್‌ನ್ನು ಇವಾಲ್ವ್ ಮಾಡಿಕೊಂಡು ಕೊಟ್ಟಿದ್ದಾರೆ. ಇದರ ಬಗ್ಗೆ ಮಾಹಿತಿಯನ್ನು ಮಾನ್ಯ ಸಚಿವರಿಗೆ ಕೊಡುತ್ತಿದ್ದೇನೆ. ಪ್ರಾವಿಡೆಂಟ್ ಫಂಡ್ ಇದ್ದದ್ದನ್ನು ಪೆನ್‌ಷನ್ ಸ್ಕೀಮ್ ರೂಪದಲ್ಲಿ 40 ವರ್ಷಗಳಲ್ಲಿ 21 ಲಕ್ಷ ರೂಪಾಯಿ ಅವರಿಗೆ ಪಡೆಯುವ ರೀತಿಯಲ್ಲಿ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆ ಆಗದ ರೀತಿಯಲ್ಲಿ ಹೇಗೆ ಪಡೆಯಬಹುದು ಎಂಬ ಬಗ್ಗೆ ವಿವರ ಇದೆ. ನಮಗೆ ಸ್ವಾತಂತ್ರ್ಯ ಸಿಕ್ಕಿ 54 ವರ್ಷಗಳಾದರೂ ರಾಜ್ಯದ ಪಿಯು ಪದವಿಪೂರ್ವ ಕಾಲೇಜುಗಳಲ್ಲಿ ಕುಡಿಯುವ ನೀರು, ಶೌಚಾಲಯದ ಸೌಲಭ್ಯವಿಲ್ಲ. 29,729 ಪ್ರಾಥಮಿಕ ಶಾಲೆಗಳಲ್ಲಿ, 1,010 ಪ್ರೌಢ ಶಾಲೆಗಳಲ್ಲಿ ಕುಡಿಯುವ ನೀರಿನ ಸೌಲಭ್ಯವಿಲ್ಲ. 38,116 ಪ್ರಾಥಮಿಕ ಶಾಲೆಗಳಲ್ಲಿ, 1,307 ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಶೌಚಾಲಯದ ವ್ಯವಸ್ಥೆ ಇಲ್ಲ. ಇದನ್ನು ಒದಗಿಸುವುದಾಗಿ ಹೇಳಿದ್ದೀರಿ, ಆದರೆ ಇನ್ನೂ ಸುಮಾರು ಎಂಟು ಸಾವಿರ ಶಾಲೆಗಳಿಗೆ ಅದನ್ನು ಒದಗಿಸಬೇಕಾಗಿದೆ. ಆದ್ದರಿಂದ ತಾವು ಇದರ ಬಗ್ಗೆ ಸಹ ಕ್ರಮ ತೆಗೆದುಕೊಳ್ಳಬೇಕು. ಕನ್ನಡ ಮಾಧ್ಯಮಕ್ಕೆ ಸಂಬಂಧಪಟ್ಟಂತೆ ಪ್ರಾಥಮಿಕ ಶಾಲೆಗಳಲ್ಲಿ ಎಲ್ಲಾ ಆದ್ಯತೆಯನ್ನು ಕೊಟ್ಟರೂ, ನಗರ ಶಾಲೆಗಳು ಇಂಗ್ಲೀಷ್ ವ್ಯಾಮೋಹದಿಂದ ಮುಚ್ಚುವ ಸ್ಥಿತಿಗೆ ಬಂದಿದೆ. ಆದ್ದರಿಂದ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಇಂಗ್ಲೀಷನ್ನು ವಿಶೇಷವಾದ ವಿಷಯವನ್ನಾಗಿ ಮಾಡದಿದ್ದರೆ ಕನಿಷ್ಟ ನಮ್ಮ ನಗರಮಟ್ಟದ ಶಾಲೆಗಳು ಇರಲು ಕಷ್ಟವಾಗುತ್ತದೆ. ಕೂಲಿ ಕಾರ್ಮಿಕ ಮಕ್ಕಳು ಐದು ಹತ್ತು ಸಾವಿರ ಡೊನೇಷನ್ ಕೊಟ್ಟು ಖಾಸಗಿ ಶಾಲೆಗಳಿಗೆ ಸೇರುವುದು ತಪ್ಪುತ್ತದೆ. ಇದರ ಬಗ್ಗೆ ಸರ್ಕಾರ ಸೂಕ್ತವಾಗಿ ಕ್ರಮ ತೆಗೆದುಕೊಳ್ಳಬೇಕು. ತಾವು ಎ.ಡಿ.ಬಿ. ಬಗ್ಗೆ ಹೇಳಿದ್ದೀರಿ. ಆ ಕಾರ್ಯಕ್ರಮ ಘೋಷಣೆಯಾಗಿದೆಯೇ ಹೊರತು ಅನುಷ್ಠಾನಕ್ಕೆ ಬಂದಿಲ್ಲ. ಕುಡಿಯುವ ನೀರು, ಡ್ರೈನೇಜ್ ವ್ಯವಸ್ಥೆಯನ್ನು ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಮಂಡಳಿಯ ಕಡೆಯಿಂದಲೇ ಮಾಡಿಸಬೇಕು. ಯಾರೋ ಗುತ್ತಿಗೆದಾರರು ಮಾಡಿ ಬಿಟ್ಟುಹೋದರೆ ನಾಳೆ ದಿವಸ ಅದು ಹಾಳಾಗಿ ಮೇನ್‌ಟೆನೆನ್ಸ್ ಯಾರು ಮಾಡುತ್ತಾರೆ ಎಂಬುದು ಗೊತ್ತಾಗುವುದಿಲ್ಲ. ಅದಕ್ಕೆ ಜವಾಬ್ದಾರರು ಯಾರು ಎಂದು ಹೇಳಲು ಆಗುವುದಿಲ್ಲ. ಆದ್ದರಿಂದ ಆ ಯೋಜನೆಗಳನ್ನು ಕಡ್ಡಾಯವಾಗಿ ಆ ಇಲಾಖೆಯಿಂದಲೇ ಮಾಡಬೇಕು. ಅನಂತರ ವಾಚ್‌ಡಾಗ್ ಕಮಿಟಿಯನ್ನು ಮಾಡಬೇಕು. ಕರಾವಳಿ ಪಶ್ಚಿಮ ವಾಹಿನಿಯ ಬಗ್ಗೆ ಕೇಳಿದ್ದೇನೆ. ಇನ್ನೂ ಕೆಲಸವೇ ಪ್ರಾರಂಭವಾಗಿಲ್ಲ. ಆದರೆ ಎ.ಡಿ.ಬಿ.ಗೆ ಸಂಬಂಧಪಟ್ಟಂತೆ ಒಂದು ಕಛೇರಿಯು

ನಿರ್ಮಾಣವಾಗುತ್ತಿದೆ. ಆ ಕಛೇರಿಯ ಇಂಟೀರಿಯರ್ ಡೆಕೊರೇಷನ್‌ಗೆ ಒಂದು ಕೋಟಿ ಖರ್ಚು ಮಾಡುತ್ತಿದ್ದಾರೆ ಎಂಬ ಮಾಹಿತಿ ನನ್ನ ಹತ್ತಿರ ಇದೆ. ಜನರ ತೆರಿಗೆಯ ಹಣದಿಂದ ಮಂಗಳೂರು ಮಹಾನಗರ ಪಾಲಿಕೆಯು ವರ್ಷಕ್ಕೆ 30 ಕೋಟಿಯಂತೆ ಹಣವನ್ನು ಕಟ್ಟಬೇಕು. ಅಂಥದ್ದರಲ್ಲಿ ಒಂದು ಕೋಟಿ ವೆಚ್ಚದಲ್ಲಿ ಆ ಕಛೇರಿಯ ಇಂಟೀರಿಯರ್ ಡೆಕೊರೇಷನ್‌ಗೆ ಖರ್ಚು ಮಾಡುವ ಅನಿವಾರ್ಯತೆ ಇದೆಯೇ? ಇದರ ಬಗ್ಗೆ ತಾವು ಪರಿಶೀಲನೆ ಮಾಡಬೇಕು. ನನ್ನ ಜಿಲ್ಲೆ ಮತ್ತು ಇನ್ನಿತರ ಜಿಲ್ಲೆಗಳಿಗೆ ಸಂಬಂಧಪಟ್ಟ ಸಣ್ಣ ಕೈಗಾರಿಕೆಯ ಬಗ್ಗೆ ಹೇಳುವುದಾದರೆ, ಕೈಗಾರಿಕಾ ಉತ್ಪನ್ನಗಳ ಜಿಲ್ಲಾ ಮಾರುಕಟ್ಟೆ ಕೇಂದ್ರಗಳನ್ನು ಎಲ್ಲಾ ಕಡೆಗಳಲ್ಲಿ ಮಾಡಿ ಅದಕ್ಕೆ ಆದ್ಯತೆ ಕೊಟ್ಟಿದ್ದರೆ ಹೆಚ್ಚು ಅನುಕೂಲವಾಗುತ್ತಿತ್ತು. ಉತ್ಪನ್ನ ವಸ್ತುಗಳ ಗುಣಮಟ್ಟವನ್ನು ಕಾಪಾಡುವ ನಿಟ್ಟಿನಲ್ಲಿ, ವಿಶೇಷವಾದ ತಪಾಸಣೆ ಮಾಡುವ ಅತ್ಯಾಧುನಿಕ ಉಪಕರಣಗಳುಳ್ಳ ಲ್ಯಾಬೊರೇಟರಿಯನ್ನು ಮಾಡಿದ್ದರೆ ಅನುಕೂಲವಾಗುತ್ತಿತ್ತು. ಮಂಗಳೂರಿನಲ್ಲಿ ಎಕ್ಸಪೋರ್ಟ್ ಪ್ರೋಮೋಷನ್ ಪಾರ್ಕಿಗೆ ಸ್ಯಾಂಕ್ಷನ್ ಕೊಡಬೇಕು. ಇದರ ಬಗ್ಗೆ ಬಜೆಟ್‌ನಲ್ಲಿ ಉಲ್ಲೇಖ ಮಾಡಿಲ್ಲ. ನಮ್ಮಲ್ಲಿ ಇವತ್ತಿನವರೆಗೆ ಅರ್ಥ ಸ್ಟೇಷನ್ ಮಾಡಿಲ್ಲ. ಮಾಡುವುದಾಗಿ ಘೋಷಣೆ ಮಾಡಿ ಒಂದು ವರ್ಷವಾಯಿತು. ಅದಕ್ಕಾಗಿ ಮೀಸಲಾಗಿರುವ ಜಾಗವನ್ನೂ ಸಹ ಮಾರಾಟ ಮಾಡುವ ಹಂತದಲ್ಲಿದೆ ಎಂಬ ಮಾಹಿತಿ ನನ್ನ ಹತ್ತಿರ ಇದೆ. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣನೆ ಮಾಡಬೇಕೆಂದು ವಿನಂತಿಸುತ್ತಿದ್ದೇನೆ. ವಿಶೇಷವಾಗಿ ಯು.ಎಸ್. ನಿಂದ ಟ್ರಾನ್ಸ್ ಅಟ್ಲಾಂಟಿ ಎಂದ ಹೇಳಿಕೊಂಡು 96 ದೇಶಗಳಿಗೆ ಸಂಪರ್ಕವಾಗುವಂಥ ಪ್ರಾಜೆಕ್ಟ್ ಆಕ್ಸಿಜನ್ ನಾಮಾಂಕಿತ 250 ಮಿಲಿಯನ್ ಜಿ.ಬಿ. ಕೆಪ್ಯಾಸಿಟಿ ಇರುವಂಥ ಆಬ್ಜೆಕ್ಟ್ ಫೈಬರ್ ಕೇಬಲ್ ಡೀಪ್ ಸೀ ನಿಂದ ಹೋಗುತ್ತಿದೆ. ಅದು ಮುಂಬೈಯ ನಂತರ ಮಂಗಳೂರನ್ನು ಕೇಂದ್ರವಾಗಿ ಟಚ್ ಆಗುವಂಥ ವ್ಯವಸ್ಥೆ ಮಾಡಲು ನಮ್ಮಿಂದ ವಿಶೇಷ ಪ್ರಯತ್ನ ಮಾಡಬೇಕು. ಆ ಮೂಲಕ ನ್ಯಾಷನಲ್ ಗೇಟ್ ವೇ ಸ್ವಿಚ್‌ನ್ನು ಅಳವಡಿಸುವ ಮೂಲಕ ಮಾಹಿತಿ ಕೇಂದ್ರದ ಪ್ರಮುಖ ಕೇಂದ್ರವಾಗಿ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕರ್ನಾಟಕವನ್ನು ಬೆಳೆಸಲು ಸಾಧ್ಯವಾಗುತ್ತದೆ. ಈಗಾಗಲೇ 'ಫ್ಲಾಗ್' ಎಂದು 56 ದೇಶಗಳಿಗೆ ಕನೆಕ್ಟ್ ಆಗುವಂಥ ಲೈನ್ ಯಾವುದಿದೆ ಅದು ಮಂಗಳೂರಿನಿಂದ ಕೇವಲ ಆರು ಕಿಲೋಮೀಟರ್ ದೂರದಲ್ಲಿದೆ. ಅದನ್ನು ಲಿಂಕ್ ಮಾಡುವ ಬಗ್ಗೆ ವಿನಂತಿ ಮಾಡಿದರೂ ಯಾವುದೇ ಯೋಜನೆ ಮಾಡಿಲ್ಲವೆಂದು ನೋವಿನಿಂದ ಹೇಳುತ್ತಿದ್ದೇನೆ. ಮೊನ್ನೆ ಸರ್ಕಾರಿ ನೌಕರರ ಸಂಘದ ಕಟ್ಟಡದ ಉದ್ಘಾಟನಾ ಸಂದರ್ಭದಲ್ಲಿ ಅಲ್ಲಿನ ಒಬ್ಬರು ಪ್ರಮುಖರು ಒಂದು ಮಾತನ್ನು ಹೇಳಿದರು. ಸರ್ಕಾರಿ ನೌಕರರು, ಅಧಿಕಾರಿಗಳು ಇರಬಹುದು, ನಾನು ಜನಪ್ರತಿನಿಧಿಗಳಿಗೆ ಹಣವನ್ನು ಕೊಡಬೇಕಾಗಿದೆ. ಆದ್ದರಿಂದ ನಾವು ಹಣವನ್ನು ತೆಗೆದುಕೊಳ್ಳಬೇಕಾಗಿದೆಯೆಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೇಳಿದರು. ದಕ್ಷಿಣ ಕನ್ನಡ ಜಿಲ್ಲೆಯನ್ನು ಹೊರತುಪಡಿಸಿ ಜನಪ್ರತಿನಿಧಿಗಳಿಗೆ ಹಣವನ್ನು ಕೊಡಬೇಕಾಗಿದೆಯೆಂದು ಹೇಳಿದರು. ಅವರು ತೆಗೆದುಕೊಂಡರೂ ನಾವು ತೆಗೆದುಕೊಳ್ಳಬೇಕಾಗಿಲ್ಲವೆಂಬ ಮಾತನ್ನು ಹೇಳಿ ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕೆಂದು ಹೇಳುತ್ತಿದ್ದೇನೆ. ಮಂತ್ರಿಗಳು ಸರ್ಕ್ಯೂಟ್ ಹೌಸ್‌ಗೆ ಬಂದಾಗ ಅವರಿಗೆ ಒದಗಿಸುವಂಥ ಊಟದ ವ್ಯವಸ್ಥೆಗೆ ಎಲ್ಲಿಂದ ಹಣವನ್ನು ತರಬೇಕು, ವಿಲೇಜ್ ಅಕೌಂಟೆಂಟ್, ರೆವಿನ್ಯೂ ಅಧಿಕಾರಿಗಳು ಹಣವನ್ನು ಕ್ರೋಢೀಕರಿಸಬೇಕು ಎನ್ನುವಂಥ ಮಾತು

ಆ ಸಂದರ್ಭದಲ್ಲಿ ಉಲ್ಲೇಖವಾಗಿದೆ. ಆದ್ದರಿಂದ ನಮ್ಮ ವ್ಯವಸ್ಥೆಯನ್ನು ನಾವೇ ಮಾಡಿಕೊಳ್ಳುವ ನಿಟ್ಟಿನಲ್ಲಿ ಹೇಗೆ ಮಾಡಬೇಕು ಎಂಬ ಬಗ್ಗೆ ತಾವು ಯೋಚನೆ ಮಾಡಬೇಕು. ಆಡಳಿತ ಸುಧಾರಣೆಯ ದೃಷ್ಟಿಯಿಂದ ರಾಮಸ್ವಾಮಿಯವರ ವರದಿಯನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಚಿಂತನೆಯಾಗಿದೆ. ನಾಗರೀಕರೊಡನೆ ವ್ಯವಹರಿಸುವಂಥ ಎಲ್ಲಾ ಸರ್ಕಾರಿ ಇಲಾಖೆಗಳಲ್ಲಿ ವಿಧಾನಸಭಾ ಕ್ಷೇತ್ರಕ್ಕೆ ಒಂದರಂತೆ ನಾಗರೀಕ ಸಲಹಾ ಸಮಿತಿಯನ್ನು ನೇಮಿಸಿ ಕಡ್ಡಾಯವಾಗಿ ತಿಂಗಳಿಗೊಂದು ಸಲ ಭೇಟಿ ಕೊಟ್ಟು ಸಭೆ ಮಾಡಿ ಅಲ್ಲಿರುವ ವಿವರಣೆ ತೆಗೆದುಕೊಂಡರೆ ಆ ಮೂಲಕ ಆಡಳಿತ ಸುಧಾರಣೆಗೆ ಅನುಕೂಲವಾಗುತ್ತದೆ. ಟೆಂಡರ್ ಕ್ಲಾಸ್‌ಗಳಲ್ಲಿ ಕಡ್ಡಾಯವಾಗಿ ಗ್ಯಾರೆಂಟಿ ಅವಧಿಯನ್ನು ಮತ್ತು ಅಕೌಂಟಬಿಲಿಟಿ ರೆಸ್ಪಾನ್ಸಿಬಿಲಿಟಿ ತರುವಂಥ ವಿಚಾರವನ್ನು ಅಳವಡಿಸಬೇಕು. ಅಪಘಾತ ಸಂಭವಿಸಿದಾಗ ತುರ್ತು ಪರಿಹಾರ ಕೊಡುವ ನಿಟ್ಟಿನಲ್ಲಿ ಚಿಕಿತ್ಸೆ ಕೊಡುವ ನಿಟ್ಟಿನಲ್ಲಿ ಮೋಟಾರು ವಾಹನ ಕಾಯ್ದೆಗೆ ಸೂಕ್ತ ತಿದ್ದುಪಡಿಯನ್ನು ತರಬೇಕು. ಮನೆಗಳನ್ನು ಕಟ್ಟುವಲ್ಲಿ ಗೃಹ ಮಂಡಳಿಯ ಮೇಲೆ ನಾವು ವಿಶೇಷವಾದ ಆಸಕ್ತಿಯನ್ನಿಟ್ಟು ಕೊಂಡಿದ್ದೇವೆ. ಕರ್ನಾಟಕ ಗೃಹ ಮಂಡಳಿಯ ಎಂ. ಮುನಿರತ್ನಪ್ಪ ಮತ್ತು ಪ್ರಸನ್ನಯ್ಯ ಇವರು ಜ್ವಾಲಾಮಾಲಿನಿ ಹಣಕಾಸು ಕಾರ್ಪೊರೇಷನ್ ಬಗ್ಗೆ ಬೇನಾಮಿ ಸಂಸ್ಥೆಯ ಮೂಲಕ ಎರಡು ಕೋಟಿ ರೂಪಾಯಿ ತೊಡಗಿಸಿ ಇವತ್ತು ಆ ಸಂಸ್ಥೆ ನಷ್ಟದಲ್ಲಿದೆ, ಆ ಹಣ ಎಲ್ಲಿ ಹೋಗಿದೆ ಎಂಬುದು ಗೊತ್ತಿಲ್ಲ. ಅವರ ಮೇಲೆ ಆಪಾದನೆ ಬರುತ್ತಿದೆ. ಸಂಬಂಧಪಟ್ಟ ಸಚಿವರು, ಮುಖ್ಯಮಂತ್ರಿಯವರ ಕಛೇರಿ ಅವರುಗಳನ್ನು ರಕ್ಷಿಸುತ್ತಿದ್ದಾರೆಂದು ಪತ್ರಿಕೆಗಳಲ್ಲಿ ವರದಿ ಬರುತ್ತಿದೆ. ಇದರ ಬಗ್ಗೆ ತಾವು ಪರಿಶೀಲನೆ ಮಾಡಬೇಕು. ನನಗೆ ಬಂದಿರುವ ಮಾಹಿತಿ ಪ್ರಕಾರ ಇದುವರೆಗೆ ಅವರ ಮೇಲೆ ಕ್ರಮವನ್ನು ತೆಗೆದುಕೊಂಡಿಲ್ಲ, ತನಿಖೆ ಮಾಡಿಲ್ಲ. ಇದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ಖರ್ಗೆಯವರ ಕ್ಷೇತ್ರವಾದ ಗುಲ್ಬರ್ಗಾದಲ್ಲಿ ಕೊತ್ತನೂರು ಎಂಬಲ್ಲಿ ಗೃಹ ಮಂಡಳಿಯು 32 ಎಕರೆಯನ್ನು ಸ್ವಾಧೀನಕ್ಕೆ ತೆಗೆದುಕೊಂಡಿತ್ತು. ಅನಂತರ ಭೂಮಿಯ ಮಾಲೀಕ ಅಲಂತಿಮ್ಮಾಪುರ ಎಂಬುವವರು ಹೈಕೋರ್ಟ್‌ನಲ್ಲಿ ಅರ್ಜಿಯನ್ನು ಹಾಕುತ್ತಾರೆ. ಅಪೀಲ್ ಆಗುತ್ತದೆ. ಗೃಹ ಮಂಡಳಿಯು ಅರ್ಜಿದಾರರ ವಿರುದ್ಧ ಅಪೀಲ್ ಹಾಕಿ ಗೃಹ ಮಂಡಳಿಯ ಪರವಾಗಿ ತೀರ್ಮಾನವಾಯಿತು. ಅನಂತರ ಅರ್ಜಿದಾರರು ಮತ್ತೆ ಅಪೀಲ್ ಮಾಡುತ್ತಾರೆ. ಆ ಸಂದರ್ಭದಲ್ಲಿ ವಕೀಲರೇ ಹೋಗದಂಥ ರೀತಿಯಲ್ಲಿ ತಡೆಗಟ್ಟಿ ಪುನಃ ಅಲಂತಿಮ್ಮಾಪುರ್‌ರವರಿಗೆ ಜಾಗ ಹೋಗುವಂತೆ ಮಾಡುತ್ತಿದ್ದಾರೆ. ಇವತ್ತು 60 ಮತ್ತು 40 ವಿಸ್ತೀರ್ಣದ ನಿವೇಶನ ಸುಮಾರು 6 ಲಕ್ಷದಲ್ಲಿ ಮಾರಾಟವಾಗುತ್ತಿದೆ. ಇಂಥ ಅವ್ಯವಹಾರಗಳು ಅಲ್ಲಿ ಆಗುತ್ತಿದೆ. ಗೃಹ ಮಂಡಳಿಯು ಕೇವಲ 'ಡೀ' ನೋಟೀಫಿಕೇಷನ್ ಮಾಡುವ ಕೆಲಸವನ್ನು ಬಿಟ್ಟರೆ ಬೇರೆ ಏನನ್ನೂ ಮಾಡುತ್ತಿಲ್ಲ. ಆಶ್ರಯ ವ್ಯವಹಾರದಲ್ಲಿ ಬೇರೆ ಬೇರೆ ತಾಲ್ಲೂಕುಗಳಿಗೆ, ಜಿಲ್ಲಾ ಪಂಚಾಯಿತಿಗೆ ಕೊಟ್ಟಿರುವ ಹಣದಲ್ಲಿ 10 ಕೋಟಿ 95 ಲಕ್ಷದ 35 ಸಾವಿರದ 936 ರೂಪಾಯಿ ಅವ್ಯವಹಾರವಾಗಿರುವ ಬಗ್ಗೆ ಸಿ.ಒ.ಡಿ. ವರದಿ ಬಂದು ಆರು ತಿಂಗಳುಗಳಾಗಿದೆ. ಇದರ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ನಮ್ಮ ಜಿಲ್ಲೆಯಲ್ಲಿ ಉಳ್ಳಾಲದಲ್ಲಿ ಕಡಲ ಕೊರೆತಕ್ಕೆ ಸಂಬಂಧಪಟ್ಟಂತೆ ಕಲ್ಲುಗಳು ಯಾವುದು ಬಂದಿದೆ, 1993 ರಲ್ಲೇನು ತಡೆಗೋಡೆಯನ್ನು ನಿರ್ಮಾಣ ಮಾಡಿದ್ದಾರೆ, 1 ಕೋಟಿ 38 ಲಕ್ಷ

ವೆಚ್ಚದಲ್ಲಿ ಆ ಗೋಡೆಯನ್ನು ನಿರ್ಮಾಣ ಮಾಡಲಾಗಿ ಅದು ಬಿರುಕು ಬಿಟ್ಟಿದೆ, ಅದರ ಬಗ್ಗೆ ಪಿ.ಡಬ್ಲ್ಯೂ.ಡಿ. ಯಲ್ಲಿ 14 ಕೋಟಿಯ ರೂಪಾಯಿ ಅಂದಾಜು ಆಗುತ್ತದೆ. ಆ ಗೋಡೆಯನ್ನು ಯಾರು ಗುತ್ತಿಗೆದಾರರು ಕಟ್ಟಿದ್ದಾರೆ ಅವರಿಗೆ ಅದನ್ನು ಕೊಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಸರ್ಕಾರ ಮಧ್ಯ ಪ್ರವೇಶಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತಾರೆ. ಕೋರ್ಟ್‌ಗೆ ಹೋಗುತ್ತಾರೆ, ಕೋರ್ಟ್ ಸಹ ಸರ್ಕಾರದ ಪರವಾಗಿಯೇ ಹೇಳುತ್ತದೆ. ಆದರೆ ಆಶ್ಚರ್ಯವೇನೆಂದರೆ, 16 ಕೋಟಿ ರೂಪಾಯಿಗಳ ಈ ಟೆಂಡರ್ ಏನಿದೆ ಅದನ್ನು ಅದೇ ಗುತ್ತಿಗೆದಾರರಿಗೆ ಕೊಡುವ ವ್ಯವಸ್ಥೆಗಳಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರೂ ಇದಕ್ಕೆ ಶಿಫಾರಸ್ಸು ಮಾಡಿರುವ ಅಘಾತಕರ ಸುದ್ದಿ ನನಗೆ ಬಂದಿದೆ. ಇದರ ಬಗ್ಗೆ ತನಿಖೆ ಮಾಡಿ ಕಡ್ಡಾಯವಾಗಿ ಟೆಂಡರ್ ಮೂಲಕ ಕಾಮಗಾರಿ ಆಗಬೇಕೆಂದು ವಿನಂತಿ ಮಾಡುತ್ತೇನೆ. ಅಂಗವಿಕಲರಿಗೆ ಉಚಿತ ಬಸ್ ಪಾಸು, ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಸಾಂತ್ವನ ಯೋಜನೆ ಮುಂತಾದ ಒಳ್ಳೆಯ ಅಂಶಗಳು ಬಜೆಟ್‌ನಲ್ಲಿದೆ. ಇದನ್ನು ಸ್ವಾಗತಿಸುತ್ತೇನೆ. 2001-2002ರ ಬಜೆಟ್ ಯುಗಾದಿಯ ದಿವಸ ಮಂಡನೆಯಾಯಿತು. ಇದರಲ್ಲಿ ಬೇವಿನ ಕಹಿ ಜಾಸ್ತಿ ಇದೆ, ಬೆಲ್ಲದ ಸಿಹಿ ಕಡಿಮೆ ಇದೆಯೆಂದು ಹೇಳುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ): ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಮುಖ್ಯಮಂತ್ರಿ ಕೃಷ್ಣಾರವರನ್ನು ಕೆಲವರು ಹೈಟೆಕ್ ಮುಖ್ಯಮಂತ್ರಿಗಳು ಎಂದರು, ಕೆಲವರು ಟಿವಿ ಮಾಧ್ಯಮಗಳಿಗೆ ಫೋಸ್ ಕೊಡುವ ಮುಖ್ಯಮಂತ್ರಿಯವರು ಎಂದರು, ಇನ್ನು ಕೆಲವರು ಕಂಪ್ಯೂಟರ್ ಕೃಷ್ಣರವರು ಎಂದರು, ಕೆಲವರು ಲಂಡನ್ ಕೃಷ್ಣರವರು ಎಂದು ಕರೆದರು. ಹೀಗೆ ಬೇರೆ ಬೇರೆ ರೀತಿಯಲ್ಲಿ ಅವರನ್ನು ಕರೆದಿದ್ದಾರೆ. ಏನೇ ಆದರೂ ಅವರ ಆಡಳಿತ ಮಾತ್ರ ಸ್ವಲ್ಪವೂ ಕೆಳಗೆ ಇಳಿಯಲೇ ಇಲ್ಲ. ಅವರ ಆಡಳಿತವು ರೈತರ ಡೆಪ್ತ್‌ಗೆ ಹೋಗಲೇ ಇಲ್ಲ. ನಮ್ಮ ಪಕ್ಕದ ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡುರವರೂ ಕೂಡ ಹೀಗೆ ಹೈಟೆಕ್ ಮುಖ್ಯಮಂತ್ರಿ ಎಂದು ಹೇಳಿಕೊಂಕಡು ಹೊರರಾಷ್ಟ್ರಗಳಿಂದ ಹಣವನ್ನು ಪಡೆದು ಅವರ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಇವೊತ್ತು ದೇಶದಲ್ಲಿಯೇ 90-92 ಪರ್‌ಸೆಂಟ್‌ಗಳಷ್ಟಿದೆ ಎಂದು ಹೇಳಿಕೊಂಡು ಕೇವಲ ಬಾರೊಯಿಂಗ್ಸ್‌ನಲ್ಲಿ ಒಂದು ರೀತಿಯಲ್ಲಿ ಮೇನೇಜ್‌ಮೆಂಟ್ ಮಾಡಿಕೊಂಡು ಈ ಬಿಜೆಪಿ ಸರಕಾರದಲ್ಲಿ ಹಣ ತೆಗೆದುಕೊಂಡು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಹೈಟೆಕ್ ಎಂದು ಹೇಳಿ ಮೊನ್ನೆ 150 ಕೋಟಿ ರೂಪಾಯಿಗಳ ಒಂದು ಪ್ರಾಜೆಕ್ಟ್‌ನ್ನು ನಿಮ್ಮ ಕ್ಷೇತ್ರದಲ್ಲಿ ತೆಗೆದುಕೊಂಡಿಲ್ಲವೇ? ಅದನ್ನು ನೀವು ಸ್ವಾಗತಿಸುವುದಿಲ್ಲವೇ?

ಶ್ರೀ ಬಿ.ಎನ್. ಬಚ್ಚೇಗೌಡ: ನಾನು ಅದನ್ನು ಸ್ವಾಗತಿಸುತ್ತೇನೆ. ಆದರಿಂದ ಕೇವಲ ನಮ್ಮ ಕ್ಷೇತ್ರಕ್ಕೆ ಮಾತ್ರವಲ್ಲ ಇಡೀ ರೈತ ಸಮುದಾಯಕ್ಕೆ ಒಳ್ಳೆಯದಾಗುತ್ತದೆ. ಹೀಗೆ, ರೈತರ ಪರವಾಗಿ ಮುಖವಾಡ ಹಾಕಿಕೊಳ್ಳುವುದಕ್ಕೋಸ್ಕರ ಈ ಸಾರಿ ರೈತರ ಪರವಾದ ಬಜೆಟ್ ಎಂದು ತೋರಿಸಬೇಕೆಂದು ಕೆಲವು ನಮ್ಮ ಸದಸ್ಯರಿಗೆ ಯುಗಾದಿಯ ಎಣ್ಣೆ ಹಚ್ಚಿಕೊಂಡು ಯಾರ

ಕೈಗೂ ಸಿಗದಂತಾದರು. ಹೀಗೆ ನಮ್ಮ ಕೃಷ್ಣರವರು ಯಾರ ಕೈಗೂ ಸಿಗದೆ ಜಾರಿಕೊಳ್ಳುವ ಜಾಯಮಾನದವರು. ನಮ್ಮ ಸದಸ್ಯರು ಇವರು ತಮ್ಮ ಕೈಗೆ ಸಿಗುತ್ತಾರೆ ಎಂದುಕೊಂಡಿದ್ದರು. ಅದು ಬಜೆಟ್‌ನ್ನು ನೋಡಿದಾಗ ಅರಿವಿಗೆ ಬರುತ್ತದೆ. ನಮ್ಮ ಗುರುಸ್ವಾಮಿಯವರು ಒಂದು ಮಾತನ್ನು ಹೇಳಿದ್ದಾರೆ. 25 ಲಕ್ಷ ರೂಪಾಯಿಗಳನ್ನು ಶಾಸಕರಿಗೆ ಕೇವಲ ತೋರಿಸಿರುವುದು, ಅದರಲ್ಲಿ ಯಾವ ಯಾವ ಬಾಬಿನಲ್ಲಿ ಉಳಿತಾಯ ಮುಂತಾಗಿ ನೋಡಿಕೊಡುತ್ತೇನೆ ಎಂಬ ರೀತಿಯಲ್ಲಿದೆಯೇ ಹೊರತು ಶಾಸಕರಿಗೆ ನಿಜವಾಗಿಯೂ ಕೊಡಬೇಕೆಂಬ ಖುಷಿಯಿಲ್ಲ. ಖಂಡಿತವಾಗಿಯೂ ನೀವು ಕೊಡುವುದಾದರೆ ನಮಗೆಲ್ಲರಿಗೂ ಸಂತೋಷವೇ. ಏಕೆಂದರೆ ಜಿಲ್ಲಾ ಪಂಚಾಯತ್‌ನವರು ಅವರ ಅಭಿವೃದ್ಧಿಕಾರ್ಯಗಳಿಗಾಗಿ ಅವರು ಹಣವನ್ನು ತೆಗೆದುಕೊಳ್ಳುತ್ತಾರೆ. ಅಂತೆಯೇ ತಾಲ್ಲೂಕು ಪಂಚಾಯತ್‌ಗಳಲ್ಲಿಯೂ ನಮ್ಮನ್ನು ಸೇರಿಸಿಕೊಳ್ಳುವುದಿಲ್ಲ. ನಮ್ಮನ್ನು ಒಂದು ರೀತಿಯಲ್ಲಿ ಎಲ್ಲರೂ ಬಹಿಷ್ಕರಿಸಿಬಿಟ್ಟಿದ್ದಾರೆ. ಶಾಸಕರು ಅಂದರೆ ನಮಗೆ ಯಾವ ಕಿಮ್ಮತ್ತೂ ಇಲ್ಲ ಎನ್ನುವಂತಾಗಿದೆ.

8.20 ಪಿ.ಎಂ.

ನಮ್ಮ ಕ್ಷೇತ್ರದ ಜನರಿಗೆ ನಾವು ಕೇಳಿದ ಪ್ರಶ್ನೆಗಳಿಗೆ ಉತ್ತರ ಹೇಳುವುದು ಕಷ್ಟವಾಗಿದೆ. ನಾವು ಏನಾದರೂ ಮಾಡೋಣ ಎಂದರೆ ನಮಗೆ ಅಲ್ಲಿ ಬೆಲೆಯೇ ಇಲ್ಲ. ಆದ್ದರಿಂದ ಇವೊತ್ತು ಶಾಸಕರಿಗೆ 25 ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದನ್ನು ನಾನು ಸ್ವಾಗತಿಸುತ್ತೇನೆ. ಅದು ಈಗ ತಾನೇ ಪ್ರಾರಂಭಮಾಡಿದ್ದಾರೆ. ಒತ್ತಾಯದ ಮೇರೆಗೆ 25 ಲಕ್ಷವಾದರೂ ಸಿಕ್ಕಿದೆ. ಅದು ಮುಂದೆ 50 ಲಕ್ಷ ರೂ ಎಂದು ಕೂಡ ಆಗಬಹುದು. ಎಂ.ಪಿ. ಗಳಿಗೆ ಕೊಡುವ ರೀತಿಯಲ್ಲಿ ಆ ಗ್ರ್ಯಾಂಟ್ 2 ಕೋಟಿಗಳೂ ಆಗಬಹುದು. ಅಭಿವೃದ್ಧಿಯ ದಿಶೆಯಲ್ಲಿ ನಮ್ಮ ಹಿಂದೆಯೂ ಜನರು ಬರುತ್ತಾರೆ. ಅವರ ಕೆಲಸ ಕಾರ್ಯಗಳನ್ನು ಮಾಡಲು ನಮಗೆ ಅನುಕೂಲವಾಗುತ್ತದೆ.

ಶ್ರೀ ಎಂ. ಮಹದೇವ (ಜವಳಿ ಸಚಿವರು): ತಮಗೆ ಎಂ.ಪಿ. ಗಳಷ್ಟು ಗ್ರ್ಯಾಂಟ್ ಬೇಕೆಂದರೆ ತಾವುಗಳು ಎಂ.ಪಿ. ಯಾಗಿ ದೆಲ್ಲಿಗೆ ಹೋಗಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ: ತಾವುಗಳು ಹೇಳಿದ ಹಾಗೆ ಎಂ.ಪಿ. ಆಗಿ ದೆಹಲಿಗೆ ಹೋಗಬೇಕೆನ್ನುವ ಆಶೆಯೂ ಕೂಡ ಇದೆ. ಮುಂದೆ ಅವಕಾಶ ಬಂದಾ ನೋಡೋಣ. ಬಜೆಟ್ ಪುಸ್ತಕದಲ್ಲಿ 2000-2001 ರಲ್ಲಿ ಬಹಳಷ್ಟು ಭರವಸೆಗಳನ್ನು ಕೊಟ್ಟರು. ಈ ಸರಕಾರವು ಬಂದಿರುವುದೇ ಭರವಸೆಗಳ ಮೂಲಕ. ಆಶ್ವಾಸನೆಗಳು, ಭರವಸೆಗಳು, ಹಣವನ್ನು ತೋರಿಸುವಂತಾದ್ದು, ಯಾವುದನ್ನು ಕೇಳಿದರೂ ಅದಕ್ಕೆ ಸಾವಿರಾರು ಕೋಟಿಗಳ ಸಂಖ್ಯೆ. ಅದರಲ್ಲಿ ಒಂದು ಕೋಟಿ ಕೂಡ ಕಡಿಮೆ ಎಂದು ಇಲ್ಲ. ಅದನ್ನು ನೋಡಿ ರಾಜ್ಯಕ್ಕೆ ಜನರಿಗೆ ಏನೋ ಬಹಳ ಅನುಕೂಲ ಬಂದು ಬಿಟ್ಟಿದೆ ಅಂದುಕೊಂಡಿದ್ದೆವು. ಮಾನ್ಯ ಮಹದೇವರವರು ರೇಷ್ಮೆ ಸಂಪತ್ತು ಎಂದು ತಂದರು. ಎಲ್ಲಿದೆ ಈ ರೇಷ್ಮೆ ಸಂಪತ್ತು ಈ ರಾಜ್ಯದ 27 ಜಿಲ್ಲೆಗಳಲ್ಲಿ? ಟ್ರೆಡಿಶನಲ್ ಆಗಿ ಕೋಲಾರ, ಬೆಂಗಳೂರು, ಮೈಸೂರು ಮುಂತಾದ ಕೆಲವು ಜಿಲ್ಲೆಗಳಲ್ಲಿ ಇದೆ. ಅದನ್ನು ಬಿಟ್ಟು 27 ಜಿಲ್ಲೆಗಳಿಗೂ ರೇಷ್ಮೆ ಸಂಪತ್ತು ಕೊಟ್ಟು ಬಿಟ್ಟಿದ್ದಾರೆ. ನಾವು ಬೆಳೆಯುವವರಿಗೆ ಯಾವ ಸಂಪತ್ತೂ ಇಲ್ಲ. ಹಾಗಾದರೆ ಯಾರಿಗೆ ಈ ಸಂಪತ್ತು?

ಶ್ರೀ ಎಂ. ಮಹದೇವ (ಜವಳಿ ಸಚಿವರು): ಮಾನ್ಯ ಅಧ್ಯಕ್ಷರೇ, ರೇಷ್ಮೆ ಸಂಪತ್ತು ಕಾರ್ಯಕ್ರಮವನ್ನು ಯಾವ ಜಿಲ್ಲೆಗಳಲ್ಲಿ ಟ್ರೆಡಿಶನಲ್ ಆಗಿ ಇಲ್ಲವೋ ಅಲ್ಲಿಗೆ ಪ್ರಯೋಗಾತ್ಮಕವಾಗಿ ಕೊಡುತ್ತಾ ಇದ್ದೇವೆ. ಇದು ಆದ್ಯತೆಯ ಮೇರೆಗೆ ನಡೆಯುತ್ತಿದೆ.

ಶ್ರೀ ಬಿ.ಎನ್. ಬಚ್ಚೇಗೌಡ: ಹಾಗೆ ಆಗಿಲ್ಲವೆಂದು ನಾನು ಹೇಳುತ್ತಿದ್ದೇನೆ. ನೀವು ಅದಕ್ಕೆ ಹಣವನ್ನು ತೊಡಗಿಸುವ ಪ್ರಯತ್ನ ಮಾಡಿರಬಹುದು. ಇವೊತ್ತು ಬೈವೋಲ್ಟಿನ್ ಏರಿಯಾ ಎಂದು ನಾವೇನು ಹೇಳುತ್ತಿದ್ದೇವೆ, ಡಬ್ಲ್ಯೂಟಿಓ ದಲ್ಲಿ ಇದೆಲ್ಲಾ ಏಕೆ ಹೋಗಿದೆ ಅಂದರೆ ಮೊದಲು ಈ ದೇಶದಲ್ಲಿ ಉದಾರೀಕರಣಕ್ಕೆ ಜಾಗ ಮಾಡಿಕೊಟ್ಟರು. ಹೀಗೆ ಜಾಗತೀಕರಣಕ್ಕೆ ನಾವು ಹೋದೆವು. ತದನಂತರ ಡಬ್ಲ್ಯೂಟಿಓ ಎಂದು ಹೋದೆವು. ಅಂದರೆ ಜಗತ್ತಿನಲ್ಲಿ ಎಲ್ಲವೂ ಮುಕ್ತವಾಗಿ ಕಾಂಪಿಟೇಟಿವ್ ಆಗಿ ಇರಲಿ ಎಂದು ಹಾಗೆ ಆಯಿತು. ಹಾಗೆ ಕಾಂಪಿಟೇಟಿವ್ ಆಗಿ ಮಾಡಲು ಆರ್ಟಿಕಲ್ ಒಂದನ್ನು ಬಿಟ್ಟರೆ ಯಾವ ಏರಿಯಾದಲ್ಲಿ ಬೈವೋಲ್ಟಿನ್ ರೇಷ್ಮೆಯನ್ನು ಎಲ್ಲಿ ಜಾಸ್ತಿ ಮಾಡಿದ್ದೀರಿ? ಗುಣಮಟ್ಟದ ಅಭಿವೃದ್ಧಿಯ ಕುರಿತು ಎಲ್ಲಿ ಏನು ಮಾಡಿದ್ದೀರಿ? ನಮ್ಮಲ್ಲಿ ಅಂಥ ಗುಣಮಟ್ಟ ಇಲ್ಲ. ಇವೊತ್ತು ಚೈನಾ, ಕೋರಿಯ ಅಥವಾ ಜಪಾನ್ ಸಿಲ್ಕ್ ನಮಗೆ ಬರಬೇಕು. ಗುಣಮಟ್ಟವಿಲ್ಲದ ಕಾರಣ ಅಲ್ಲಿಂದ ತರಿಸಿಕೊಳ್ಳುವ ಸ್ಥಿತಿ ಬಂತು. ಮಾನ್ಯ ಪಶುಸಂಗೋಪನಾ ಸಚಿವರಲ್ಲಿ ಒಂದು ವಿನಂತಿ. ನಮ್ಮ ಹಾಲು ಉತ್ಪನ್ನಗಳು ಹೊರರಾಜ್ಯ, ದೇಶಗಳಿಗೆ ಹೋಗುವುದಿಲ್ಲ. ಅದೇ ಬೇರೆ ದೇಶಗಳಿಂದ ನಮ್ಮ ದೇಶಕ್ಕೆ ಅಲ್ಲಿನ ಹಾಲಿನ ಪ್ರಾಡಕ್ಟ್ಸ್ ಬರುತ್ತಿವೆ. ಬೆಣ್ಣೆ, ಚೀಸ್, ಹಾಲಿನ ಪುಡಿ ಮುಂತಾಗಿ ನಮ್ಮಲ್ಲಿಗೆ ಬರುತ್ತಿದೆ. ಹಾಗೆ ಅವರ ಗುಣಮಟ್ಟಕ್ಕೆ ನಾವೂ ಕೂಡ ಬಂದಾಗ ನಮ್ಮ ಉತ್ಪಾದನೆಗಳಿಗೂ ಬೇಡಿಕೆ ಬರುತ್ತದೆ.

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಸಚಿವರು): ಮಾನ್ಯ ಅಧ್ಯಕ್ಷರೇ, ನಮ್ಮ ದೇಶದಿಂದ ಹಾಲಿನ ಉತ್ಪನ್ನಗಳು ಹೊರದೇಶಕ್ಕೆ ಹೋಗಲು ನಾವು ಅಶಕ್ತರು ಮತ್ತು ಗುಣಮಟ್ಟ ಕಡಿಮೆ ಎಂದು ಅಲ್ಲ. ಈಗ ಭಾರತ ಸರಕಾರವನ್ನು ಆಳುತ್ತಾ ಇರುವವರು ಹೊರರಾಷ್ಟ್ರಗಳಿಂದ ಹಾಲಿನ ಪುಡಿಯನ್ನು ತರಿಸುವ ಕೆಲಸವನ್ನು ಮಾಡಿರದಿದ್ದರೆ ಸರಿಯಾಗುತ್ತಿತ್ತು. ನಮ್ಮಲ್ಲಿ ಪ್ರೊಡಕ್ಷನ್ ಕಾಸ್ಟನ್ನು ಮೀಟ್ ಮಾಡಲು ಆಗುತ್ತಿಲ್ಲ. ನಮಗೆ ಪ್ರೊಡಕ್ಷನ್ ಕಾಸ್ಟ್ 78 ರೂಪಾಯಿಗಳು ಅವರದ್ದು 58 ರೂಪಾಯಿಗಳು. ಸಬ್ಸಿಡಿ ಕೊಟ್ಟು ಅವರು ಹೊರದೇಶದಿಂದ ಇಲ್ಲಿಗೆ ತಂದು ಹಾಕುತ್ತಾರೆ. ಹೊರಗಿನಿಂದ ತಂದು ಇಲ್ಲಿ ಡಂಪ್ ಮಾಡುತ್ತಿರುವುದರಿಂದ ನಮ್ಮ ಮಾಲನ್ನು ನಾವು ಖರ್ಚು ಮಾಡಲು ಆಗುತ್ತಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ರಾಮಯ್ಯನವರು ಮಾತನಾಡುವಾಗ ಡಬ್ಲ್ಯೂಟಿಓ ವನ್ನು ಸ್ವಾಗತ ಮಾಡಿದರು. ನಾವೂ ಕೂಡ ಜಾಗತೀಕರಣದೊಂದಿಗೆ ಸಾಗಬೇಕು, ನಾವೂ ಕೂಡ ನಮ್ಮ ಉತ್ಪನ್ನಗಳನ್ನು ಆ ಮಟ್ಟಕ್ಕೆ ಸರಿಹೊಂದಿಸಿಕೊಳ್ಳಬೇಕು, ಆಗ ಎಲ್ಲಾ ಸರಿಹೋಗುತ್ತದೆ ಎಂಬಿತ್ಯಾದಿಯಾಗಿ ಹೇಳಿದರು. ಹಾಗೆ ಎಲ್ಲಿ ಆಗಿದೆ? ನಾನು ರೇಷ್ಮೆ ಕೃಷಿ ವಿಚಾರದಲ್ಲಿ ತಂದ ಯೋಜನೆಗಳನ್ನು ಸ್ವಾಗತಿಸುತ್ತೇನೆ. ರೇಷ್ಮೆ ಕೃಷಿಯಲ್ಲಿ ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಾವೇ ಅತೀ ಹೆಚ್ಚು ಉತ್ಪಾದನೆ ಮಾಡುವವರಾಗಿದ್ದೇವೆ. ದೇಶದ ಒಟ್ಟು ಉತ್ಪಾದನೆಯಲ್ಲಿ ಶೇಕಡ 60 ರಷ್ಟು ನಮ್ಮ ರಾಜ್ಯದಲ್ಲಿ ಉತ್ಪತ್ತಿಯಾಗುತ್ತಿದೆ. ಆ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಸಾಧನೆಯನ್ನು

ಸಾಧಿಸಲು ಸಾಕಷ್ಟು ಅವಕಾಶಗಳೂ ಕೂಡ ಇವೆ. ಇದಕ್ಕೆ ಎಕ್ಸ್‌ಪ್ಯಾನ್‌ಶನ್ ಪ್ರೋಗ್ರಾಂಗಳನ್ನು ಹಾಕಿಕೊಂಡಿದ್ದೀರಾ? ಅದರ ಅಭಿವೃದ್ಧಿಗಾಗಿ ನಾವು ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡು ರೇಷ್ಮೆ ಕೃಷಿಗೆ ನೆರವಾಗುತ್ತಿದ್ದೇವೆ? ಇವೊತ್ತು 22 ಲಕ್ಷ ಲೀಟರ್‌ಗಳಷ್ಟು ಹಾಲು ಉತ್ಪಾದನೆಯು ನಮ್ಮಲ್ಲಿದೆ. 1995 ರಲ್ಲಿ 11 ಲಕ್ಷ ಲೀಟರ್‌ಗಳಷ್ಟು ಇದ್ದುದ್ದು 2001 ರಲ್ಲಿ 22 ಲಕ್ಷಗಳಷ್ಟು ಆಗಿದೆ. ಅದನ್ನು ನಾವು ಅಭಿನಂದಿಸಬೇಕಾಗುತ್ತದೆ. ಹಾಲು ಉತ್ಪಾದನೆಯಲ್ಲಿ ರಾಷ್ಟ್ರದಲ್ಲಿ 3-4ನೇ ಸ್ಥಾನದಲ್ಲಿ ನಾವಿದ್ದೇವೆ.

ಶ್ರೀ ಎ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೇ, ನಮ್ಮ ಒಟ್ಟು ಪ್ರಮಾಣ 1 ಕೋಟಿ 14 ಲಕ್ಷ ಲೀಟರ್ 25 ಸಾವಿರ ಲೀಟರ್‌ಗಳು. ನಾವು ಮಾರುಕಟ್ಟೆಗೆ ತೆಗೆದುಕೊಳ್ಳುವುದು ಅಂದರೆ ನಮ್ಮ ಕೆಎಂಎಫ್, ಮಿಲ್ಕ್ ಡೈರಿ ಮತ್ತು ಮಿಲ್ಕ್ ಯೂನಿಯನ್‌ಗಳಿಂದ 26 ಲಕ್ಷ ಲೀಟರ್‌ಗಳು. ನಮಗೆ ಮಾರಾಟ ಮಾಡಲು ಅವಕಾಶ ಇರುವುದು ಕೇವಲ 18 ಲೀಟರ್‌ಗೆ ಮಾತ್ರ.

ಶ್ರೀ ಬಿ.ಎನ್. ಬಚ್ಚೇಗೌಡ: ಅದಕ್ಕಾಗಿ ಮಾರ್ಕೆಟಿಂಗ್ ಎಕ್ಸ್‌ಪ್ಯಾನ್‌ಷನ್ ಪ್ರೋಗ್ರಾಂಗಳನ್ನು ತಾವುಗಳು ಮಾಡಿಕೊಳ್ಳಬೇಕು. ರೈತರಿಗೆ ಇವೊತ್ತು 8-55 ರೂಪಾಯಿಗಳನ್ನು ಕೊಡುತ್ತೀರಿ ಅದನ್ನು ಹತ್ತು ರೂಪಾಯಿಗಳಿಗೆ ಏರಿಸಬೇಕು. ಇವೊತ್ತು ನಮ್ಮ ರಾಜ್ಯಕ್ಕೆ ಹೆರಿಟೇಜ್ ಮಿಲ್ಕ್ ಬರುತ್ತಾ ಇದೆ, ಅದು ಪಕ್ಕದ ರಾಜ್ಯದ ಮುಖ್ಯಮಂತ್ರಿಗಳ ಸಂಬಂಧಿಯವರದ್ದು ಎಂದು ಹೇಳುತ್ತಾರೆ. ಆದರೆ ನಮ್ಮ ನಂದಿನಿ ಹಾಲು ರಾಜ್ಯದಲ್ಲಿ ಮನೋಪಲಿಯಾಗಿ ಉಳಿದುಕೊಂಡಿದೆ. ನಾವು ಆ ಕುರಿತು ಯಾರಿಗೂ ಏನೂ ಕಡಿಮೆಯಾಗಿಲ್ಲ. ಹಾಗೆಯೇ ನೀಲಿಗಿರೀಸ್ ಹಾಲು ಕೂಡ ನಮ್ಮಲ್ಲಿ ಬರುತ್ತಾ ಇದೆ. ಅದೇ ರೀತಿಯಲ್ಲಿ ಸಾಕಷ್ಟು ಖಾಸಗಿಯವರು ರಾಜ್ಯಕ್ಕೆ ತಮ್ಮ ಹಾಲು ತಂದು ಮಾರಾಟ ಮಾಡುತ್ತಿದ್ದಾರೆ. ಹೀಗಿರುವಾಗ ನಮ್ಮ ಹಾಲು ಹೇಗೆ ಮಾರಾಟವಾಗುತ್ತದೆ? ಬಜೆಟ್‌ನಲ್ಲಿ ಆಧುನಿಕ ಕಸಾಯಿಖಾನೆ ಮಾಡುತ್ತೇವೆಂದು ಹೇಳಿದ್ದಾರೆ. ಅದರ ಮಂಜೂರಾತಿ ಯಾವೊತ್ತೋ ಆಗಿಬಿಟ್ಟಿದೆ. ಆದರೆ ತುಂಬಬೇಕಾದ ಹಣವನ್ನು ನಾವು ತುಂಬಿಲ್ಲ. ರಾಜ್ಯದಲ್ಲಿನ 27 ಜಿಲ್ಲೆಗಳಲ್ಲಿ ಒಂದು ಜಿಲ್ಲೆಯಲ್ಲಿಯೂ ಆಧುನಿಕ ಕಸಾಯಿಖಾನೆ ಮಾಡಲು ಸಾಧ್ಯವಾಗಲಿಲ್ಲ. ಕೇಂದ್ರದವರು ನಮಗೆ ಈ ಬಗ್ಗೆ 50 ಲಕ್ಷ ರೂಪಾಯಿಗಳನ್ನು ಕೊಟ್ಟು 10 ವರ್ಷಗಳಾಗಿವೆ. ಕಾರ್ಪೊರೇಷನ್‌ನವರು ಕಟ್ಟ ಬೇಕಾದ 25 ಲಕ್ಷ ರೂಪಾಯಿಗಳನ್ನು ತುಂಬಿಲ್ಲ. 25 ಲಕ್ಷ ರೂಪಾಯಿಗಳನ್ನು ತುಂಬದೇ ಹೊಸ ಕಾನ್‌ಸೆಪ್ಟ್‌ನ್ನು ನಾವು ತಂದಿದ್ದೇವೆ ಎಂದು ಹೇಳುತ್ತಾ ಆಧುನಿಕ ಕಸಾಯಿಖಾನೆ ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಲ್ಲಾ ಇದನ್ನು ನಾವು ಬೊಗಳೆ ಎಂದು ತಿಳಿದು ಕೊಳ್ಳಬೇಕಾಗುತ್ತದೆ. ಹೀಗೆ ರಾಜ್ಯದ ಜನತೆಯನ್ನು ತಪ್ಪುದಾರಿಗೆ ಎಳೆಯಬಾರದು.

ಶ್ರೀ ಎ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೇ, ತಾವುಗಳೂ ಕೂಡ ಐದು ವರ್ಷಗಳ ಕಾಲ ಸರಕಾರವನ್ನು ನಡೆಸಿದ್ದೀರಿ. ನಿಮ್ಮಿಂದಲೂ ಕೇಂದ್ರದವರು ಕೊಟ್ಟ ಹಣವನ್ನು ಉಪಯೋಗ ಮಾಡಲು ಆಗಲಿಲ್ಲ. ಆದರೆ ಕಾರ್ಪೊರೇಷನ್‌ನವರು ಕೊಟ್ಟಿಲ್ಲವೆಂದು ಹೇಳಬೇಡಿ. ಅವರು ಹಣ ಕಟ್ಟಿದ್ದಾರೆ. ಆದೇಶವನ್ನು ತೆಗೆದುಕೊಂಡಿದ್ದೇವೆ. ಟೆಂಡರ್ ಕರೆದು ಫೈನಲೈಸ್ ಮಾಡಿದ್ದೇವೆ. ಜೊತೆಗೆ ಭಾರತ ಸರಕಾರವು ಆಶ್ವಾಸನೆ ನೀಡಿ ಎಲ್ಲಾ ಜಿಲ್ಲೆಗಳಲ್ಲಿಯೂ ಮಾಡಲು ನಾವು

ಕಾಂಟ್ರಿಬ್ಯೂಷನ್ ಕೊಡುತ್ತೇವೆಂದು ಹೇಳಿದ್ದಾರೆ. ಆ ಕಾರಣದಿಂದ ಆ ಕಾರ್ಯಕ್ರಮವನ್ನು ಬಜೆಟ್‌ನಲ್ಲಿ ನಮ್ಮ ಜನರ ಮುಂದೆ ಹೇಳಿದ್ದೇವೆ. ನೀವು ಐದು ವರ್ಷ ಸುಮ್ಮನಿದ್ದಿರಿ. ನಾವು ಒಂದೂವರೆ ವರ್ಷದಿಂದ ಆ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಸಚಿವರ ಮಾತಿಗೆ ಆಡಳಿತ ಪಕ್ಷದ ಮಾನ್ಯ ಸದಸ್ಯರು ಚಪ್ಪಾಳೆ ತಟ್ಟಿದರು. ಬಹುಶಃ ಅವರು ಹೊಸ ಸದಸ್ಯರು ಇರಬೇಕು. ನಾವು 10 ಸಾವಿರ ಕೋಟಿ ರೂಪಾಯಿಗಳ ಬಜೆಟ್ ಇದ್ದಾಗ 10 ಕೋಟಿ 40 ಲಕ್ಷ ರೂಪಾಯಿಗಳನ್ನು ಔಷಧಿಗಳಿಗಾಗಿ ಕೊಟ್ಟಿದ್ದೆವು. ಇವೊತ್ತು 20 ಸಾವಿರ ಕೋಟಿ ರೂಪಾಯಿಗಳ ಬಜೆಟ್ ಇಟ್ಟುಕೊಂಡಿದ್ದಾರೆ, 5 ಕೋಟಿ 40 ಲಕ್ಷ ರೂಪಾಯಿಗಳನ್ನು ಔಷಧಿಗಾಗಿ ಕೊಟ್ಟಿದ್ದಾರೆ. ಐದು ಕೋಟಿಗಳಷ್ಟು ಕಡಿಮೆ ಕೊಟ್ಟಿದ್ದಾರೆ ಎಂದು ತಿಳಿಯದೆ ಅವರುಗಳು ಚಪ್ಪಾಳೆ ತಟ್ಟಿದ್ದಾರೆ.

ಶ್ರೀ ಕೆ. ಷಡಾಕ್ಷರಿ: ನಾವು ಹೊಸ ಸದಸ್ಯರಿಂದಲೂ ರಾಜ್ಯ ರಾಜಕಾರಣದಲ್ಲಿ ಸೇವೆ ಮಾಡಿಕೊಂಡು ಬಂದಿದ್ದೇವೆ. ತಾವುಗಳು ನಮ್ಮನ್ನು ಹೊಸಬರೆಂದು ಹೇಳುತ್ತಿದ್ದೀರಿ.

(ಗೊಂದಲ)

ಶ್ರೀ ಎ. ಕೃಷ್ಣಪ್ಪ: ಶೀಫ್ ಬೋರ್ಡ್, ಜಿಲ್ಲಾ ಪಂಚಾಯತ್ ಮತ್ತು ನಾವು ಡೈರೆಕ್ಟ್ ಆಗಿ ಕೊಡುತ್ತಿರುವುದನ್ನು ಸೇರಿಸಿದರೆ ಅದು ನಿಮಗಿಂತ ಜಾಸ್ತಿ ಇದೆ. ನೀವು ಅಂದುಕೊಂಡಷ್ಟು ನಾವು ಕೊಟ್ಟಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ: ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಶೀಪ್‌ಬೋರ್ಡ್‌ಗೆ ಆ ಸಂದರ್ಭದಲ್ಲಿ ಮಾನ್ಯ ಸಿದ್ದರಾಮಯ್ಯನವರು ಹಣಕಾಸಿನ ಸಚಿವರಾಗಿದ್ದಾಗ ಮೂರು ಕೋಟಿ ರೂಪಾಯಿಗಳನ್ನು ಕೊಟ್ಟರು. ಆ ಹಣಕ್ಕೋಸ್ಕರ ಪ್ರತ್ಯೇಕ ಹೆಡ್ ಇಟ್ಟರು. ಅದಕ್ಕಾಗಿ ಕೃಷಿ ವಿಶ್ವವಿದ್ಯಾಲಯ, ಅನಿಮಲ್‌ಹಸ್ಬೆಂಡರಿ, ಮುಂತಾಗಿ ಪ್ರತ್ಯೇಕವಾದ ಹೆಡ್‌ಗಳನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ. ಇಲ್ಲವಾದರೆ ಇದು ಉದ್ಧಾರವಾಗುವುದಿಲ್ಲ. ಮಾನ್ಯ ಸಚಿವರ ಕಾರ್ಯಕ್ರಮತೆಯನ್ನು ನಾನು ಸ್ವಾಗತಿಸುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಸದಸ್ಯರುಗಳು ಚಪ್ಪಾಳೆಯನ್ನು ಹೊಡೆಯುತ್ತಿದ್ದಾರೆ. ಹೊಸಬರು, ಬೇರೆ ಏನೂ ಮಾಡಲು ಆಗುವುದಿಲ್ಲವಲ್ಲಾ, ಅದನ್ನಾದರೂ ಮಾಡಲಿ.

ಶ್ರೀ ಕೆ. ಷಡಾಕ್ಷರಿ: ಮಾನ್ಯ ಅಧ್ಯಕ್ಷರೇ, ನಾವು ಸದನಕ್ಕೆ ಹೊಸಬರು. ಜಿಲ್ಲಾ ರಾಜಕಾರಣದಲ್ಲಿ ಸಾಕಷ್ಟು ಕೆಲಸ ಮಾಡಿದವರು ನಾವು. ಆದ್ದರಿಂದ, ಹೊಸಬರೆಂದು ನಮ್ಮನ್ನು ಹಳಿಯಬಾರದು. ಕ್ರಿಟಿಸೈಸ್ ಮಾಡಬಾರದು.

ಶ್ರೀ ಬಿ.ಎನ್. ಬಚ್ಚೇಗೌಡ: ನಾನು ತಮಾಷೆಗಾಗಿ ಆ ಮಾತು ಹೇಳಿದ್ದೇನೆ. ತಪ್ಪಾಗಿ ಭಾವಿಸಬೇಡಿ. ನಾನು ಯಾರನ್ನೂ ಕ್ರಿಟಿಸೈಸ್ ಮಾಡುವುದಿಲ್ಲ. ದಯಮಾಡಿ ಆ ಮಾತನ್ನು ತಪ್ಪಾಗಿ ಭಾವಿಸಬೇಡಿ. ಇಲಾಖೆಯ ಇಂಟ್ರೆಸ್ಟ್‌ನಲ್ಲಿ ನಾನು ಮಾತನಾಡುತ್ತಿದ್ದೇನೆ.

ಇವೊತ್ತು ವೆಟರ್ನರಿ ಯೂನಿವರ್ಸಿಟಿ ಆಗಿದ್ದರೆ ಮಾನ್ಯ ಸಚಿವರಿಗೆ ಇನ್ನೊಂದು ಗರಿಯನ್ನು ಕಿರೀಟಕ್ಕೆ ಸೇರಿಸಬಹುದಾಗಿತ್ತು. ನಾನು ಸಚಿವನಾಗಿದ್ದಾಗ ಇವರ ಬಗ್ಗೆ ಹೋರಾಟ ಮಾಡಿದರೂ ಆಗಲಿಲ್ಲ. ಅದನ್ನು ಕೆಲವರು ಬಿಟ್ಟುಕೊಡುವುದಿಲ್ಲ. ನಾವು ಇದ್ದಾಗ ಶ್ರೀಮಾನ್ ಬೈರೇಗೌಡರು ನಮಗೆ ಬಿಟ್ಟುಕೊಟ್ಟಿಲ್ಲ. ಈಗ ಇವರಿಗೂ ಕೂಡ ಕೃಷಿ ಸಚಿವರು ಬಿಟ್ಟು ಕೊಡುವುದಿಲ್ಲ, ಏನು ಮಾಡುವುದು, ಬಂದ ಹಣದಲ್ಲಿ ಅವರ ಡೆವಲಪ್‌ಮೆಂಟ್‌ಗಾಗಿ ಮೇಜರ್ ಪ್ರೋರ್ಷನ್‌ನ್ನು ಅವರೇ ಇಟ್ಟುಕೊಳ್ಳುತ್ತಾರೆ. ನಿಮ್ಮ ಭಾಗಕ್ಕೆ ಹಣ ಕಡಿಮೆ ಬರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಹೀಗೆ ಮಾಡಿಕೊಂಡು ನಿಮ್ಮಲ್ಲಿಗೆ ಒಂದು ಹಾರ್ಟಿಕಲ್ಚರ್ ಕಾಲೇಜು ಮಾಡಿಸಿಕೊಂಡಿದ್ದೀರಿ. ಅದಕ್ಕೆ ಬಜೆಟ್ ಪ್ರಾವಿಷನ್ ಮಾಡಿಕೊಂಡಿದ್ದೀರಿ. ನಮ್ಮ ಶಹಾಪೂರಕ್ಕೆ ಒಂದು ಅಗ್ರಿಕಲ್ಚರಲ್ ಕಾಲೇಜು ಕೊಡುತ್ತೇವೆಂದು ಹೇಳಿ ಹೆಚ್‌ಕೆಡಿಬಿ ಯಲ್ಲಿ ತೋರಿಸಿ ಅವರಿಗೆ ಸರಕಾರಿ ಆದೇಶದ ಕಾಗದವನ್ನು ಮಾತ್ರ ಕೊಟ್ಟಿದ್ದೀರಿ. ನೀವು ಮಾತ್ರ ಕಾಲೇಜು ಮಾಡಿಕೊಂಡುಬಿಟ್ಟಿರಿ.

ಶ್ರೀ ಬಿ.ಎನ್. ಬಚ್ಚೇಗೌಡ: ಈಗಲಾದರೂ ತಾವುಗಳು ಕಾಲೇಜು ಮಾಡಿಕೊಳ್ಳಿ ಒಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇಂಥ ವಿಚಾರಗಳನ್ನು ಘೋಷಣೆ ಮಾಡಿದರೆ ನಮಗೆಲ್ಲರಿಗೂ ಒಳ್ಳೆಯದಾಗುತ್ತದೆ. ಅನಿಮಲ್ ಸರ್ವೀಸಸ್, ಹೆಲ್ತ್ ಫಿಶರೀಸ್, ಡಿಸೀಸ್‌ಫ್ರೀ, ಮುಂತಾದವುಗಳೆಲ್ಲವೂ ಪ್ರತ್ಯೇಕವಾಗಿ ಮಾಡಿದರೆ ಬರುತ್ತವೆ. ಮಾನ್ಯ ಅಧ್ಯಕ್ಷರೂ ಕೂಡ ಆ ಕಾಲದಲ್ಲಿ ಯಾವಾಗಲೂ ಮೀನುಗಾರಿಕೆ ಬಗ್ಗೆ ಮಾತನಾಡುತ್ತಿದ್ದರು. ಯಾಂತ್ರಿಕ ಮೀನು ದೋಣಿಗಳಿಗೆ ಸಹಾಯಧನವನ್ನು ಕೊಡಲೇ ಇಲ್ಲ. ನಂತರ ನೀವೇ ಕೈಬಿಟ್ಟು ಹಾಗೆ ಕಂಡಿತು. ಮಾನ್ಯ ಕಂದಾಯ ಸಚಿವರು ಎಲ್ಲಾ ಕಡೆಗಳಲ್ಲಿಯೂ ಮಿನಿವಿಧಾನಸೌಧ ಕಟ್ಟುತ್ತೇವೆಂದು ಹೇಳಿದರು. ಆದರೆ ಇದು ತನಕವೂ ಅದರ ಪ್ರಸ್ತಾಪವೇ ಇಲ್ಲ. ಎಲ್ಲಿ ಕಟ್ಟುತ್ತಾರೆ? ಎಲ್ಲಿ ಬರುತ್ತದೆ? ಇದಕ್ಕೆ ಹಣ ಎಲ್ಲಿದೆ? ಎಲ್ಲಿಂದ ಹಣವನ್ನು ತರುತ್ತಾರೆ? ಸುಮ್ಮನೆ ಮೂಗಿಗೆ ತುಪ್ಪ ಹಚ್ಚುವ ಕೆಲಸ ಮಾಡುತ್ತಿದ್ದಾರೆ. ಮುಖ್ಯಮಂತ್ರಿಯವರು ತಲೆಗೆ ಎಣ್ಣೆ ಕೈಗೆ ತುಪ್ಪ ಹಚ್ಚಿದ್ದಾರೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೇ, ಮೂಗಿಗೆ ತುಪ್ಪ ಹಚ್ಚಿದರೆ ಅದು ನಾಲಿಗೆಗೆ ತಗಲುವುದಿಲ್ಲ. ಮಿನಿವಿಧಾನಸೌಧದ ಬಗ್ಗೆ ಮತ್ತು ಏಳು ಹೊಸ ಜಿಲ್ಲಾ ಕಚೇರಿಗಳ ಬಗ್ಗೆ ಯಾವ ಸಂದೇಹವೂ ಬೇಡ. ಖಂಡಿತವಾಗಿಯೂ ಮಾಡಿಯೇ ಮಾಡುತ್ತೇವೆ. ಅಸೆಂಬ್ಲಿ ಮುಗಿದ ತತ್‌ಕ್ಷಣ ಅದರ ಕಾರ್ಯ ಪ್ರಾರಂಭವಾಗುತ್ತದೆ. ಅದಕ್ಕಾಗಿ ಸಾಲ ಕೂಡ ಮಂಜೂರಾಗಿದೆ. 100 ಕೋಟಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಅದರ ಬಗ್ಗೆ ಅನುಮಾನ ಬೇಡ. ನಾವು 310 ಕೋಟಿ ಕೇಳಿದ್ದೇವೆ. ಮಂಜೂರು ಮಾಡಿ 100 ಕೋಟಿಗಳನ್ನು ಬಿಡುಗಡೆ ಮಾಡಿದ್ದಾರೆ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ಹೋದಸಲ ಸಹಕಾರಿ ಇಲಾಖೆಯಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದರು. ಈ ಸಲ ಕೆಲವು ವಿಚಾರಗಳನ್ನು ಹೇಳಿದ್ದಾರೆ. ರೈತರ ಬಡ್ಡಿ ದರವನ್ನು ಕಡಿಮೆ ಮಾಡಿ, ಬಡ್ಡಿಯನ್ನು ವಜಾ ಮಾಡಿ, ರೈತರು ಸಂಕಷ್ಟದಲ್ಲಿದ್ದಾರೆ, ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ನಾವು ಪರಿಪರಿಯಾಗಿ ಕೇಳಿಕೊಂಡರೂ ಅದು ಅವರ ಕಿವಿ

ಮುಟ್ಟಲಿಲ್ಲ. ಕೃಷಿ ಕ್ಷೇತ್ರಕ್ಕೆ ಬಹಳವಾಗಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಈ ಸಲದ ಪ್ಲಾನ್ ಔಟ್‌ಲೇ ಬಗ್ಗೆ ಹೇಳುವುದಾದರೆ, ಹೋದ ಸಲ ಇದು 21,061 ಕೋಟಿ ರೂಪಾಯಿಗಳು ಇತ್ತು, ಯೋಜನಾ ವೆಚ್ಚ 7,274 ಕೋಟಿ ರೂಪಾಯಿ ಇತ್ತು ಅಂದರೆ 36.25 ಆಗುತ್ತದೆ. 2001-2002ರ ಪ್ಲಾನ್ ಔಟ್‌ಲೇ 23,276 ಕೋಟಿ ರೂಪಾಯಿ ಯೋಜನಾ ವೆಚ್ಚ 8,588 ಕೋಟಿ ರೂಪಾಯಿ ಅಂದರೆ 36.89 ಆಗುತ್ತದೆ. ಇಲ್ಲಿ ಸಣ್ಣ ಪ್ರಮಾಣದಲ್ಲಿ ಹೆಚ್ಚಾಗಿದೆ. ಕೃಷಿ ಕ್ಷೇತ್ರಕ್ಕೆ 2000-2001 ರಲ್ಲಿ 313 ಕೋಟಿ ಕೊಟ್ಟಿದ್ದರೆ ಈ ಸಲ 37.6 ಕೋಟಿ ರೂಪಾಯಿಗಳು, ಗ್ರಾಮೀಣಾಭಿವೃದ್ಧಿಗೆ ಹೋದ ಸಲ 286 ಕೋಟಿ ರೂ ಕೊಟ್ಟಿದ್ದರು. ಈ ಸಲ 297 ಕೋಟಿ ರೂಪಾಯಿಗಳು, ಹೋದ ಸಲ ನೀರಾವರಿಗೆ 2,899 ಕೋಟಿ ರೂಪಾಯಿ ಕೊಟ್ಟಿದ್ದರೆ ಈ ಸಲ 2,740 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಒಟ್ಟಾರೆ ಕೃಷಿಗೆ ಹೋದ ಸಲ 3,473 ಕೋಟಿ ರೂಪಾಯಿ ಕೊಟ್ಟಿದ್ದರೆ ಈ ಸಲ 3,413 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಮಾನ್ಯ ಗುರುಸ್ವಾಮಿ ಹಾಗೂ ಯಾವಗಲ್‌ರವರು ಮಾತನಾಡುವಾಗ ಈ ಕ್ಷೇತ್ರಕ್ಕೆ ಬಹಳ ಹಣ ಸಿಕ್ಕಿದೆಯೆಂದು ಹೇಳಿಬಿಟ್ಟರು. ಪ್ಲಾನ್ ಗಾತ್ರದಲ್ಲಿ ಕಡಿಮೆಯಾಗಿದೆ. ಕೈಗಾರಿಕೆಗಳಿಗೆ ಆರೋಗ್ಯ ಕುಟುಂಬ ಕಲ್ಯಾಣಕ್ಕೆ ಜಾಸ್ತಿ ಕೊಟ್ಟಿದ್ದೀರಿ, ಪಶುಸಂಗೋಪನೆಯ ಬಗ್ಗೆ ಈಗಾಗಲೇ ಮಾತನಾಡಿದ್ದೇನೆ. ನಮ್ಮ ಕಾಲದಲ್ಲಿ ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ವಿಶ್ವಬ್ಯಾಂಕ್‌ನಿಂದ 584 ಕೋಟಿ ರೂಪಾಯಿ ಹಣವನ್ನು ಪಡೆದುಕೊಂಡು ರಾಜ್ಯದಲ್ಲಿರುವ 200 ಆಸ್ಪತ್ರೆಗಳನ್ನು ಹೈಟೆಕ್ ಆಸ್ಪತ್ರೆಗಳನ್ನಾಗಿ ಮಾಡಿದೆವು. ಆದರೆ ಅದಕ್ಕೆ ವೈದ್ಯರುಗಳನ್ನು ನೇಮಕ ಮಾಡುವುದು, ಮೈನ್‌ಟೆನೆನ್ಸ್ ಕೆಲಸಗಳ್ಯಾವುದನ್ನೂ ಮಾಡಿಲ್ಲ. ನಮ್ಮ ನಮ್ಮ ತಾಲ್ಲೂಕುಗಳಲ್ಲಿ ಅದು ಆಗಿದೆ. ಇದರ ಬಗ್ಗೆ ಏನು ಮಾಡುತ್ತೀರಿ ಎಂಬ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಪ್ಯಾರಾಮೆಡಿಕಲ್ ಸಿಬ್ಬಂದಿಯನ್ನು ನೇಮಿಸುವ ಬಗ್ಗೆ ಹೌಸ್‌ಕೀಪಿಂಗ್ ವ್ಯವಸ್ಥೆ ಬಗ್ಗೆ, ವಿಶೇಷ ಪರಿಣಿತಿ ಪಡೆದಿರುವ ವೈದ್ಯರುಗಳನ್ನು ಒದಗಿಸುವ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಮಾನ್ಯ ಸಚಿವರಾದ ಕೃಷ್ಣಪ್ಪನವರ ಕ್ಷೇತ್ರದಲ್ಲಿ 100 ಬೆಡ್ ಆಸ್ಪತ್ರೆ, ನನ್ನ ಕ್ಷೇತ್ರದಲ್ಲಿ 50 ಹಾಸಿಗೆಗಳ ಆಸ್ಪತ್ರೆ ಅಪ್‌ಗ್ರೇಡ್ ಮಾಡಿದ್ದಾರೆ. ಮುಂದೆ ಇದನ್ನು ಏನು ಮಾಡುತ್ತಾರೆ ಎಂಬುದು ನಮಗೆ ಗೊತ್ತಿಲ್ಲ. ಒಂದು ತಿಂಗಳಿನಿಂದ ಆಸ್ಪತ್ರೆಗೆ ಬೀಗವನ್ನು ಹಾಕಿಕೊಂಡಿದ್ದಾರೆ. ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಯಾರೂ ಅಲ್ಲಿಲ್ಲ. ಹೈಟೆಕ್ ಆಸ್ಪತ್ರೆಗಳಿಗೆ ಯಾವ ವೈದ್ಯರುಗಳನ್ನೂ ಹಾಕಿಲ್ಲ. ಅವುಗಳು ಸುಮ್ಮನೆ ಹಾಗೆಯೇ ಇದೆ. ಮಾನ್ಯ ಗೃಹ ಸಚಿವರು, ಸಮಾಜ ಕಲ್ಯಾಣ ಸಚಿವರು ಇದ್ದೀರಿ, ತಾವು ಇದರ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ ಹಣವನ್ನು ತೊಡಗಿಸಿ ಆಸ್ಪತ್ರೆಗಳಿಗೆ ಸೌಲಭ್ಯವನ್ನು ಒದಗಿಸಿಕೊಡಬೇಕು. ನೋಡಲು ದೊಡ್ಡ ಆಸ್ಪತ್ರೆ, ಆದರೆ ಬೇಕಾಗಿರುವ ಸೌಲಭ್ಯಗಳು ಇಲ್ಲದೆ ಸುಮ್ಮನೆ ಇವೆ. ಇವರು ಪ್ರಾಥಮಿಕ ಶಿಕ್ಷಣಕ್ಕೆ ಒತ್ತು ಕೊಡುತ್ತಿದ್ದಾರೆ. ನಾವೂ ಕೊಟ್ಟಿದ್ದೆವು, ಇವರೂ ಅದನ್ನೇ ಮುಂದುವರೆಸಿಕೊಂಡು ಬಂದಿದ್ದಾರೆ. ಆದರೆ ಪ್ರೌಢಶಾಲೆಗಳಲ್ಲಿ ಕಳೆದ ವರ್ಷ ಒಂದು ಕಟ್ಟಡವನ್ನೂ ಕೊಡಲಿಲ್ಲ. ಹೊಸ ಪ್ರೌಢಶಾಲೆಗಳು ಇದೆ, ಆದರೆ ಶಾಲಾ ಕೊಠಡಿಗಳು ಇಲ್ಲ. ಇಡೀ ರಾಜ್ಯದಲ್ಲಿ ಆ ಪರಿಸ್ಥಿತಿ ಇದೆ. ಪ್ರೌಢ ಶಾಲಾ ಕಟ್ಟಡಗಳನ್ನು ಕಟ್ಟುವುದರ ಬಗ್ಗೆ ತಾವು ಇದರಲ್ಲಿ ಪ್ರಸ್ತಾಪ ಮಾಡಿಲ್ಲ. ಇಷ್ಟು ಹೇಳಿ ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು 2001-2002ನೇ ಇಸವಿಗೆ, ರೈತರ ಹಿತದೃಷ್ಟಿಯಿಂದ ಕರ್ನಾಟಕ ರಾಜ್ಯದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ಕೊಟ್ಟು ಬಜೆಟ್‌ನ್ನು ಮಂಡನೆ ಮಾಡಿದ್ದಾರೆ, ಇದನ್ನು ನಾವು ಸ್ವಾಗತಿಸಬೇಕಾಗುತ್ತದೆ. ರೈತರ ಬಗ್ಗೆ ಒಲವನ್ನಿಟ್ಟುಕೊಂಡು ಕಾರ್ಯಕ್ರಮಗಳನ್ನು ಹಮ್ಮಿಕ್ಕೊಂಡು ಮುಖ್ಯಮಂತ್ರಿಗಳೇನು ಬಜೆಟ್‌ನ್ನು ಮಂಡನೆ ಮಾಡಿದ್ದಾರೆ ಅದನ್ನು ನಾನು ಸ್ವಾಗತಿಸುತ್ತೇನೆ. ಇಲ್ಲಿ ನಾನು ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ವಿದ್ಯುತ್ ವಿಚಾರದಲ್ಲಿ, ರಾತ್ರಿ ಹತ್ತು ಗಂಟೆಯಿಂದ ಮುಂಜಾನೆ ಆರು ಗಂಟೆಯವರೆಗೆ ಅಡೆತಡೆ ಇಲ್ಲದೆ ವಿದ್ಯುತ್‌ನ್ನು ರೈತರಿಗೆ ಕೊಡುವುದಾಗಿ ಘೋಷಣೆ ಮಾಡಿದ್ದಾರೆ, ಇದು ಒಳ್ಳೆಯ ವಿಚಾರವೇ, ಆದರೆ ಇದನ್ನು ಕಾರ್ಯರೂಪಕ್ಕೆ ತಂದಾಗ ರೈತರಿಗೆ ಸಂತೋಷವಾಗುತ್ತದೆ ಮತ್ತು ಬೆಳೆ ಬೆಳೆಯಲು ಅನುಕೂಲವಾಗುತ್ತದೆ. ರೈತನ ಪರಿಸ್ಥಿತಿ [illegible]ತ್ತು ಎಲ್ಲವೂ ತಿರುಕನ ಕನಸಿನಂತಾಗಿದೆ. ಅದರಲ್ಲೂ ಗಡಿನಾಡ ಪ್ರದೇಶಗಳಾದ ನಮ್ಮಲ್ಲಿ ರೈತರಿಗೆ ಬಹಳ ಸಮಸ್ಯೆಗಳು ಇದೆ. ಯಾವುದೇ ಸರ್ಕಾರ ಬಂದರೂ ಗಡಿನಾಡ ಪ್ರದೇಶದ ಬಗ್ಗೆ ಹೆಚ್ಚು ಕಾಳಜಿ ವಹಿಸಿ ರೈತರ ಕೆಲಸವನ್ನು ಮಾಡುತ್ತಿಲ್ಲ. ಬಾಗೇಪಲ್ಲಿ, ಗುಡಿಬಂಡೆ, ನಗರಗೆರೆ, ಶಿಡ್ಲಘಟ್ಟ, ಚಿಂತಾಮಣಿ, ಕೋಲಾರ ಜಿಲ್ಲೆಯಲ್ಲಿರುವ ರೈತರಿಗೆ ಬಹಳ ಅನಾನುಕೂಲವಾಗುತ್ತಿದೆ. ಅವರು ಹೇಳಿರುವಂತೆ ವಿದ್ಯುತ್ತ್‌ನ್ನು ಕೊಟ್ಟರೆ ನಮಗೆಲ್ಲಾ ಅನುಕೂಲವಾಗುತ್ತದೆ. ಇದರ ಜೊತೆಗೆ ರೈತರಿಗೆ ಕಿರುಕುಳ ಕೊಡುವುದನ್ನು ನಿಲ್ಲಿಸಬೇಕಾಗುತ್ತದೆ. ನಮ್ಮ ಭಾಗದಲ್ಲಿ ಕಳೆದ ಸಲ ಮಳೆ ಬರಲಿಲ್ಲ, ಬೆಳೆ ಆಗಲಿಲ್ಲ, ರೈತರು ವಲಸೆ ಹೋಗುತ್ತಿದ್ದಾರೆಂದು ಕಂದಾಯ ಸಚಿವರು 56 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದರು. 56 ಲಕ್ಷ ರೂಪಾಯಿಗಳನ್ನು ಕೊಟ್ಟು ಅಲ್ಲಿನ ರೈತರ ಸಮಸ್ಯೆಯನ್ನು ಅರ್ಥ ಮಾಡಿಕೊಂಡಿದ್ದ ಸರ್ಕಾರ, ಇವತ್ತು ರೈತರು ವಿದ್ಯುತ್ ಬಿಲ್ಲನ್ನು ಕಟ್ಟದಿರುವುದರಿಂದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುತ್ತಾರೆ, ರೈತರಿಗೆ ಬಿಲ್ಲಿನ ಹಣವನ್ನು ಕಟ್ಟಿ ಎಂದು ಒತ್ತಡ ತರುತ್ತಿದ್ದಾರೆ. ರೈತರು ಮಾಡಿರುವ ಸಾಲವನ್ನು ಮನ್ನಾ ಮಾಡದೆ ಅವರ ಮನೆಯಲ್ಲಿರುವ ಎಲ್ಲಾ ಸಾಮಾನುಗಳನ್ನು ತಂದು ಬ್ಯಾಂಕ್‌ನವರು ವಸೂಲಿ ಮಾಡುವ ಪ್ರಸಂಗ ನಡೆಯುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಛೇರ್ಮನ್‌ರವರೆ, ಈಗ ರಾತ್ರಿ 8.45 ಗಂಟೆಯಾಗಿದೆ. ಪತ್ರಕರ್ತರು ಗ್ಯಾಲರಿಯಲ್ಲಿ ಇಲ್ಲದಿರುವುದರಿಂದ ಮಾನ್ಯ ಸದಸ್ಯರು ಸದನದಲ್ಲಿ ಯಾವ ವಿಚಾರವಾಗಿ ಚರ್ಚೆ ಮಾಡಿದ್ದಾರೆಂದು ಅವರ ಕ್ಷೇತ್ರದ ಜನರು ತಿಳಿದುಕೊಳ್ಳುವುದಾದರೂ ಹೇಗೆ?

ಛೇರ್ಮನ್: ಚರ್ಚೆ ಇವೊತ್ತು ಮುಕ್ತಾಯವಾಗಲೇಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾನು ಒಂದು ರಾಜಕೀಯ ಪಕ್ಷವನ್ನು ಪ್ರತಿನಿಧಿಸುತ್ತಿದ್ದು, ಮೊದಲು ನಾನು ಹೇಳುವುದನ್ನು ಕೇಳಿ, ಅನಂತರ ತಾವು ಒಂದು ತೀರ್ಮಾನಕ್ಕೆ ಬನ್ನಿ. ನಾನು ಮಧ್ಯೆ ಏಕೆ ಮಾತನಾಡುತ್ತಿದ್ದೇನೆಂದರೆ, ಇಲ್ಲಿ ಆಡಳಿತ ಪಕ್ಷದ ಪ್ರಮುಖ ನಾಯಕರುಗಳಿದ್ದು, ಅವರಲ್ಲಿ ನಾನು ತಮ್ಮ ಮೂಲಕ ವಿನಂತಿಸಿಕೊಳ್ಳುವುದೇನೆಂದರೆ, ನಾಳೆ ಬೆಳಿಗ್ಗೆ 9.30 ಗಂಟೆಗೆ ಬದಲಾಗಿ 10.30 ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯ ಪತ್ರದ ಮೇಲೆ ನಡೆದ

ಚರ್ಚೆಗೆ ಉತ್ತರಿಸಲಿ. ಇನ್ನು 5-6 ಜನ ಮಾನ್ಯ ಸದಸ್ಯರು ಮಾತನಾಡುವವರು ಇರುವುದರಿಂದ ಒಂದು ಗಂಟೆ ಕಾಲ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕು.

ಛೇರ್ಮನ್: ನಾಳೆ ಬೆಳಿಗ್ಗೆ 9.30 ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವಿದೆ. ಎಷ್ಟೇ ಚರ್ಚೆ ಇದ್ದರೂ ಇವೊತ್ತೇ ಮುಕ್ತಾಯವಾಗಬೇಕು. ತಾವು ದಯವಿಟ್ಟು ಕ್ಷಮಿಸಬೇಕು. ಬೇಕಾದರೆ ಹತ್ತು ಗಂಟೆಯ ನಂತರ ಪುನಃ ಚರ್ಚೆಗೆ ಕುಳಿತುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ: ತಾವು ಕೋಪಿಸಿಕೊಳ್ಳಬಾರದು.

ಛೇರ್ಮನ್: ಕೋಪಿಸಿಕೊಳ್ಳುವ ಪ್ರಶ್ನೆಯೇ ಇಲ್ಲ. ನಮಗೆ ಸದನದ ನಿಯಮಾವಳಿ ಇದ್ದು, ನಿಯಮಾವಳಿಯನ್ನು ಮತ್ತೆ ಮತ್ತೆ ಉದ್ದಗೊಳಿಸಲು ತಯಾರಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೇ, ತಾವು ದಯವಿಟ್ಟು ವಿಚಾರ ಮಾಡಿ, ನಾವು ಅನೇಕ ಸಲ ಈ ತರಹ ಕನ್‌ಸೀಡ್ ಆಗಿರುವುದು ನಿಜ. ನಾಳೆ ಮಾನ್ಯ ಮುಖ್ಯಮಂತ್ರಿಯವರು ಬೆಳಿಗ್ಗೆ 10.30 ಗಂಟೆಯಿಂದ 12.30 ಗಂಟೆವರೆಗೆ ಉತ್ತರಿಸಲಿ.

ಛೇರ್ಮನ್: ಮಾನ್ಯ ಮುಖ್ಯಮಂತ್ರಿಯವರು ನಾಳೆ ಬೆಳಿಗ್ಗೆ 9.30 ಗಂಟೆಗೆ ಉತ್ತರ ಕೊಡುತ್ತಾರೆ.

ಶ್ರೀ ಡಿ.ವಿ. ಸದಾನಂದಗೌಡ: ನಾವು ತಮ್ಮನ್ನು ಕೇಳುತ್ತಿರುವುದೇನೆಂದರೆ, ಚರ್ಚೆಯಲ್ಲಿ ಯಾವ್ಯಾವ ಮಾನ್ಯ ಸದಸ್ಯರು ಪಾಲ್ಗೊಳ್ಳುತ್ತಾರೆಂಬ ಬಗ್ಗೆ ತಮಗೆ ಪಟ್ಟಿ ಕೊಟ್ಟಿದ್ದು, ಅದರ ಬಗ್ಗೆ ಹೇಳುತ್ತಿದ್ದೇವೆಯೇ ವಿನಾಃ ಬೇರೇನೂ ಕೇಳುತ್ತಿಲ್ಲ. ಮಾತನಾಡುವ ಸದಸ್ಯರುಗಳು ಹೊಸಬರಾಗಿರುವುದರಿಂದ ನಾಳೆ ಒಂದು ಗಂಟೆ ಕಾಲ ಅವರುಗಳಿಗೆ ಮಾತನಾಡಲು ತಾವು ಅವಕಾಶ ಮಾಡಿಕೊಡಬೇಕು.

ಛೇರ್ಮನ್: ಮಾನ್ಯ ಸಂಪಂಗಿಯವರೆ, ತಾವು ಬೇಗ ಮಾತನಾಡಿ ಮುಗಿಸಬೇಕು. ತಾವು ಮಾತನಾಡುವಾಗ ಮಧ್ಯೆ ಯಾರಿಗೂ ಯೀಲ್ಡ್ ಆಗಬಾರದು.

ಶ್ರೀ ಎನ್. ಸಂಪಂಗಿ: ಮಾನ್ಯ ಛೇರ್ಮನ್‌ರೆ, ಸದನದಲ್ಲಿ ಮಾತನಾಡಲು ನಮಗೆ ಅವಕಾಶ ಸಿಗುವುದೇ ಅಪರೂಪ. ಅಂಥದ್ದರಲ್ಲಿ ಪತ್ರಕರ್ತರೆಲ್ಲರೂ ಎದ್ದು ಹೋಗಿರುವಾಗ ನಾವು ಮಾತನಾಡುತ್ತಿರುವುದನ್ನು ಯಾರು ದಾಖಲಿಸುತ್ತಾರೆ? ಇದು ನನ್ನ ಕ್ಷೇತ್ರದ ಜನರಿಗೆ ತಿಳಿಯುವುದಾದರೂ ಹೇಗೆ?

ಛೇರ್ಮನ್: ತಾವು ಮಾತನಾಡುತ್ತಿರುವುದನ್ನು ಅಧಿಕೃತ ವರದಿಗಾರರು ದಾಖಲಿಸಿಕೊಳ್ಳುತ್ತಿದ್ದಾರೆ. ಅನಂತರ, ಕಛೇರಿಯಲ್ಲಿ ತಾವು ಮಾತನಾಡಿರುವ ಭಾಷಣದ ಪ್ರತಿಯನ್ನು ಪಡೆದುಕೊಂಡು ಪತ್ರಿಕೆಗಳಿಗೆ ಬಿಡುಗಡೆ ಮಾಡಬಹುದು.

ಶ್ರೀ ಎನ್. ಸಂಪಂಗಿ: ಸದನದಲ್ಲಿ ಮಾನ್ಯ ಕಂದಾಯ ಸಚಿವರಿದ್ದು, ಅವರಿಗೆ ನನ್ನ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಕುರಿತು ಎಲ್ಲಾ ವಿಚಾರಗಳು ಗೊತ್ತಿದೆ. ನಮಗೆ ಕೊಟ್ಟಿರುವ

ಹಣದಲ್ಲಿ ನಾವು ಗೋ-ಕುಂಟೆಗಳನ್ನು ನಿರ್ಮಿಸಿ ವಲಸೆ ಹೋಗುತ್ತಿರುವ ರೈತರುಗಳನ್ನು ಉಳಿಸಿಕೊಂಡಿದ್ದೇವೆ. ಆದರೆ, ಇವೊತ್ತಿನ ದಿವಸ ರೈತರು ತೆಗೆದುಕೊಂಡಿದ್ದಂಥ ಸಾಲ ಹಿಂತಿರುಗಿಸಲಿಲ್ಲವೆನ್ನುವ ಕಾರಣಕ್ಕೆ ಅವರ ಮನೆಗಳನ್ನು ಜಪ್ತಿ ಮಾಡುತ್ತಿರುವುದನ್ನು ನೋಡಿದರೆ ನಿಜವಾಗಿಯೂ ನೋವುಂಟಾಗುತ್ತದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ರೈತರ ಕುರಿತು ಕಾಳಜಿಯಿಂದಿರುವ ಸರ್ಕಾರ ಅವರ ಸಮಸ್ಯೆಗಳತ್ತ ಗಮನಹರಿಸಬೇಕಾಗಿದೆ. ನನ್ನ ಕ್ಷೇತ್ರದ ರೈತರಿಗೆ ಸಂಬಂಧಿಸಿದಂತೆ ಕನಿಷ್ಠ ಪಕ್ಷ ಒಂದು ವರ್ಷ ಕಾಲ ಯಾವುದೇ ಸಾಲವನ್ನು ವಸೂಲು ಮಾಡದೆ ಸಾಲ ಹಾಗೂ ಬಡ್ಡಿಯನ್ನು ಮನ್ನಾ ಮಾಡಿ, ವಿದ್ಯುಚ್ಛಕ್ತಿ ಬಿಲ್ ಕಟ್ಟುವ ಬಗ್ಗೆ ಅವರ ಮೇಲೆ ಯಾವುದೇ ಒತ್ತಡ ತರದೇ ಆಡೆತಡೆಯಿಲ್ಲದೆ, ತಾರತಮ್ಯವೆಸಗದೆ ವಿದ್ಯುಚ್ಛಕ್ತಿ ಸೌಲಭ್ಯ ಪೂರೈಸಿಕೊಡಬೇಕೆಂದು ಕಂದಾಯ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿರುವ ಜನರು ಇವೊತ್ತು ಅನೇಕ ರೀತಿಯ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಇಡೀ ಕರ್ನಾಟಕದ ಜನತೆಗೆ ತಿಳಿದಿರುವಂತೆ ಕ್ಷೇತ್ರದಲ್ಲಿರುವ ಕುಡಿಯುವ ನೀರಿನಲ್ಲಿ 'ಫ್ಲೋರೈಡ್' ಅಂಶ ಅಧಿಕವಾಗಿರುವುದರಿಂದ ಈ 'ವಿಷ' ವನ್ನು ಪ್ರತಿಯೊಬ್ಬ ವ್ಯಕ್ತಿಯೂ ಕುಡಿಯುವ ನೀರಿನ ಮೂಲಕ ಸೇವಿಸುತ್ತಿರುವುದರಿಂದ ನಮ್ಮ ರಾಷ್ಟ್ರದ ಒಬ್ಬ ವ್ಯಕ್ತಿಯ ಸರಾಸರಿ ಆಯಸ್ಸು ನೂರು ವರ್ಷಗಳಿದ್ದರೆ ನನ್ನ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಜನರಿಗೆ ಐವತ್ತು ವರ್ಷಗಳಷ್ಟು ಕಾಲ ಸಹ ಬದುಕಲು ಸಾಧ್ಯವಾಗುತ್ತಿಲ್ಲ! ಏಕೆಂದರೆ, ಕುಡಿಯುವ ನೀರಿನಲ್ಲಿ 'ಫ್ಲೋರೈಡ್' ಎಂಬ ವಿಷ ವಸ್ತು ಇರುವುದೇ ಕಾರಣವಾಗಿದೆ. ಫ್ಲೋರೈಡ್ ಯುಕ್ತ ನೀರನ್ನು ಸೇವಿಸುವವರು 'ಫ್ಲೋರೋಸಿಸ್' ಕಾಯಿಲೆಗೆ ತುತ್ತಾಗುವುದರಿಂದ ಈ ಕಾಯಿಲೆಯಿಂದ ರಕ್ಷಿಸಲು ನಮ್ಮ ಸರ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಬೇಕಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಮುಂಜಾಗ್ರತೆಯಾಗಿ ಫ್ಲೋರೋಸಿಸ್ ಕಾಯಿಲೆಯಿಂದ ಜನರನ್ನು ಮುಕ್ತಗೊಳಿಸುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳಬೇಕಾಗಿದೆ. ಇನ್ನು ಅಂತರ್ಜಲ ಮಟ್ಟ ಸಾಕಷ್ಟು ಕುಸಿದಿರುವುದರಿಂದ ಅಂತರ್ಜಲವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅಗತ್ಯವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗಿದೆ ಮತ್ತು ಕುಡಿಯುವ ನೀರಿನ ವಿಚಾರದಲ್ಲೂ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿರುತ್ತದೆ. ರಾಜ್ಯದಲ್ಲಿ ಫ್ಲೋರೈಡ್‌ಯುಕ್ತ ನೀರು ಎಲ್ಲೆಲ್ಲಿದೆ, ಇದನ್ನು ಸೇವಿಸಿದ ಜನರನ್ನು ಫ್ಲೋರೋಸಿಸ್ ಕಾಯಿಲೆಯಿಂದ ರಕ್ಷಿಸುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾಗಿ ಹದಿನೈದು ಕೋಟಿ ರೂಪಾಯಿಗಳಷ್ಟು ಹಣವನ್ನು ಒದಗಿಸಿಕೊಟ್ಟಿರುವುದನ್ನು ನಾನು ಸಂತೋಷದಿಂದ ಸ್ವಾಗತಿಸುತ್ತೇನೆ. ಆದರೆ, ಒದಗಿಸಿರುವ ಹದಿನೈದು ಕೋಟಿ ರೂಪಾಯಿಗಳು ಸಾಕಾಗದಿರುವುದರಿಂದ ಇನ್ನೂ ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ. ಇನ್ನು ನೇತ್ರಾವತಿ ನದಿ ನೀರು ನಮ್ಮ ಭಾಗಕ್ಕೆ ಬರಬೇಕೆಂಬುದು ನಮ್ಮ ರೈತರ ಬಹಳ ವರ್ಷಗಳ ಕನಸಾಗಿತ್ತು. ನೇತ್ರಾವತಿ ನದಿ ನೀರನ್ನು ಬಾಗೇಪಲ್ಲಿ, ಗುಡಿಬಂಡೆ ಮತ್ತು ಗೌರಿಬಿದನೂರು ಮೂಲಕ ತರಿಸಿಕೊಳ್ಳಲು ಆ ಕುರಿತ ಸಮಗ್ರ ಯೋಜನೆ ತಯಾರಿಸಲು ಐದು ಕೋಟಿ ರೂಪಾಯಿಗಳನ್ನು ಒದಗಿಸಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಮಾನ್ಯ ಮುಖ್ಯಮಂತ್ರಿಯವರ ಕ್ರಮವನ್ನು ಸ್ವಾಗತಿಸುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು ವರ್ಷಗಳಿಂದ ನೀರು ಕಂಡಿರಲಿಲ್ಲ. ಆದರೆ, ಇವೊತ್ತು ಕೆರೆಗಳಲ್ಲಿ ಸಮೃದ್ಧವಾಗಿ ನೀರು ತುಂಬಿದೆ ಮತ್ತು ರೈತರ ಕೈಗೆ ಬೆಳೆ ಸಿಕ್ಕಿದೆ. ನೇತ್ರಾವತಿ ನದಿ ನೀರನ್ನು ನಮ್ಮ ಭಾಗಕ್ಕೆ ತರುವುದಕ್ಕೆ

ಸರ್ಕಾರ ಪ್ರಯತ್ನಿಸಬೇಕು, ಇದರಲ್ಲಿ ವಿಳಂಬ ಮಾಡಬಾರದು. 2004ನೇ ಇಸವಿಯೊಳಗೆ ಈ ಯೋಜನೆಯನ್ನು ಪೂರ್ತಿಗೊಳಿಸುವುದಾಗಿ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಅದೇರೀತಿ ಕೆಲಸ ಮಾಡಿಕೊಟ್ಟರೆ ರೈತರಿಗೆ ನಿಜವಾಗಿಯೂ ಸಂತೋಷವಾಗುತ್ತದೆ. ಇನ್ನು ರಸ್ತೆಗಳ ವಿಚಾರವಾಗಿ ಹೇಳುವುದಾದರೆ, ನಮ್ಮ ಭಾಗದ ಅನೇಕ ಪ್ರದೇಶಗಳಲ್ಲಿ ನಾವು ರಸ್ತೆಗಳೇ ನೋಡಿರಲಿಲ್ಲ. ರಸ್ತೆಗಳ ಅಭಿವೃದ್ಧಿ ಕಾರ್ಯಕ್ರಮಕ್ಕೆ ಒಂದು ನೂರು ಲಕ್ಷ ರೂಪಾಯಿಗಳನ್ನು ಒದಗಿಸಿರುವುದು ನಿಜವಾಗಿಯೂ ಸಂತೋಷವಾಗಿದೆ. ಅನೇಕ ಮಾನ್ಯ ಸದಸ್ಯರು ಮಾತನಾಡುತ್ತಾ ಒಂದು ನೂರು ಲಕ್ಷ ರೂಪಾಯಿಗಳ ಕಾರ್ಯಕ್ರಮದಲ್ಲಿ ರಸ್ತೆಗಳ ನಿರ್ಮಾಣ ಆಗಿದೆಯೇ ಎಂದು ಪ್ರಶ್ನಿಸಿದರು. ಈ ಬಗ್ಗೆ ನಾನು ಹೇಳುವುದೇನೆಂದರೆ, ನಮ್ಮ ಜಿಲ್ಲೆಯ ಗುಡಿಬಂಡೆಯಂತಹ ಸಣ್ಣ ತಾಲ್ಲೂಕಿನಲ್ಲಿ 1947ನೇ ಇಸವಿಯಿಂದ ಮೊನ್ನೆಯವರೆಗೆ ಕೇವಲ 31 ಕಿಲೋಮೀಟರ್‌ಗಳಷ್ಟು ಮಾತ್ರ ಡಾಂಬರೀಕರಣವಾಗಿತ್ತು. ಆದರೆ, ಈಗ 35 ಕಿಲೋಮೀಟರ್‌ಗಳಷ್ಟು ಡಾಂಬರೀಕರಣವಾಗಿದೆ. ಇದು ಕಣ್ಮುಂದೆ ನಡೆದಿರುವ ವಿಚಾರವಾಗಿದೆ. ಮಾನ್ಯ ಹಿರಿಯ ಸದಸ್ಯರಾದ ಎಸ್.ಎಸ್. ಪಾಟೀಲ್‌ರವರು ಮಾತನಾಡುತ್ತಾ 'ನಿಮ್ಮ ಕ್ಷೇತ್ರದಲ್ಲಿ ಈ ಕಾರ್ಯ ನಡೆದಿದೆಯೇ? ಎಂದರು. ನಮ್ಮ ಕಣ್ಮುಂದೆ ನಡೆದಿರುವ ಈ ಕಾರ್ಯಕ್ರಮಗಳನ್ನು ನಾನು ಸ್ವಾಗತಿಸಲೇಬೇಕಾಗುತ್ತದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಟೀಕಿಸುವುದೇನೂ ದೊಡ್ಡ ವಿಚಾರವಲ್ಲ, ಟೀಕಿಸುವುದು. ಆದರೆ, ಏನೇನು ಕಾರ್ಯಕ್ರಮ ಹಮ್ಮಿಕೊಂಡಿದ್ದಾರೋ ಅದನ್ನಾದರೂ ಸ್ವಾಗತಿಸಬೇಕಾಗುತ್ತದೆ. ಬೆಂಗಳೂರಿನಿಂದ ಬಾಗೇಪಲ್ಲಿವರೆಗಿನ ಕಾರಿಡಾರ್ ಯೋಜನೆಯಡಿ ಸುಮಾರು 105 ಕಿಲೋಮೀಟರ್ ಒಳಗೊಂಡಿರುವಂಥ ಬಾಗೇಪಲ್ಲಿಯಲ್ಲಿ ರಸ್ತೆಗಳ ಅಭಿವೃದ್ಧಿ ಕಾರ್ಯಕ್ರಮ ಕೈಗೊಂಡಿರುವುದಕ್ಕೆ ನಾನು ಸ್ವಾಗತಿಸುತ್ತಿದ್ದೇನೆ. ಇನ್ನು "ನಮ್ಮ ಹೊಲ, ನಮ್ಮ ರಸ್ತೆ" ಯೋಜನೆಯಡಿ ಸರ್ಕಾರ ಶೇಕಡ 60 ರಷ್ಟು ಮತ್ತು ರೈತರು ಶೇಕಡ 40 ರಷ್ಟು ಹಣ ಹಾಕಬೇಕಾಗಿರುವುದು ನಿಜವಾಗಿಯೂ ನೋವಾಗುವಂಥ ವಿಚಾರವಾಗಿದೆ. ಕೆಲವು ವಿಚಾರಗಳನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಇವೊತ್ತು ನಮ್ಮ ಭಾಗದ ಜನರಿಗೆ ಇದು ಉಪಯೋಗವಾಗುವುದಿಲ್ಲ. ಶೇಕಡ 40 ರಷ್ಟು ಹಣವನ್ನು ರೈತರು ಕೊಡಬೇಕೆಂದರೆ ಅವರು ಇಷ್ಟು ಹಣವನ್ನು ಕೊಡುವಂಥ ಸ್ಥಿತಿಯಲ್ಲಿಲ್ಲ. ಕೆರೆಗಳಲ್ಲಿನ ಹೂಳೆತ್ತುವ ಕಾರ್ಯಕ್ರಮವೂ ಜಾರಿಯಾಗುತ್ತಿಲ್ಲ. ಏಕೆಂದರೆ, ವಲಸೆ ಹೋಗುತ್ತಿರುವ ರೈತರುಗಳನ್ನು ಅಲ್ಲಿಯೇ ಉಳಿಸಿಕೊಳ್ಳುವುದಕ್ಕೆ ಸರ್ಕಾರ ದುಡ್ಡು ಕೊಡುತ್ತಿರುವ ಸಂದರ್ಭದಲ್ಲಿ ಟ್ರ್ಯಾಕ್ಟರ್‌ನಲ್ಲಿ ರೈತರೇ ಮಣ್ಣು ಎತ್ತಿಕೊಂಡು ಹೋಗಲು ಸಹಾಯ ಮಾಡಬೇಕೆಂದು ಹೇಳಿದರೂ ಅದು ಆಗಲಿಲ್ಲ. ಆದುದರಿಂದ, ಈ ಕಾರ್ಯಕ್ರಮ ನಮ್ಮ ಭಾಗದಲ್ಲಿ ಜಾರಿಯಾಗಲು ಸಾಧ್ಯವಿಲ್ಲದಿರುವಂಥ ಸಂದರ್ಭದಲ್ಲಿ ಸರ್ಕಾರವೇ ರೈತರಿಗೆ ನೂರರಷ್ಟು ಆರ್ಥಿಕವಾಗಿ ಸಹಾಯ ಮಾಡಬೇಕಾಗುತ್ತದೆಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ. ಇವೊತ್ತು ನಾವು ಅನೇಕ ವಿಚಾರಗಳ ಕುರಿತು ಚರ್ಚಿಸಿದ್ದು, ವಿಶೇಷವಾಗಿ ಒಂದು ವಿಚಾರವಾಗಿ ನಾನು ಪ್ರಸ್ತಾಪಿಸಬೇಕಾಗುತ್ತದೆ. ನಮ್ಮ ಮಾನ್ಯ ಮುಖ್ಯಮಂತ್ರಿಯವರು ಬಹಳ ಉತ್ಸಾಹಿಗಳಾಗಿದ್ದು, ಕ್ರೀಡಾ ವಿಚಾರದಲ್ಲಿ ಬಹಳ ಆಸಕ್ತಿ ಹೊಂದಿದವರಾಗಿದ್ದು ಕರ್ನಾಟಕ ರಾಜ್ಯದಲ್ಲಿ ವರ್ಲ್ಡ್ ಟೆನಿಸ್ ಕಾರ್ಯಕ್ರಮವನ್ನು ಹಾಗೂ ಅವರ ಕ್ಷೇತ್ರವಾದ ಮದ್ದೂರಿನಲ್ಲಿ ರಾಷ್ಟ್ರೀಯ

ಕ್ರೀಡೆಯಾಗಿರುವ 'ಕಬಡ್ಡಿ' ಯನ್ನು ನಡೆಸಿಕೊಟ್ಟು ಕ್ರೀಡಾ ಉತ್ತೇಜನಕಾರರಾಗಿರುವ ಇವರು ಕ್ರೀಡೆಗಳ ಬಗ್ಗೆ ಆಯವ್ಯಯ ಪತ್ರದಲ್ಲಿ ಯಾವುದೇ ವಿಚಾರವನ್ನು ಉಲ್ಲೇಖಿಸಿಲಿಲ್ಲ.

8.50 ಪಿ.ಎಂ.

ಮಾನ್ಯ ಯುವಜನ ಸೇವಾ ಮಂತ್ರಿಗಳಾದ ಮಲ್ಲಿಕಾರ್ಜುನ್ ಅವರು ಒಂದು ಪ್ರಶ್ನೆಗೆ ಉತ್ತರ ಕೊಟ್ಟರು. ಸುಮಾರು 175 ತಾಲ್ಲೂಕುಗಳಲ್ಲಿ, 91 ತಾಲ್ಲೂಕು ಕೇಂದ್ರಗಳ ತಾಲ್ಲೂಕು ಕ್ರೀಡಾಂಗಣ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗುತ್ತದೆ, ಇದುವರೆಗೂ ಆರು ತಾಲ್ಲೂಕು ಕ್ರೀಡಾಂಗಣಗಳ ಕೆಲಸ ಪೂರ್ಣಗೊಂಡಿದೆ. ಉಳಿದ 85 ತಾಲ್ಲೂಕು ಕ್ರೀಡಾಂಗಣಗಳ ಕೆಲಸ ಪ್ರಗತಿಯಲ್ಲಿದ್ದು ಅವುಗಳನ್ನು ಪೂರ್ಣಗೊಳಿಸಲು ಹಣ ಹೊಂದಿಲ್ಲ. ಹಣ ಹೊಂದಿಸಲು ಜಿಲ್ಲಾ ಪಂಚಾಯಿತಿ ವಲಯ, ಕೇಂದ್ರ ಸರ್ಕಾರ ಅನುದಾನ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ ಮತ್ತು ಸಾರ್ವಜನಿಕ ವಂತಿಗೆ ಈ ಮೂಲಗಳಿಂದ ಸಂಗ್ರಹಿಸಿ ಕ್ರೀಡಾಂಗಣ ನಿರ್ಮಾಣ ಕಾರ್ಯವನ್ನು ಮಾಡಲಾಗುತ್ತಿದೆ, ಆದಾಗ್ಯೂ ಈ ಎಲ್ಲಾ ತಾಲ್ಲೂಕು ಕ್ರೀಡಾಂಗಣಗಳನ್ನು ಪೂರ್ಣಗೊಳಿಸಲು ಸಾಕಷ್ಟು ಸಂಪನ್ಮೂಲಗಳನ್ನು ಒದಗಿಸಲು ಸಾಧ್ಯವಾಗದ ಕಾರಣ ಪೂರ್ಣಗೊಳಿಸಿರುವುದಿಲ್ಲ. ಈ ದಿಸೆಯಲ್ಲಿ ಒಟ್ಟು ಇನ್ನು 1,819 ಲಕ್ಷ ರೂಪಾಯಿಗಳು ಬೇಕಾಗುತ್ತದೆಂದು ಇವತ್ತು ಕ್ರೀಡಾಂಗಣ ಮಂತ್ರಿಗಳು ಹೇಳಿದರು. ಇದರ ಜೊತೆಯಲ್ಲಿ ಇನ್ನೊಂದು ವಿಚಾರವನ್ನು ಹೇಳುತ್ತಾರೆ. ಲೋಕಸಭಾ ಸದಸ್ಯರ ನಿಧಿಯಿಂದ ಹಣ ಪಡೆದು ಅದರಲ್ಲಿ ಈ ಕ್ರೀಡಾಂಗಣಗಳನ್ನು ಪೂರ್ತಿ ಮಾಡಬೇಕೆಂದು ಹೇಳುತ್ತಾರೆ. ಇದು ಸಾಧ್ಯವೇ ನಮ್ಮಲ್ಲಿ? ಇವತ್ತು ತಾಲ್ಲೂಕಿನಲ್ಲಿ ಇರುವ ಕ್ರೀಡಾಂಗಣಗಳನ್ನು ಪೂರ್ತಿ ಮಾಡುವುದಕ್ಕೆ ಸರ್ಕಾರ ಹಣವನ್ನು ಒದಗಿಸಿಲ್ಲ. ಇವತ್ತು ಕೇವಲ 20 ಕೋಟಿ ರೂಪಾಯಿಗಳನ್ನು ಮಾತ್ರ ಈ ಆಯವ್ಯಯದಲ್ಲಿ ಒದಗಿಸಿದರೆ ಅನೇಕ ಕ್ರೀಡಾಂಗಣಗಳು ಪೂರ್ತಿಯಾಗುತ್ತವೆ. ಅದರಲ್ಲೂ ಕೂಡ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಕ್ರೀಡಾ ಪಟುಗಳಿಗೆ ಯಾವುದೇ ರೀತಿಯಲ್ಲಿ ಸಹಾಯಕವಾಗುವಂತಹ ಕಾರ್ಯಕ್ರಮಗಳು ಇಲ್ಲ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂಥ ಕ್ರೀಡಾಪಟುಗಳಿಗೆ ಅನಾನುಕೂಲವಾಗಿರತಕ್ಕಂಥ ಕ್ರೀಡಾಂಗಣಗಳು ಇರುವುದರಿಂದ ಒಳ್ಳೆಯ ಕ್ರೀಡಾಪಟುಗಳಾಗಿ ಬೆಳೆಯುವುದಕ್ಕೆ ಅವಕಾಶ ಇಲ್ಲ. ಇವತ್ತು ಬೆಂಗಳೂರಿನಲ್ಲಿ ನಡೆಯುವಂತಹ ಶ್ರೀಮಂತ ಕ್ರೀಡೆಗಳು ಕ್ರಿಕೆಟ್ ಇರಬಹುದು, ಟೆನ್ನಿಸ್ ಇರಬಹುದು, ಇದಕ್ಕೆ ಹೆಚ್ಚು ಆಸಕ್ತಿಯನ್ನು ಕೊಟ್ಟು ಅನೇಕ ಶ್ರೀಮಂತರು ಬೆಂಬಲವನ್ನು ಕೊಡತಕ್ಕ ವಿಚಾರ ಇದೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಕ್ರೀಡಾಂಗಣಗಳನ್ನು ಪೂರ್ತಿ ಮಾಡಿ ಕ್ರೀಡೆಗಳಿಗೆ ಆಸಕ್ತಿಯನ್ನು ತೋರಿಸತಕ್ಕಂಥಾದ್ದು ಇಲ್ಲ. ಇವತ್ತು ಸರ್ಕಾರ 20 ಕೋಟಿ ರೂಪಾಯಿಗಳನ್ನು ಪೂರೈಸಿದರೆ ಇಡೀ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಎಲ್ಲಾ ತಾಲ್ಲೂಕು ಕ್ರೀಡಾಂಗಣಗಳು ಪೂರ್ತಿಯಾಗುತ್ತವೆ. ಮೊನ್ನೆ ಕ್ರಿಕೆಟ್ ಮ್ಯಾಚ್ ನಡೆಯಿತು. ನಮ್ಮ ಗ್ರಾಮಾಂತರ ಪ್ರದೇಶದ ಯಾವ ಮಕ್ಕಳೂ ಆ ಕ್ರಿಕೆಟ್ ನೋಡುವುದಕ್ಕೆ ಸಾಧ್ಯವಾಗಲಿಲ್ಲ. ರಾತ್ರೋರಾತ್ರಿ ಕ್ರಿಕೆಟ್ ಟಿಕೆಟ್ ಸೇಲ್ ಆಯಿತು, ಆದರೆ ಯಾರಿಗೂ ಕೂಡ ಟಿಕೆಟ್ ಕೊಟ್ಟಿಲ್ಲ. ಪಾಸ್‌ಗಳು ಕೊಟ್ಟಿಲ್ಲ. ನಮ್ಮ ಭಾಗದ ಜನರು ಕ್ರಿಕೆಟ್ ನೋಡಬೇಕೆಂದು ಬಂದು ಕೇಳಿದಾಗ ನಾವು ಒಂದು ಟಿಕೆಟ್

ಕೊಡಲು ಸಾಧ್ಯವಾಗಲಿಲ್ಲ. ಅದರ ಜೊತೆಗೆ ನಮ್ಮಗಳ ಬಾಯಿ ಮುಚ್ಚಿಸುವುದಕ್ಕೋಸ್ಕರ ನಮ್ಮ ಮನೆಗಳಲ್ಲಿ ಗಲಾಟೆ ಮಾಡದಿರುವುದಕೋಸ್ಕರ ನಮಗಲ್ಲಿ ಒಂದೊಂದು ಪಾಸ್ ಕೊಟ್ಟರು. ಇವತ್ತು ನಾನು ಒಂದು ಪಾಸ್ ತೆಗೆದುಕೊಂಡು ಹೋದಾಗ ನನ್ನ ಮಗ ಕೇಳುತ್ತಾನೆ, ನನ್ನ ಹೆಂಡತಿ ಕೇಳುತ್ತಾರೆ ನಾವು ಯಾರಿಗೆ ಪಾಸು ಕೊಡಬೇಕು? ಇಂತಹ ಒಂದು ಕಾರ್ಯಕ್ರಮಗಳು ಏಕೆ ಮಾಡಬೇಕು? ಇವತ್ತು ನಾವು ನಿಜವಾಗಿಯೂ ಕ್ರೀಡಾಪಟುಗಳನ್ನು ಬೆಳೆಸಬೇಕಾದರೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಕ್ರೀಡೆಗಳಿಗೆ ಇವತ್ತು ಹೆಚ್ಚು ಆಸಕ್ತಿಯನ್ನು ತೋರಿಸಬೇಕು. ನಾನು ಯಾವಾಗಲೂ ನಮ್ಮ ಯುವಜನ ಸೇವಾ ಸಚಿವರನ್ನು ಕೇಳಿದಾಗ ಆ ದುಡ್ಡು ಬರಲಿ ಕೊಡುತ್ತೇವೆ, ಎಂ.ಪಿ. ದುಡ್ಡು ಬರಲಿ ಕೊಡುತ್ತೇವೆ ಎಂದು ಹೇಳುತ್ತಾರೆ. ಇವತ್ತು ನಮಗೆ ಎಂ.ಪಿ. ಫಂಡ್‌ನಿಂದ ದುಡ್ಡು ಕೊಡುವ ಅವಶ್ಯಕತೆ ಇದೆಯೇ? ಅವರು ಕೊಡುತ್ತಾರೆಯೇ, ಅವರ ಮೇಲೆ ನಾವು ನಿಂತುಕೊಳ್ಳುವಂತಹ ಪರಿಸ್ಥಿತಿ ಬರಬಾರದು. ಇದಕ್ಕೆ ರಾಜ್ಯ ಸರ್ಕಾರವೇ ನೇರವಾಗಿ ಹಣ ಕೊಡಬೇಕು. ನಾನು ಕ್ರೀಡಾ ಮಂಡಲಿ ಅಧ್ಯಕ್ಷನಾಗಿದ್ದಾಗ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೆ. ಏಕಲವ್ಯ ಪ್ರಶಸ್ತಿಗಳು ಏನಾಯಿತು? ಕೊಳಚೆ ನಿವಾಸಿಗಳ ಕ್ರೀಡಾಕೂಟ ಏನಾಯಿತು? ಇವತ್ತು ನೀವು ಕ್ರೀಡಾ ಪಟುಗಳಿಗೆ ಯಾವ ತರಹ ಉತ್ತೇಜನ ಕೊಡುತ್ತಿದ್ದೀರಿ. ಒಲಂಪಿಕ್‌ಗೆ ಹೋದಂತಹವರಿಗೆ 5 ಲಕ್ಷ, 3 ಲಕ್ಷ ರೂಪಾಯಿಗಳನ್ನು ನಾವು ಘೋಷಣೆ ಮಾಡಿದ್ದೆವು. ಅದು ಇವತ್ತು ಎಲ್ಲಿ ಹೋಯಿತು? ಇವತ್ತು ಗೋಪಿಚಂದ್ ಅಂತಹವರಿಗೆ ಟೆನ್ನಿಸ್‌ನಲ್ಲಿ ಗೆದ್ದು ಬಂದಿದ್ದಕ್ಕೆ ಅವರಿಗೆ ನಿವೇಶನ ಇಲ್ಲಿ ಕೊಡುತ್ತಾರೆ. ಆಂಧ್ರಪ್ರದೇಶದಲ್ಲಿ ಕೊಡುತ್ತಾರೆ. ಎಲ್ಲಾ ಕಡೆ ಕೊಡುತ್ತಾರೆ. ಆದರೆ ನಮಗೆ? ಇವತ್ತು ಕರ್ನಾಟಕದಲ್ಲಿ ಅನೇಕ ಕ್ರೀಡಾಪಟುಗಳು ಇದ್ದಾರೆ. ಇವತ್ತು ಮೆಡಲ್‌ಗಳನ್ನು ಮಾರಿಕೊಂಡು ಭಿಕ್ಷಾಟನೆ ಮಾಡುವಂತಹ ಮಟ್ಟಕ್ಕೆ ಇವತ್ತು ಕ್ರೀಡಾಪಟುಗಳು ಹೋಗಿದ್ದಾರೆ. ಇದನ್ನು ಸರಿಮಾಡಲು ನಮ್ಮ ಮುಖ್ಯಮಂತ್ರಿಗಳು ನಿಜವಾಗಿಯೂ ಅವರಿಗೆ ಆಸಕ್ತಿ ಇದೆ. ಅವರ ಗಮನಕ್ಕೆ ಹೋಗಿಲ್ಲ. ಕ್ರೀಡಾಪಟುಗಳ ಬಗ್ಗೆ ಅವರ ಗಮನಕ್ಕೆ ತಂದು ಹೆಚ್ಚು ಹಣವನ್ನು ನಮ್ಮ ಯುವಜನ ಸೇವೆಗೆ ಕೊಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್: ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಮತ್ತೆ ನಾಳೆ ಬೆಳಿಗ್ಗೆ 9-30 ಗಂಟೆಗೆ ಸಭೆ ಸಮಾವೇಶಗೊಳ್ಳುವುದು. ಶ್ರೀ ಕೆ.ಬಿ. ಮಲ್ಲಿಕಾರ್ಜುನ್, ಕರಡಿ ಸಂಗಣ್ಣನವರು, ಶ್ರೀ ವಿ.ಎಚ್. ಪೂಜಾರ್ ಅವರು ಹಾಗೂ ಶ್ರೀ ಬಸವರಾಜು ಅವರು ನಾಳೆ ಮಾತನಾಡುತ್ತಾರೆ. ನಾಳೆ ಬೆಳಿಗ್ಗೆ 10-30 ಗಂಟೆಗೆ ಸರ್ಕಾರದಿಂದ ಉತ್ತರ.

(ಸದನವು ರಾತ್ರಿ 8-55 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 30ನೇ ಮಾರ್ಚ್ 2001ರ ಶುಕ್ರವಾರ ಬೆಳಿಗ್ಗೆ 9-30 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.